ಕುಂ, ವೀರಭದ್ರಪ್ಪ ಅವರ
ಆಯ್ದ ಕಥೆಗಳ ವಸ್ತು ಮತ್ತು ಉದ್ದೇಶ

ಈ ನಿಬಂಧವನ್ನು ಕನ್ನಡ ವಿಶ್ವವಿದ್ಯಾನಿಲಯಕ್ಕೆ
ಎಂ.ಫಿಲ್ (ಕನ್ನಡ) ಪದವಿಗಾಗಿ ಸಲ್ಲಿಸಲಾಗಿದೆ.

ಸಂಶೋಧಕ

ರವಿ ಎಚ್.

ನೋಂದಣಿ ಸಂಖ್ಯೆ - KRSMKS-00360

ಮಾರ್ಗದರ್ಶಕರು

ಡಾ. ಪಿ.ಕೆ. ರಾಜಶೇಖರ

ಕರ್ನಾಟಕ ಸಂಘ (ರಿ), ಮಂಡ್ಯ

ಎಂ.ಎಲ್. ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರ

(ಕನ್ನಡ ವಿ.ವಿ. ಹಂಪಿಯಿಂದ ಮಾನ್ಯತೆ ಪಡೆದಿದೆ)

ಮಂಡ್ಯ

೨೦೦೮-೦೯

ಕುಂ, ವೀರಭದ್ರಪ್ಪ ಅವರ ಆಯ್ದ ಕಥೆಗಳ ವಸ್ತು ಮತ್ತು ಉದ್ದೇಶ

ಈ ನಿಬಂಧವನ್ನು ಕನ್ನಡ ವಿಶ್ವವಿದ್ಯಾನಿಲಯಕ್ಕೆ
ಎಂ.ಫಿಲ್ (ಕನ್ನಡ) ಪದವಿಗಾಗಿ ಸಲ್ಲಿಸಲಾಗಿದೆ.

ಸಂಶೋಧಕ

ರವಿ ಎನ್.

ನೋಂದಣಿ ಸಂಖ್ಯೆ - KRSMKS-00360

ಮಾರ್ಗದರ್ಶಕರು

ಡಾ. ಪಿ.ಕೆ. ರಾಜಶೇಖರ

ಕರ್ನಾಟಕ ಸಂಘ (ರಿ), ಮಂಡ್ಯ

ಎಂ.ಎಲ್. ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರ
(ಕನ್ನಡ ವಿ.ವಿ. ಹಂಪಿಯಿಂದ ಮಾನ್ಯತೆ ಪಡೆದಿದೆ)
ಮಂಡ್ಯ
೨೦೦೮-೦೯

ಧೃಢೀಕರಣ ಪತ್ರ

"ಕುಂ, ವೀರಭದ್ರಪ್ಪ ಅವರ ಆಯ್ದ ಕಥೆಗಳ ವಸ್ತು ಮತ್ತು ಉದ್ದೇಶ" ಎಂಬ ವಿಷಯದ ಮೇಲೆ ಈ ನಿಬಂಧವನ್ನು ಕನ್ನಡ ವಿಶ್ವವಿದ್ಯಾನಿಲಯ ಎಂ.ಫಿಲ್ (ಕನ್ನಡ) ಪದವಿಗೆ ವಿದ್ಯಾರ್ಥಿಯಾದ ರವಿ ಎನ್.ರವರು ನನ್ನ ಮಾರ್ಗದರ್ಶನ ಹಾಗೂ ಮೇಲ್ವಿಚಾರಣೆಯಲ್ಲಿ ಬರೆದು ಒಪ್ಪಿಸುತ್ತಿದ್ದಾರೆಂದು, ಹಾಗೂ ಈ ವಿಷಯದ ಬಗ್ಗೆ ಬೇರೆ ಯಾರಿಗೂ ನಾನು ಮಾರ್ಗದರ್ಶನ ಮಾಡಿರುವುದಿಲ್ಲ ಎಂದು ಧೃಢೀಕರಿಸುತ್ತೇನೆ.

ಮಾರ್ಗದರ್ಶಕರ ಸಹಿ

ದಿನಾಂಕ : 28-08-2008

ಸ್ಥಳ : ಮಂಡ್ಯ.

ಪಿ. ಕೆ. ರಾಜಶೇಖರ

(ಡಾ. ಪಿ. ಕೆ. ರಾಜಶೇಖರ)

ವಿಶ್ರಾಂತ ಪ್ರಾಧ್ಯಾಪಕರು

ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ,

ಮಾನಸ ಗಂಗೋತ್ರಿ, ಮೈಸೂರು

ಪ್ರಮಾಣ ಪತ್ರ

"ಕುಂ, ವೀರಭದ್ರಪ್ಪ ಅವರ ಆಯ್ದ ಕಥೆಗಳ ವಸ್ತು ಮತ್ತು ಉದ್ದೇಶ" ಎಂಬ ವಿಷಯದ ಮೇಲೆ ಈ ನಿಬಂಧವನ್ನು **ಡಾ. ಪಿ. ಕೆ. ರಾಜಶೇಖರ** ರವರ ಮಾರ್ಗದರ್ಶನದಲ್ಲಿ ನನ್ನ ಸಂಶೋಧನೆಯ ಫಲವಾಗಿ ರಚಿಸಲ್ಪಟ್ಟು, ಕನ್ನಡ ವಿಶ್ವವಿದ್ಯಾನಿಲಯ ಎಂ.ಫಿಲ್ (ಕನ್ನಡ) ಪದವಿಗೆ ಸಲ್ಲಿಸುತ್ತಿದ್ದೇನೆ. ಈ ನಿಬಂಧವನ್ನು ಹಿಂದಿನ ವರ್ಷಗಳಲ್ಲಿ ಯಾರು ಇಲ್ಲಿಯವರೆಗೆ ಯಾವುದೇ ವಿಶ್ವವಿದ್ಯಾನಿಲಯಕ್ಕೆ ಒಪ್ಪಿಸಿಲ್ಲವೆಂದು ನಾನು ಇಲ್ಲಿ ಪ್ರಮಾಣೀಕರಿಸುತ್ತೀದ್ದೇನೆ.

ದಿನಾಂಕ : ೨೬-೦೬-೨೦೦೬

ಸ್ಥಳ : ಮಂಡ್ಯ

(ರವಿ. ಎನ್.)

ಎಂ.ಫಿಲ್ (ಕನ್ನಡ) ವಿದ್ಯಾರ್ಥಿ

ನೋಂದಣಿ ಸಂಖ್ಯೆ - KRSMKS-00360

ಕುಂ, ವೀರಭದ್ರಪ್ಪ ಅವರ
ಆಯ್ದ ಕಥೆಗಳ ವಸ್ತು ಮತ್ತು ಉದ್ದೇಶ

ಪರಿವಿಡಿ

ಅಧ್ಯಾಯ 1

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಪ್ರಾಚೀನ ಕನ್ನಡ ಸಾಹಿತ್ಯವನ್ನು ಗಮನಿಸಿದಾಗ ಸಾಹಿತ್ಯದ ರೂಪ ಪ್ರಕಾರಗಳಲ್ಲಿ ಅಂತಹ ವೈವಿಧ್ಯತೆ ಕಂಡುಬರುವುದಿಲ್ಲ. ಚಂಪೂ, ರಗಳೆ ಅಪರೂಪಕ್ಕೆ ಒಂದೆರಡು ಗದ್ಯ ಕೃತಿಗಳು. ಮಧ್ಯಕಾಲದಲ್ಲಿ ವಚನ ಕೀರ್ತನೆಗಳು ಮತ್ತು ಷಟ್ಪದಿಗಳು, ಹೊಸಗನ್ನಡದಲ್ಲಿ ಕನ್ನಡ ಸಾಹಿತ್ಯ ಬಹುಸಮೃದ್ಧವಾಗಿ ಬೆಳೆಯಿತು.

ವಿಶೇಷವಾಗಿ ಸಣ್ಣಕಥಾ ಸಾಹಿತ್ಯವು ಭದ್ರಬುನಾದಿ ಹಾಕಿಕೊಂಡು ಪ್ರಸ್ತುತ ಹೆಮ್ಮರವಾಗಿ ಬೆಳೆದು ನಿಂತಿದೆ ಬೆಳೆಯುತ್ತಿದೆ. ಕನ್ನಡದ ಕಥನ ಪರಂಪರೆಗೆ ಮೊದಲ ಗದ್ಯಕೃತಿ ವಡ್ಡಾರಾಧನೆಯೇ ಮುನ್ನುಡಿಯಾದರೂ ಒಂದು ಪ್ರಕಾರವಾಗಿ ಬೆಳೆದುದು ಹೊಸಗನ್ನಡದಲ್ಲಿ, ವಿಶೇಷವಾಗಿ ಪಾಶ್ಚಾತ್ಯಮಾದರಿಗಳ ಪ್ರಭಾವದಿಂದ ಎನ್ನಲೇಬೇಕು. ೧೯೦೦ ರಲ್ಲಿ ಸುವಾಸಿನಿ ಮಾಸಪತ್ರಿಕೆಯಲ್ಲಿ ಪಂಜೆ ಮಂಗೇಶರಾಯರ 'ನನ್ನ ಚಿಕ್ಕ ತಾಯಿ', 'ನನ್ನ ಚಿಕ್ಕ ತಂದೆ' ಎಂಬ ಎರಡು ಕಥೆಗಳು ಪ್ರಕಟವಾಗುವ ಮೂಲಕ ಹೊಸಗನ್ನಡ ಸಾಹಿತ್ಯದ ಕಥಾಲೋಕ ಅನಾವರಣಗೊಂಡಿತು.

ನವೋದಯ ಕಾಲಘಟ್ಟದ ಲೇಖಕರು, ಇರುವ ಸಮಾಜದ ಲೋಪದೋಷಗಳನ್ನು, ಅದರೊಳಗೆ ಇರುವ ಮಾನವೀಯ ಮುಖಗಳನ್ನು, ಒಂದು ವ್ಯವಸ್ಥಿತವಾದ ಸಮಾಜದ ಮಾನವನ ಸುಖ-ದುಃಖ, ದೌರ್ಬಲ್ಯ ಹಾಗೂ ಅವನ ಆಂತರಿಕ ಸಾಮರ್ಥ್ಯ, ಪ್ರಕೃತಿ, ಆದರ್ಶ ಮುಂತಾದ ವಿಷಯಗಳನ್ನು ಪ್ರಧಾನವಾಗಿ ತಮ್ಮ ಕೃತಿಯಲ್ಲಿ ಪ್ರತಿಪಾದಿಸಿದರು. ಈ ಎಲ್ಲಾ ಲೇಖಕರಿಗೆ ರಾಷ್ಟ್ರೀಯ ಪರಿಕಲ್ಪನೆಯೊಂದು ಜಾಗೃತವಾಗಿಯೇ ಇದ್ದು; ರಾಷ್ಟ್ರೀಕರಣ, ಕರ್ನಾಟಕ ಏಕೀಕರಣ ಅವರ

ಬಹುದೊಡ್ಡ ಕನಸಾಗಿತ್ತು. ಇವರ ಕನಸನ್ನು ಸಾಹಿತ್ಯದ ಮುಖೇನ ಜನಮನಕ್ಕೆ ಬಿತ್ತುವ ಜಾಗೃತಗೊಳಿಸುವ ಕಾರ್ಯಕ್ಕೆ ಕಾರಣರಾದರು.

ನವ್ಯ ಲೇಖಕರಿಗೆ ಸಮಾಜಕ್ಕಿಂತ ವ್ಯಕ್ತಿಯ ವೈಯಕ್ತಿಕ ಸಮಸ್ಯೆಗಳು ದೊಡ್ಡದಾಗಿ ಕಂಡವು. ಈ ಎಲ್ಲಾ ಲೇಖಕರ ಸಾಹಿತ್ಯದ ವಸ್ತು, ಭಾಷೆ, ತಂತ್ರವೆಲ್ಲವು ಪಶ್ಚಿಮದ ಮೂಲದಿಂದಲೇ ರೂಪಿತವಾಗ ತೊಡಗಿದವು. ರಾಷ್ಟ್ರದ ಬಹುತೇಕ ಲೇಖಕರು ಇಂಗ್ಲೀಷ್ ಅಧ್ಯಾಪಕರಾಗಿದ್ದುದು ಗಮನಿಸಬೇಕಾದ ಅಂಶ. ಒಟ್ಟು ಒಂದು ವ್ಯವಸ್ಥೆಯನ್ನು ವಿರೋಧಿಸುವ ಮಟ್ಟಿಗೆ ಈ ಪ್ರವೃತ್ತಿ ಮುಂದುವರಿಯಿತು. ಈ ಲೇಖಕರಿಗೆ ಧೋರಣೆಗಿಂತ ಸಾಹಿತ್ಯದ ಅಭಿವ್ಯಕ್ತಿ ವಿಧಾನ ಪ್ರಮುಖವಾಗಿ ಕಾಣತೊಡಗಿತು.

ಮುಂದೆ ಬಂದ ದಲಿತ ಬಂಡಾಯ ಚಳವಳಿಗೆ ಮಣ್ಣಿನ ವಾಸನೆ ಮುಖ್ಯವಾಯಿತು. ನಿಂತ ನೆಲದಲ್ಲೇ, ನಿಂತ ನೆಲೆಯನ್ನು ನೋಡತೊಡಗಿದರು. ಈ ಎಲ್ಲಾ ಲೇಖಕರಿಗೆ ವಿದೇಶದ ಯಾವುದೇ ತತ್ತ್ವ ಪರಿಹಾರವಾಗಿ ಕಾಣಲಿಲ್ಲ. ಶೋಷಣೆಯೆಲ್ಲವನ್ನು ಅದರ ಒಟ್ಟು ಚರಿತ್ರೆಯೊಡನೆ ಕಟ್ಟಿಕೊಡುವ, ಆ ಮೂಲಕ ಶೋಷಕರ ವಿರುದ್ಧ ಪ್ರತಿಭಟಿಸುವ, ಶೋಷಿತರಿಗೆ ಜಾಗೃತಿ ಮೂಡಿಸುವ ಕೆಲಸ ಮಾಡಿದರು. ಆದ್ದರಿಂದಲೇ ದಲಿತ ಬಂಡಾಯವನ್ನು ಒಂದು ಸಾಹಿತ್ಯ ಪ್ರಕಾರ ಎನ್ನುವುದಕ್ಕಿಂತ ಚಳವಳಿ ಎಂದು ಕರೆಯುವುದು.

ಇಂತಹ ಬಂಡಾಯ ಸಾಹಿತ್ಯದ ನೆಲೆಯಿಂದ ಕಥಾಸಾಹಿತ್ಯ ಪ್ರವೇಶಿಸಿದರು ಕುಂವೀ. ಇವರನ್ನು ಬಂಡಾಯ ಸಾಹಿತ್ಯಕ್ಕೆ ಸೀಮಿತಗೊಳಿಸುವುದು ಸಲ್ಲದು. ಅದನ್ನು ಮೀರಿದ ಭಯಂಕರ ವರ್ಣನಾ ಸಾಮರ್ಥ್ಯದ ದೈತ್ಯ ಪ್ರತಿಭೆ ಕುಂ, ವೀರಭದ್ರಪ್ಪ.

ಸಮಾಜದ ನಿರ್ಲಕ್ಷಿತ ಜನರ ಜೀವನವನ್ನು ಅವರಷ್ಟು ಸಮೀಪದಿಂದ ಹಾಗೂ ಆಳವಾಗಿ ನೋಡಿದವರು ಸಮಕಾಲೀನ ಕನ್ನಡ ಸಾಹಿತ್ಯದಲ್ಲಿ ವಿರಳವೆಂದೇ ಹೇಳಬೇಕು. ದಟ್ಟವಾದ ಅನುಭವ,

ಸೂಕ್ಷ್ಮ ವಿವರಗಳಿಂದ ಕೂಡಿದ ನಿರೂಪಣೆ, ಅದ್ಭುತ ಕಲ್ಪನೆ, ಭಾಷೆಯ ಮೂಲಕವಾಗಿಯೇ ಪಾತ್ರಗಳನ್ನು ಜೀವಂತಗೊಳಿಸುವ ಕಲೆ ಕುಂ, ವೀರಭದ್ರಪ್ಪ. ಅವರನ್ನು ಉಳಿದೆಲ್ಲಾ ಕಥೆಗಾರರಿಗಿಂತ ವಿಶೇಷವಾಗಿರಿಸಿದೆ. ಪರಿಚಿತ ನೆಲೆಯಲ್ಲಷ್ಟೇ ಅಲ್ಲದೆ, ಅಪರಿಚಿತ ಜನರ ಬದುಕಿನ ವಿಭಿನ್ನ ಆಯಾಮಗಳನ್ನು ಅವರ ಕಥೆಗಳಲ್ಲಿ ಅನಾವರಣಗೊಳಿಸುತ್ತಾರೆ. ನಮ್ಮನ್ನು ಬೆಚ್ಚಿ ಬೀಳಿಸುವ ಕೌರ್‍ಯ ಶೋಷಣೆಯನ್ನು ತಮ್ಮದೇ ವಿಶಿಷ್ಟ ಶೈಲಿಯಲ್ಲಿ ಚಿತ್ರಿಸುತ್ತಾರೆ. ಅವರ ಅನೇಕ ಕಥೆಗಳ ಶೀರ್ಷಿಕೆ ಮೇಲುನೋಟಕ್ಕೆ ವಿನೋದದಂತೆ ಕಾಣುತ್ತದೆ. ವಿನೋದ ಶೈಲಿಯಲ್ಲೇ ಗಂಭೀರ ಸಮಸ್ಯೆಯನ್ನು ಬಿಡಿಸುತ್ತಾ ಹೋಗುವ ವಿಭಿನ್ನ ಶೈಲಿ ಇವರದು. ಕನ್ನಡ ಕಥಾ ಸಾಹಿತ್ಯದ ವಿಶಿಷ್ಟ ಸ್ಥಾನ ತುಂಬುವವರು ಕುಂ, ವೀರಭದ್ರಪ್ಪ. ಈ ಹಿನ್ನೆಲೆಯಲ್ಲಿ ಕುಂವೀ ಅವರ ಕೆಲವು ಕಥೆಗಳ ವಸ್ತು ಮತ್ತು ಉದ್ದೇಶಗಳನ್ನು ಸ್ಥೂಲವಾಗಿ ಅಧ್ಯಯನ ಮಾಡಲು ಉದ್ದೇಶಿಸಲಾಗಿದೆ.

ಕುಂವೀ ಅವರ ಬಹುತೇಕ ಕಥೆಗಳ ನಾಯಕರು ಶೋಷಿತರು. ಅವರನ್ನು ಕುರಿತು ಬರೆಯುವಾಗ ಅವರ ಧೋರಣೆ ಮತ್ತು ಬರವಣಿಗೆಯಲ್ಲಿ ಅಂತಹ ಭಿನ್ನತೆಯನ್ನು ರೂಪಿಸುವುದಿಲ್ಲ. ಕಾರಣ ಪ್ರಾದೇಶಿಕ ಹಿನ್ನೆಲೆಯಲ್ಲಿ ಅಲ್ಲಿನ ಜನಸಾಮಾನ್ಯರ ಅಸಲಿ ಜೀವನವನ್ನು ದಾಖಲಿಸುತ್ತಾರೆ. ಅಲ್ಲದೆ ವ್ಯಕ್ತಿ ಕೇಂದ್ರಿತ, ವರ್ಣ ಜಾತಿ ಸಂಘರ್ಷ, ಕೌರ್‍ಯ, ವರ್ಣನೆಯೇ ಪ್ರಧಾನವಾದ ವಿನೋಧ ಶೈಲಿಯ ಕಥೆಗಳು ಕುಂವೀ ಅವರದು. ಈ ದೃಷ್ಟಿಯಿಂದ ಕುಂವೀ ಕಥೆಗಳ ಕಥಾ ಜಗತ್ತನ್ನು ಸ್ಥೂಲವಾಗಿ ಅಧ್ಯಯನಮಾಡಲು ಉದ್ದೇಶಿಸಲಾಗಿದೆ.

ಕುಂ, ವೀರಭದ್ರಪ್ಪ ಅಭಿವ್ಯಕ್ತಿ ವಿಧಾನ ವಿಶಿಷ್ಟವಾದುದು. ಪ್ರಾದೇಶಿಕ ಭಾಷೆಯನ್ನು ಇವರಷ್ಟು ಸಶಕ್ತವಾಗಿ ಬಳಸಿಕೊಂಡವರು ಕನ್ನಡ ಭಾಷಾ ಸಾಹಿತ್ಯದಲ್ಲಿ ವಿರಳ. ಭಾಷೆ ಕೇವಲ ತಾಂತ್ರಿಕ ಕೌಶಲ್ಯವಾಗಿ ಬಿಡುವ ಅಪಾಯವನ್ನು ಮೀರಿ ಅವು ತಳವರ್ಗದವರ ಶೋಷಿತ ಸ್ಥಿತಿಯ ಅನಂತವನ್ನು ತೆರೆದು ತೋರಿಸುವಂತೆ ಮಾಡಿದ ಕೀರ್ತಿ ಕುಂ, ವೀರಭದ್ರಪ್ಪ ಅವರದು. ಭಾಷೆಯ ಎಲ್ಲಾ ಆಯಾಮಗಳನ್ನು ಪರಿಪೂರ್ಣವಾಗಿ ಬಳಸಿಕೊಳ್ಳುವ ವಾಂಛೆ ಅವರದು. ಈ ಹಿನ್ನೆಲೆಯಲ್ಲಿ ಕುಂವೀ

ಕಥಾಲೋಕದ ಭಾಷಾವೈವಿಧ್ಯವನ್ನು ಸ್ಥೂಲವಾಗಿ ಗಮನಿಸುವುದು ಮತ್ತೊಂದು ಉದ್ದೇಶವಾಗಿದೆ.

ಈ ಮೇಲಿನ ಉದ್ದೇಶಗಳಿಂದ ನಿಬಂಧದಲ್ಲಿ ಕೆಲವು ಅಧ್ಯಾಯಗಳನ್ನು ಮಾಡಿಕೊಳ್ಳಲಾಗಿದೆ. ಲೇಖಕರ ಕೃತಿಯನ್ನು ಅಧ್ಯಯನ ಮಾಡುವಾಗ ಅವರ ವೈಯಕ್ತಿಕ ವಿಚಾರವನ್ನು ತಿಳಿದುಕೊಳ್ಳಬೇಕಾಗಿರುವುದು ಅವಶ್ಯ. ಆದುದರಿಂದ ೨ನೇ ಅಧ್ಯಾಯದಲ್ಲಿ ಲೇಖಕರ ಪರಿಚಯವನ್ನು ಮಾಡಿಕೊಡಲಾಗಿದೆ.

ಮೂರನೇಯ ಅಧ್ಯಾಯದಲ್ಲಿ ಹೊಸಗನ್ನಡ ಸಾಹಿತ್ಯದಲ್ಲಿ ಸಣ್ಣಕಥೆಗಳ ಉಗಮ ಮತ್ತು ಬೆಳವಣಿಗೆಯನ್ನು ವಿವಿಧ ಹಂತಗಳಲ್ಲಿ ತಿಳಿಸಲಾಗಿದೆ.

ನಾಲ್ಕನೇಯ ಅಧ್ಯಾಯದಲ್ಲಿ ಕಥಾಸಾರಾಂಶದ ಹಿನ್ನೆಲೆಯಲ್ಲಿ ಕೆಲವು ಆಯ್ದ ಕಥೆಗಳ ವಸ್ತು ವೈವಿಧ್ಯತೆಯನ್ನು ಸಂಕ್ಷಿಪ್ತವಾಗಿ ಅವಲೋಕಿಸಲಾಗುವುದು.

ಐದನೇಯ ಅಧ್ಯಾಯದಲ್ಲಿ ಕುಂ, ವೀರಭದ್ರಪ್ಪ ಕಥೆಗಳ ಧ್ಯೇಯಧೋರಣೆಗಳನ್ನು ಚರ್ಚಿಸಲಾಗುತ್ತದೆ. ಕುಂವೀ ಅವರು ತಮ್ಮ ಕಥೆಗಳಲ್ಲಿ ಪ್ರಮುಖ ಅಂಶಗಳನ್ನು ಅಭಿವ್ಯಕ್ತಿಸುವಾಗ ತಮ್ಮದೇ ಆದ ಪಾತ್ರ, ಭಾಷೆ, ಸನ್ನಿವೇಶಗಳನ್ನು ಸೃಜಿಸುವುದರ ಮೂಲಕ ಕಥೆಯ ಮೂಲ ಆಶಯ ಸಹೃದಯವನ್ನು ಮುಟ್ಟುವ ಹಾಗೆ ಅಭಿವ್ಯಕ್ತಿಸಿದ್ದಾರೆ. ಅವರ ಜಾನಪದೀಯ ಶೈಲಿ, ಪ್ರಾದೇಶಿಕ ಭಾಷಾ ಸೊಗಡಿನ ಸಮರ್ಥ ಅಭಿವ್ಯಕ್ತಿ ಮನೋಜ್ಞವಾಗಿದೆ.

ಒಟ್ಟಾರೆ ಮೇಲೆ ಹೇಳಿದ ಎಲ್ಲಾ ಅಂಶಗಳ ಭಿತ್ತಿಯಲ್ಲಿ ಕುಂ.ವೀ. ಅವರ ಆಯ್ದ ಕಥೆಗಳ ವಸ್ತು ಮತ್ತು ಉದ್ದೇಶವನ್ನು ಈ ಸಂಬಂಧದಲ್ಲಿ ಪ್ರಮುಖವಾಗಿ ಅಧ್ಯಯನ ಮಾಡಲಾಗಿದೆ.

ಅಧ್ಯಾಯ 2

ಕುಂವೀ ಅವರ ಪರಿಚಯ

"ಪ್ರತಿಯೊಂದು ಕತೆಯೊಳಗೆ ನಾನು ಕಂಡುಂಡ ಬದುಕು, ಎದುರಿಸಿದ ವಾಸ್ತವ ಇದೆ. ಗೆಳೆಯರಿಲ್ಲದೆ, ಸಂವಹನವಿಲ್ಲದೆ ಆಂಧ್ರ ಪ್ರದೇಶದ ಕುಗ್ರಾಮಗಳಲ್ಲಿ ಕಳೆದಿಪ್ಪತ್ತು ವರ್ಷಗಳಿಂದ ಮಾಸ್ತರಿಕೆ ನವುಕರಿ ಹಿಡಿದು ಬದುಕುತ್ತಿರುವ ನಾನು ಕಥೆ, ಕಾದಂಬರಿ ಬರೆಯುವ ಮೂಲಕ ಅಂತರಂಗದ ಸ್ವಾಸ್ಥ್ಯ ಕಾಪಾಡಿಕೊಂಡು ಬಂದಿರುವೆನು"[೧]. ಎನ್ನುವ ಕುಂವೀ, ಮಾಸ್ತರಿಕೆಯನ್ನು ರಾಷ್ಟ್ರಪತಿ ಹುದ್ದೆಗಿಂತ ಶ್ರೇಷ್ಠವೆಂದು ಭಾವಿಸಿದವರು.

ವೃತ್ತಿಯ ಬದ್ಧತೆಯನ್ನು ಪ್ರವೃತ್ತಿಗೂ ವಿಸ್ತರಿಸಿದವರು. ತನ್ನದೇ ಆದ ವಿಶಿಷ್ಟ ಭಾಷೆ, ಶೈಲಿ, ವಸ್ತು ಮತ್ತು ಅನುಭವದ ಹೂರಣವಾಗಿ ತಮ್ಮನ್ನು ತೊಡಗಿಸಿಕೊಂಡ ಕುಂಬಾರ ವೀರಭದ್ರಪ್ಪ ಅವರು 'ಕುಂವೀ' ಎಂದೇ ಸಾಹಿತ್ಯ ಲೋಕದಲ್ಲಿ ಪರಿಚಿತರು. ಎಪ್ಪತ್ತರ ದಶಕದಲ್ಲಿ ಉಂಟಾದ ಸಾಹಿತ್ಯಿಕ, ರಾಜಕೀಯ, ಸಾಂಸ್ಕೃತಿಕ ಸ್ಥಿತ್ಯಂತರಗಳ ಸಂದರ್ಭದಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವುದರೊಡನೆ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಗುರುತಿಸಿಕೊಂಡವರು.

ಕುಂವೀ ಅವರು ಹಾಲಪ್ಪ ಹಾಗೂ ಕೊಟ್ರಮ್ಮ ದಂಪತಿಗಳಿಗೆ ಮಗನಾಗಿ ಅಕ್ಟೋಬರ್ ೧, ೧೯೫೩ ರಂದು ತಾಯಿಯ ತವರೂರಾದ ಬಳ್ಳಾರಿ ಜಿಲ್ಲೆಯ ಕೊಟ್ಟೂರು ಬಳಿಯ ಕೋಡಿಹಳ್ಳಿಯಲ್ಲಿ ಜನಿಸಿದರು. ತಂದೆ ಹಾಲಪ್ಪ ಬಳ್ಳಾರಿ ಜಿಲ್ಲೆಯ ಶಿರಗುಪ್ಪ ತಾಲ್ಲೂಕಿನ ತೆಕ್ಕಲಕೋಟೆಯವರು. ಇವರಿಗೆ ಒಟ್ಟು ಆರು ಜನ ಮಕ್ಕಳು. ನಾಲ್ಕು ಗಂಡು - ವೀರಣ್ಣ, ವೀರಭದ್ರಪ್ಪ, ಶರಭಣ್ಣ,

ಶಿವಮೂರ್ತಿ ಹಾಗೂ ಎರಡು ಹೆಣ್ಣು - ರುದ್ರಮ್ಮ, ಮಹಾದೇವಿ. ಇವರಲ್ಲಿ ವೀರಣ್ಣ ಕುಡಿತದ ಕಾರಣದಿಂದ ತೀರಿಕೊಂಡರು. ಶರಭಣ್ಣ ಲಾರಿ ಡ್ರೈವರ್ ಆಗಿದ್ದರೆ, ಶಿವಮೂರ್ತಿ ಕೃಷಿಕರಾಗಿ ಬದುಕು ನಡೆಸುತ್ತಿದ್ದಾರೆ. ಇಬ್ಬರು ಸಹೋದರಿಯರು ಗೃಹಿಣಿಯರಾಗಿದ್ದಾರೆ. ಇವರು ಕುಟುಂಬದ ಪ್ರಮುಖ ವೃತ್ತಿ ಕುಂಬಾರಿಕೆಯಾಗಿತ್ತು.

ಕುಂವೀಅವರ ಮೊದಲ ಹೆಸರು ಕೆ. ಸೋಮಶೇಖರ. ಅನಂತರ ಅವರ ತಂದೆಯವರು ಎರಡನೇ ತರಗತಿಗೆ ಸೇರಿಸುವಾಗ ವೀರಭದ್ರಪ್ಪ ಎಂದು ದಾಖಲಿಸಿದರು. ಬಡತನದ ಕಾರಣದಿಂದ ಕುಂವೀ ಅವರು ೧೦ನೇ ತರಗತಿಯವರೆಗೆ ಮಾತ್ರ ಓದಲು ಸಾಧ್ಯವಾಯಿತು. ವಿದ್ಯಾಭ್ಯಾಸದ ಸಂದರ್ಭದಲ್ಲಿ ಚುರುಕಿನ ವಿದ್ಯಾರ್ಥಿಯಾಗಿದ್ದರು. ಅದಾಗಲೇ ಕಥೆಗಳನ್ನು ರಮ್ಯಾದ್ಭುತವಾಗಿ ಕಟ್ಟುವ ಕಲೆ ತಮ್ಮದಾಗಿಸಿಕೊಂಡಿದ್ದ ಕುಂವೀ ಕ್ರಮೇಣ ಕಾಲೇಜು ದಿನಗಳಲ್ಲಿ ಅವರ ಸಾಹಿತ್ಯಾಸಕ್ತಿ ಇಮ್ಮಡಿ ನೂರ್ಮಡಿಯಾಗಿ ಬೆಳೆಯಿತು.

ಕುಂವೀ ಅವರು ಪ್ರಾಥಮಿಕ ವಿದ್ಯಾಭ್ಯಾಸವನ್ನು ೧೯೫೯ರಲ್ಲಿ, ಮಾಧ್ಯಮಿಕ ಶಿಕ್ಷಣವನ್ನು ೧೯೬೪ ರಲ್ಲಿ, ಹಾಗೂ ಪ್ರೌಢಶಾಲೆ ಶಿಕ್ಷಣವನ್ನು ೧೯೮೮ರಲ್ಲಿ ಕೊಟ್ಟೂರಿನಲ್ಲಿ ಮುಗಿಸಿದರು. ಶಾಲಾ ಓದಿನ ದಿನಗಳಲ್ಲಿ ತುಂಬಾ ಚುರುಕಾಗಿದ್ದ ಕುಂವೀ ಅವರನ್ನು ಬಾಲ್ಯದ ದಿನಗಳಲ್ಲಿ ಹಸಿವು ಹೆಚ್ಚು ಕಾಡತೊಡಗಿತು.

ಅವರೇ ಸ್ಮರಿಸಿಕೊಳ್ಳುವಂತೆ "ಶಾಲೆಯ ದಿನಗಳಲ್ಲೇ ಖಾಲಿಹೊಟ್ಟೆಯಲ್ಲಿರುವ ನಾನು, ಸದ್ಯದ ಕ್ಷಣ ಬದುಕಿದ್ದರೆ ಸಾಕೆಂದು ಹಪಹಪಿಸುತ್ತಿದ್ದ ನಾನು, ತರಗತಿಗಳಿಗೆ ಚಕ್ಕರ್ ಹಾಕಿ ಸವತೇಕಾಯಿ, ಕಬ್ಬು ಹುಡುಕಿಕೊಂಡು ಹೊಲಗದ್ದೆಗಳನ್ನುವ ಅಲೆಯ ತೊಡಗಿದೆ. ತಲೆ ಚಿಟ್ ಹಿಡಿಯುತ್ತಿದ್ದ ಪಠ್ಯಪುಸ್ತಕಗಳ ಬದಲಿಗೆ ಕಥೆ, ಕಾದಂಬರಿಗಳ ಆಸರೆ ಪಡೆಯಲಾರಂಭಿಸಿದೆ. ಮುಜುಗರ, ಸಂಕೋಚ, ನಾಚಿಕೆಗಳ ತವರಾದೆ, ಎಸ್ಸೆಸ್ಸೆಲ್ಸಿಯನ್ನು ಪಾಸು ಮಾಡಿದ್ದೆ ದೊಡ್ಡ ಪವಾಡ"[೨] ಎಂದು ಬರೆಯುತ್ತಾರೆ.

ಕುಂ.ವೀ. ಏಳನೇ ತರಗತಿಯಲ್ಲಿ ಉತ್ತಮ ಅಂಕಗಳನ್ನು ಪಡೆದು ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾದಾಗ ಅವರ ತಂದೆ ಸಂತೋಷವನ್ನು ಹಂಚಿಕೊಳ್ಳಲು ಕೇರಿಯ ಜನರಿಗೆಲ್ಲಾ ಹೋಳಿಗೆ ಊಟ ಹಾಕಿಸಿದ್ದರು. ಆದರೆ ಕುಂವೀ ಎಸ್ಸೆಸ್ಸೆಲ್ಸಿ ಓದುವ ಸಮಯಕ್ಕೆ ಒಂದು ಹೊತ್ತಿನ ಊಟಕ್ಕೂ ಒದ್ದಾಡಬೇಕಾದ ಪರಿಸ್ಥಿತಿಗೆ ತಲುಪಿದ್ದರು. ಇಂತಹ ಕಷ್ಟದ ನಡುವೆ ಕುಂವೀ ಎಸ್ಸೆಸ್ಸೆಲ್ಸಿ ಉತ್ತೀರ್ಣರಾದ ನಂತರ ಮನೆಯನ್ನು ನಿಭಾಯಿಸಲಿಕ್ಕಾಗಿ ಉದ್ಯೋಗವನ್ನು ಅರಸುವುದು ಅನಿವಾರ್ಯವಾಯಿತು. ಉದ್ಯೋಗದ ಬೆನ್ನುಹತ್ತಿ ಸುತ್ತಾಡಿದ ಕಾರಣ ಕುಂವೀ ಅವರಿಗೆ ಜನರ ಸಂಪರ್ಕ ಹಾಗೂ ತೆಲುಗು ಭಾಷೆಯನ್ನು ಕಲಿಯಲು ಸಾಧ್ಯವಾಯಿತು.

ಸ್ವಾಭಿಮಾನಿಯಾಗಿದ್ದ ಕುಂವೀ ಅವರು ಎಷ್ಟೋ ಬಾರಿ ನೀರು ಕುಡಿದೇ ಹೊಟ್ಟೆ ತುಂಬಿಸಿಕೊಂಡು ಕಾಲ ದೂಡಿದ್ದುಂಟು. ಕಾಡುವ ಬಡತನದ ನಡುವೆ ಅವರ ತಂದೆಗೆ ಮಗನನ್ನು ಓದಿಸಬೇಕೆಂದು ಹಂಬಲ ಹಿತೈಷಿಗಳ ಸಲಹೆಯಂತೆ ಸಿದ್ಧಗಂಗಾ ಮಠದಲ್ಲಿ ಕುಂವೀ ಅವರು ಶಿಕ್ಷಕ ಪ್ರಶಿಕ್ಷಣಕ್ಕಾಗಿ (ಟಿ.ಸಿ.ಎಚ್)೧೯೭೧ ರಲ್ಲಿ ಸೇರಿದರು.

ಮಠದ ವಾತಾವರಣ ಅವರ ಮೇಲೆ ಸಾಕಷ್ಟು ಪ್ರಭಾವ ಬೀರಿತು. ವ್ಯಾಸಂಗ ಮುಗಿದ ನಂತರ ಉದ್ಯೋಗಕ್ಕಾಗಿ ಅಲೆದಾಡಿ ಸಿಕ್ಕ ಉದ್ಯೋಗಗಳನ್ನು ನಿರ್ವಹಿಸಿದ ಕುಂವೀ ಅವರಿಗೆ ೧೯೭೪ ರಲ್ಲಿ ಆಂಧ್ರದ ಕರ್ನೂಲ ಜಿಲ್ಲೆಗೆ ಸೇರಿದ 'ವರದವಾಗಿಲಿ' ಗ್ರಾಮದ ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಕ ವೃತ್ತಿ ಸಿಕ್ಕಿತು. ಆ ಊರಿನ ಜನಜೀವನ ಪರಿಸರ ಕುಂವೀ ಅವರ ಬದುಕು ಮತ್ತು ಸಾಹಿತ್ಯದ ಮೇಲೆ ಗಾಢಪ್ರಭಾವವನ್ನು ಬೀರಿದೆ ಎಂಬುದು ಅವರ ಸಾಹಿತ್ಯದ ಓದಿನಿಂದ ತಿಳಿಯಬಹುದು. ಅಲ್ಲಿನ ಅನೇಕ ಘಟನೆಗಳು, ವ್ಯಕ್ತಿಗಳ ಬದುಕು ಅವರ ಕಥೆ ಕಾದಂಬರಿಗಳಲ್ಲಿ ವಸ್ತುಗಳಾಗಿವೆ.

ವಾದವಾಗಿಲಿಯಲ್ಲಿ ಕೆಲಸ ನಿರ್ವಹಿಸುವಾಗ ಸಾಮಾಜಿಕ ಅಸಮಾನತೆಯ ವಿರುದ್ಧ ಕ್ರಿಯಾಶೀಲರಾದ ಕುಂವೀ ಶೂದ್ರರು ಹಾಗೂ ದಲಿತರನ್ನು ಶಾಲೆಗೆ ಸೇರಿಸಿಕೊಳ್ಳಲು ದೊಡ್ಡ

ಹೋರಾಟವನ್ನು ಮಾಡಿ ಜಮೀನ್ದಾರರ ವಿರೋಧವನ್ನು ಕಟ್ಟಿಕೊಳ್ಳಬೇಕಾಯಿತು. ಸ್ವತಃ ಕುಂವೀ ಅವರೇ ಜಾತಿನಿಂದನೆಗೆ ಒಳಗಾಗಿ ಅವಮಾನಪಡಬೇಕಾಯಿತು. ಇಂಥ ಗ್ರಾಮದಲ್ಲಿ ಜೀವನ ನಿರ್ವಹಿಸುತ್ತಿದ್ದ ಕುಂವೀ ಅವರು ಭಾರತದ ಸಾಮಾಜಿಕ, ಆರ್ಥಿಕ ಅಸಮಾನತೆ ಹಾಗೂ ಜಾತಿ ಭೇದ, ಲಿಂಗಭೇದ ಇವೆಲ್ಲವನ್ನು ತಮ್ಮ ಅರಿವಿಗೆ ತಂದುಕೊಂಡರು. ಜಮೀನ್ದಾರರ ವಿರೋಧ ಕಟ್ಟಿಕೊಂಡು ಅಸಮಾನತೆಯ ವಿರುದ್ಧ ದಿಟ್ಟ ಹೆಜ್ಜೆ ಇಟ್ಟು ಶಾಲೆಗೆ ಶೂದ್ರ ಹಾಗೂ ದಲಿತ ಮಕ್ಕಳನ್ನು ಸೇರಿಸಿಕೊಳ್ಳುವ ಹೋರಾಟದಲ್ಲಿ ಯಶಸ್ವಿಯಾದರು.

ಹೀಗೆ ಕುಂವೀ ವೃತ್ತಿಯನ್ನು ಕೈಗೊಂಡ ಸ್ಥಳಗಳಲ್ಲಿನ ಜನರ ಬದುಕನ್ನು ಹಸನುಗೊಳಿಸುವ ಪ್ರಯತ್ನದಲ್ಲಿ ಪ್ರಾಮಾಣಿಕತೆ ಮೆರೆದಿದ್ದಾರೆ. ೧೯೭೭ ರಿಂದ ೧೯೮೭ ರವರೆಗೆ ಕರ್ನೂಲು ಜಿಲ್ಲೆಯ 'ಗೂಳ್ಯಂ' ಎಂಬ ಗ್ರಾಮದಲ್ಲಿ ಸೇವೆ ಸಲ್ಲಿಸಿ ನಂತರ ೧೯೮೭ ರಿಂದ ಆಂಧ್ರದ ಅನಂತರಪುರ ಜಿಲ್ಲೆಗೆ ಸೇರಿದ 'ದಂಡಿನ ಹಿರೇಹಾಳ್'ನಲ್ಲಿ ಕರ್ತವ್ಯ ನಿರ್ವಹಿಸಿ ಸ್ವಯಂ ನಿವೃತ್ತಿ ಪಡೆದುಕೊಂಡು ಪೂರ್ಣ ಪ್ರಮಾಣದಲ್ಲಿ ಬೆಳವಣಿಗೆಯಲ್ಲಿ ತೊಡಗಿಸಿಕೊಂಡಿದ್ದಾರೆ.

ಕುಂವೀ ಅವರು ಹಾಸನ ಜಿಲ್ಲೆಯ ಸುಂದರ ಕಲೆಗಳ ತವರೂರಾದ ಪ್ರಪಂಚ ಪ್ರಖ್ಯಾತ ಬೇಲೂರು ತಾಲ್ಲೂಕಿನ 'ಯಮಸಂಧಿ' ಗ್ರಾಮದ ಅನ್ನಪೂರ್ಣ ಅವರನ್ನು ೧೯೭೩ ರಲ್ಲಿ ಸಾಂಪ್ರದಾಯಿಕವಾಗಿ ಲಗ್ನವಾದರು. ಈ ದಂಪತಿಗಳಿಗೆ ಮೂವರು ಮಕ್ಕಳಿದ್ದಾರೆ. ಅವರೆಂದರೆ ಪುರೂರವ, ಶಾಲಿವಾಹನ ಮತ್ತು ಪ್ರವರ.

೧೯೭೪ ರಲ್ಲಿ ತಮ್ಮ ಪ್ರಥಮ ಕವನ ಸಂಕಲನ 'ದಿವೀ ಸೀಮೆಯ ಹಾಡು' ಪ್ರಕಟಿಸುವ ಮೂಲಕ ಕುಂವೀ ಅವರು ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಗುರುತಿಸಿಕೊಂಡರು. ಅನಂತರ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಕೃಷಿ ಮಾಡಿದರು. ಅವುಗಳೆಂದರೆ.

ಕಥಾ ಸಂಕಲನಗಳು : 'ಇನ್ನಾದರೂ ಸಾಯಬೇಕು' (೧೯೮೧), 'ಟೋಮು ಮತ್ತಿತರ ಕಥೆಗಳು' (೧೯೮೪) 'ಭಗವತಿ ಕಾಡು' (೧೯೯೦), 'ನಿಜಲಿಂಗ', 'ಅಪೂರ್ವ ಚಿಂತಾಮಣಿ', 'ಸುಶೀಲ ಎಂಬ ನಾಯಿಯೂ ವಾಗಿಲಿ ಎಂಬ ಗ್ರಾಮವೂ', 'ಭಳಾರೆ ವಿಚಿತ್ರಂ' '... ಮಣ್ಣೇ ಮೊದಲು', 'ಕೂಳೆ' ಪ್ರಕಟಗೊಂಡಿವೆ.

ಕಾಂದಬರಿಗಳು : 'ಧ್ಯಾವಲಪುರ' (೧೯೮೦) 'ಕಪ್ಪು', 'ಬೇಲಿ ಮತ್ತು ಹೊಲ', 'ಆಸ್ತಿ', 'ಹನುಮ', 'ಕೆಂಡದ ಮಳೆ', 'ಬೇಟೆ', 'ಪ್ರತಿದ್ವಂದ್ವಿ', 'ಪಕ್ಷಿಗಳು', 'ಕೊಟ್ರ ಹೈಸ್ಕೂಲಿಗೆ ಸೇರಿದ್ದು', 'ಶಾಮಣ್ಣ', 'ಯಾಪಿಲ್ಲು', 'ಅರಮನೆ' (೨೦೦೫).

ಜೀವನ ಚರಿತ್ರೆ : 'ರಾಹುಲ ಸಾಂಕೃತ್ಯಾಯನ', 'ಚಾರ್ಲಿ ಚಾಪ್ಲಿನ್', 'ಸುಭದ್ರಮ್ಮ ಮನ್ಸೂರ'.

ಇತರೆ ಕೃತಿಗಳು : ಸಂಪಾದನೆ - ಕಂಥಾಸಂಕಲನ, ವಿಮರ್ಶೆ- ಜಮೀನ್ದಾರಿ ವ್ಯವಸ್ಥೆ ಮತ್ತು ತೆಲುಗು ಸಾಹಿತ್ಯ.

ಕುಂವೀ ಅವರು ಅನೇಕ ತೆಲುಗು ಕಥೆಗಳನ್ನು ಕನ್ನಡಕ್ಕೆ ಅನುವಾದಿಸುವುದರ ಮೂಲಕ ಯಶಸ್ವೀ ಅನುವಾದಕರೆನಿಸಿಕೊಂಡಿದ್ದಾರೆ. ಇವರು ಅನುವಾದಿಸಿದ ಮೂವತ್ತು ಕಥೆಗಳ 'ತೆಲುಗು ಕತೆ' ಎಂಬ ಕೃತಿಯನ್ನು ಅವರ ಸಂಪಾದಕತ್ವದಲ್ಲೇ ೧೯೯೮ ರಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿಯು ಪ್ರಕಟಿಸಿದೆ.

ತೆಲುಗಿನ 'ಒಕತರಂ' ಕಥಾ ಸಂಕಲನದ ಮೂವತ್ತಾರು ಕಥೆಗಳನ್ನು ಕುಂವೀ ಅವರಿಂದಲೇ ಅನುವಾದಿಸಿ 'ಒಂದು ಪೀಳಿಗೆಯ ಕಥೆಗಳು' ಎಂಬ ಹೆಸರಿನಲ್ಲಿ ೨೦೦೧ ರಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿಯು ಪ್ರಕಟಿಸಿದೆ.

ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಕೃಷಿ ಮಾಡಿ ಸಮರ್ಥರೆನಿಸಿದ ಕುಂವೀ ಕಥಾ ಸಾಹಿತ್ಯವನ್ನು ಆಧರಿಸಿ 'ಮನಮೆಚ್ಚಿದ ಹುಡುಗಿ', 'ಕೆಂಡದ ಮಳೆ', 'ದೊರೆ', 'ಕೊಟ್ರೇಶಿ ಕನಸು' ಎಂಬ ಚಲನಚಿತ್ರಗಳು

ತೆರೆಕಂಡು ಯಶಸ್ವಿಯಾಗಿವೆ.

ಕುಂವೀ ಅವರ ಸಾಹಿತ್ಯಾತ್ಮಕ ಸಾಧನೆಗಾಗಿ ಹಲವಾರು ಪ್ರಶಸ್ತಿ ಪುರಸ್ಕಾರಗಳು ಅವರನ್ನು ಹರಸಿಕೊಂಡು ಬಂದಿವೆ. ಎರಡು ಬಾರಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಪುಸ್ತಕ ಬಹುಮಾನ, ವರ್ಧಮಾನ ಉದಯೋನ್ಮುಖ ಪ್ರಶಸ್ತಿ, ಉಗ್ರಾಣ ಪ್ರಶಸ್ತಿ, ಅಥಣಿಯ ನರಸಿಂಗಿ, ಲಿಂಗರಾಜ ಪ್ರಶಸ್ತಿ, ಮುದ್ದಣ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿಯ ಗೌರವ ಪ್ರಶಸ್ತಿ (೧೯೮೩) 'ಕಪ್ಪು' ಕಾದಂಬರಿಗೆ ಲಂಕೇಶ್ ಪ್ರಶಸ್ತಿ (೨೦೦೪) 'ಅರಮನೆ' ಕಾದಂಬರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ (೨೦೦೭) ಇನ್ನು ಹತ್ತು ಹಲವು ಪ್ರಶಸ್ತಿ, ಪುರಸ್ಕಾರಗಳು ಕುಂವೀ ಅವರ ಮುಡಿಗೇರಿವೆ.

೧೯೯೩ ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಅಂಚೆ ಮತ್ತು ತೆರಪಿನ ಶಿಕ್ಷಣದ ಮೂಲಕ ಕನ್ನಡ ವಿಷಯದಲ್ಲಿ ಸ್ನಾತಕೋತ್ತರ ಪದವಿ ಪಡೆದುಕೊಂಡ ಕುಂವೀ ಅವರು ಸಾಹಿತ್ಯ ಸೃಷ್ಟಿಯಲ್ಲಿ ನಿರಂತರವಾಗಿ ಕ್ರಿಯಾಶೀಲರಾಗಿದ್ದಾರೆ. ಕರ್ನಾಟಕ ಸಾಹಿತ್ಯ ಅಕಾಡೆಮಿಯ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ. ಅಲ್ಲದೆ ಹಂಪಿ ಕನ್ನಡ ವಿಶ್ವವಿದ್ಯಾಲಯದ ಸಂದರ್ಶಕ ಪ್ರಾಧ್ಯಾಪಕರಾಗಿಯೂ ಕೆಲಕಾಲ ಕಾರ್ಯ ನಿರ್ವಹಿಸಿದರು.

ವಿಭಿನ್ನ ಸಾಂಸ್ಕೃತಿಕ ಹಾಗೂ ಪ್ರಾದೇಶಿಕ ಕಥೆಯ ಮೂಲಕ ಬಂದಂತಹ ಕುಂವೀ ಅವರ ಜೀವನ ಮತ್ತು ಸಾಹಿತ್ಯಿಕ ಸಾಧನೆಯ ವಿವರಗಳು ವೈವಿಧ್ಯತೆ ಮತ್ತು ವಿಶಿಷ್ಟತೆಗಳಿಂದ ಕೂಡಿವೆ ಎಂದು ಹೇಳಬಹುದು. ಕುಂವೀ ಅವರ ಬರಹಕ್ಕೆ ಸೃಜನಶೀಲ ಮನಸ್ಸನ್ನು ಮಾನವೀಯ ನೆಲೆಗಟ್ಟಿನಲ್ಲಿ ನೈತಿಕತೆಯ ಚೌಕಟ್ಟಿನಲ್ಲಿ ಪ್ರಜ್ಞಾಪೂರ್ವಕ ನಾಗರಿಕನಾಗಿ ರೂಪಿಸುವ ಶಕ್ತಿ ಅಡಗಿದೆ. ಸಾಮಾಜಿಕ ಪಿಡುಗಾದ ಅಸಮಾನತೆಯ ವಿರುದ್ಧದ ಧ್ವನಿಯನ್ನು ಸ್ಪಷ್ಟವಾಗಿ ಕಾಣಬಹುದು. ಹೀಗಾಗಿ ಕುಂವೀ ಅವರು ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಅಚ್ಚಳಿಯದ ಹೆಸರಾಗಿದ್ದಾರೆ.

ಅಡಿಟಿಪ್ಪಣೆ

೧. ಕುಂವೀ ಅವರ ಆಯ್ದ ಕಥೆಗಳು; ಕುಂವೀ ಸಂವಹನ ಪ್ರಕಾಶನ, ಮೈಸೂರು (೧೯೯೯) ಪುಟ 111

೨ ಬರಿಕಥೆಯಲ್ಲೋ ಅಣ್ಣ; ಕುಂವೀ (೨೦೦೪) ಪುಟ XIX

ಅಧ್ಯಾಯ 3

ಕನ್ನಡ ಸಣ್ಣ ಕಥೆಗಳ ಉಗಮ-ಬೆಳವಣಿಗೆ

ಕನ್ನಡ ಸಾಹಿತ್ಯದ ಆಧುನಿಕ ವಿಶಿಷ್ಟ ಸಾಹಿತ್ಯ ಪ್ರಕಾರಗಳಲ್ಲಿ ಸಣ್ಣಕಥೆ ತುಂಬಾ ಪ್ರಮುಖವಾದುದು. ಈ ಪ್ರಕಾರ ಮೂಡಿಬಂದದ್ದು ಪಾಶ್ಚಾತ್ಯ ಸಾಹಿತ್ಯದ ಪ್ರಭಾವದಿಂದ ಎಂದು ಹೇಳಬಹುದು. ಸಣ್ಣಕಥೆ ಎಂಬ ಪದ ಇಂಗ್ಲೀಷಿನ Short Storyಯ ಭಾಷಾಂತರವಾಗಿದೆ. ಆದರೆ ಈ ಎರಡೂ ಪದಗಳ ನಡುವೆ ಅರ್ಥವ್ಯಾಪ್ತಿಯಲ್ಲಿ ವ್ಯತ್ಯಾಸವಿದೆ. ಆಕ್ಸ್‌ಫರ್ಡ್ ಡಿಕ್ಷನರಿಯಲ್ಲಿ Short ಪದಕ್ಕೆ ಕೊಡುವ ಅರ್ಥ

1 Measuring little from end to end in space or time

2 Not reaching the usual stated or required

3 Saying very little or saying much in few words

ಎಂಬುದಾಗಿದೆ. ಅ ಅರ್ಥಗಳನ್ನು Short Storyಗೆ ಅನ್ವಯಿಸಿದಾಗ ಸೂಚಿತವಾಗುವ ಅಂಶಗಳೆಂದರೆ ೧ ಸಣ್ಣಕಥೆ, ಸ್ಥಳ, ಕಾಲಗಳನ್ನು ತೀರಾ ಚಿಕ್ಕ ಪ್ರಮಾಣದಲ್ಲಿ ಉಪಯೋಗಿಸಿಕೊಳ್ಳುತ್ತದೆ. ೨. ಅದು ಅಪೇಕ್ಷಿತ ಅಥವಾ ನಿರೀಕ್ಷಿತ ಮಿತಿಗಳನ್ನು ತಲುಪುವುದಿಲ್ಲ. ಹಾಗೂ ೩. ಅದು ಹೇಳುವುದು ಬಹಳ ಕಡಿಮೆ ಅಥವಾ ಸ್ವಲ್ಪದರಲ್ಲಿಯೇ ಬಹಳಷ್ಟನ್ನು ಅದು ಹೇಳುತ್ತದೆ. ಕನ್ನಡದ 'ಸಣ್ಣ' ಪದಕ್ಕೆ ಕಿಟ್ಟೆಲ್ ಡಿಕ್ಷನರಿಯಲ್ಲಿ ಈ ಅರ್ಥಗಳಿವೆ, small, little, tiny, minute, thin, delicate, slender, narrow, insignificant, ಇವುಗಳನ್ನು

ಬಹುಶಃ small ಎಂಬುದೊಂದನ್ನು ಬಿಟ್ಟರೆ ಉಳಿದ ಯಾವ ಅರ್ಥಗಳೂ ಸಣ್ಣಕಥೆಗೆ ಅನ್ವಯಿಸುವಂತಿಲ್ಲ"[೭] ಎಂಬ ಜಿ.ಎಸ್. ಅಮೂರ ಅವರ ಈ ಮಾತುಗಳು ಸರಿಯೆನಿಸುತ್ತವೆ. ಅಂದರೆ short story ಎಂಬುದಕ್ಕೆ ಬದಲಾಗಿ small story ಎಂಬುದು ಸರಿಯಾದುದು ಎನಿಸಿದರೂ short ಹಾಗೂ ಸಣ್ಣ ಎಂಬ ಪದಗಳನ್ನು ಸಮನಾರ್ಥಕಗಳೆಂದು ಗ್ರಹಿಸಿ ಬಳಸಲಾಗುತ್ತದೆ.

ಭಾರತದಲ್ಲಿ ಕಥೆ ಎಂಬುದು ಮೊದಲು ಜನಪದವಾಗಿ ಬೆಳೆದು ಬಂದಿರಬಹುದು ಎನಿಸುತ್ತವೆ. ಇದರಿಂದ ಕಥೆಯ ಮೂಲ ಜನಪದ ಎಂದು ಹೇಳಬಹುದು. ಸಣ್ಣ ಕಥೆಯೂ ಕಾದಂಬರಿಯಂತೆ ಸೃಜನಶೀಲ ಗದ್ಯ ಸಾಹಿತ್ಯ ಪ್ರಕಾರವಾಗಿದೆ. ಸಣ್ಣಕಥೆ ಎಂಬುದು ಗುಣಸೂಚಕ ಶಬ್ದವೇ ಹೊರತು ಗಾತ್ರಸೂಚಕ ಶಬ್ದವಲ್ಲ ಎನ್ನಬಹುದು.

ಕನ್ನಡದಲ್ಲಿ ಸಣ್ಣಕಥೆಯ ಉಗಮವನ್ನು ಗಮನಿಸುವುದಾದರೆ, ಪ್ರಾಚೀನ ಕವಿಗಳ, ಪ್ರಾಚೀನ ಕಾಲದಿಂದಲೂ ಕಥೆಯ ಚೌಕಟ್ಟಿನಲ್ಲಿಯೇ ತಮ್ಮ ಕಾವ್ಯಗಳನ್ನು ನಿರೂಪಿಸಿದ್ದಾರೆ. ಕವಿರಾಜಮಾರ್ಗಕಾರ ತನ್ನ ಹಿಂದಿನ ಗದ್ಯಕವಿಗಳ ಹೆಸರನ್ನು ಉಲ್ಲೇಖಿಸುವಾಗ ನವನೀತನನ್ನು ಹೆಸರಿಸಿದ್ದಾನೆ.

ಈತ ಪೈಶಾಚಿ ಭಾಷೆಯಲ್ಲಿದ್ದ ಗುಣಾಢ್ಯನ ಬೃಹತ್ಕಥೆಯನ್ನು ಕನ್ನಡಕ್ಕೆ ಅನುವಾದಿಸಿರಬೇಕೆಂದು ವಿದ್ವಾಂಸರು ಊಹಿಸಿದ್ದಾರೆ. ಇದರ ನಂತರ ನಮಗೆ ಉಪಲಬ್ಧವಿರುವ ಮೊದಲ ಕಥಾಸಂಗ್ರಹ 'ವಡ್ಡಾರಾಧನೆ' ಕೃತಿಯು ೧೯ ಉಪಸರ್ಗ ಕೇವಲಿಗಳ ಕಥೆಗಳನ್ನು ಒಳಗೊಂಡಿದೆ.

ಹತ್ತೊಂಬತ್ತನೆಯ ಶತಮಾನದಲ್ಲಿ ಕಥೆಗಾಗಿಯೇ ಕಥೆಗಳನ್ನು ರಚಿಸುವ ಸಂಪ್ರದಾಯ ಪ್ರಾರಂಭವಾಯಿತು ಎಂದೆನಿಸುತ್ತದೆ. ಮೊತ್ತ ಮೊದಲಿನ ಕಥಾಸಂಗ್ರಹವೆಂದರೆ 'ಈಸೋಪನ ನೀತಿಕಥೆ'ಗಳದ್ದು. ಶಾಲಾ ಮಕ್ಕಳನ್ನು ಗಮನದಲ್ಲಿಟ್ಟುಕೊಂಡು ಎಲಿಯಟ್ ಅದನ್ನು ಪ್ರಕಟಿಸಿದನು (೧೮೫೦) ಎಂದು ಶ್ರೀನಿವಾಸ ಹಾವನೂರ್ ಅವರು ಹೇಳುತ್ತಾರೆ. ಕನ್ನಡದಲ್ಲಿ ಕಥೆಗಳ ರಚನೆಯ

ಕಾರ್ಯವು ಅನುವಾದ ರೂಪಾಂತರಗಳಿಂದ ಆರಂಭವಾಗಿರುವುದನ್ನು ಗುರುತಿಸಬಹುದು.

ಕಿಟ್ಟಲ್ ಅವರು ಪ್ರಬಂಧ ರೂಪದ ಮುನ್ನುಡಿ (ನಾಗವರ್ಮನ ಛಂದೋಂಬುಧಿ)ಯಲ್ಲಿ ೧೯ನೇ ಶತಮಾನದ ಲೇಖಕರ ಪಟ್ಟಿಯೊಂದನ್ನು ನೀಡುತ್ತಾನೆ. ೧. ತೆನಾಲಿ ರಾಮಕೃಷ್ಣನ 'ಹಾಸ್ಯರಸ ಕಥೆಗಳು' ೨. 'ಬೇತಾಳ ಪಂಚವಿಶಂತಿ' ಕಥೆಗಳು ೩. ಎಸ್. ಕೃಷ್ಣಯ್ಯ ಅವರ 'ಹಂಸವಿಶಂತಿ ಕಥಾ' ೪. 'ಕಥಾಸಾಗರ' ೫. 'ಸಿಂಹಾಸನ ಬತ್ತೀಸಪುತ್ಥಳಿ' ಕಥೆ ೬. 'ಸುಬೋಧಾಮೃತ' ಎಂಬ ಆರು ಕಥಾ ಸಂಕಲನಗಳು ಸೇರಿವೆ. ಈ ಕಥಾ ಸಂಕಲನಗಳು ೧೮೬೪-೧೮೭೨ ರ ಅವಧಿಯಲ್ಲಿ ಪ್ರಕಟವಾಗಿವೆ.

ಕನ್ನಡದಲ್ಲಿ ಸಣ್ಣಕಥೆ ಎಂದು ಕರೆಯಬಹುದಾದ ಕಥೆಗಳನ್ನು ಮೊದಲು ಬರೆದವರು ಪಂಜೆ ಮಂಗೇಶರಾಯರು. ಅವರು ಬರೆದ 'ನನ್ನ ಚಿಕ್ಕತಾಯಿ' ಮತ್ತು 'ನನ್ನ ಚಿಕ್ಕ ತಂದೆ' ಎಂಬೆರಡು ಕಥೆಗಳು ಸುವಾಸಿನಿ ಮಾಸಪತ್ರಿಕೆಯಲ್ಲಿ ೧೯೦೦ ರ ಆಗಸ್ಟ್ ಸೆಪ್ಟೆಂಬರ್ ಸಂಚಿಕೆಗಳಲ್ಲಿ ಪ್ರಕಟವಾಗಿವೆ. ಇವು ಮೊದಲ ಕಥಾಗಳಾದುದರಿಂದ ಅವುಗಳಲ್ಲಿ ಅಂಥ ಸತ್ಯವೇನೂ ಇಲ್ಲವಾದರು ಅನುಭವದ ಅಭಿವ್ಯಕ್ತಿಗಳಾಗಿ ಅವು ಕಂಡು ಬರುತ್ತವೆ.

೧೯೦೭ರ ವೇಳೆಗೆ ಕನ್ನಡದಲ್ಲಿ ೩೮ ಪತ್ರಿಕೆಗಳು ಇದ್ದುವೆಂದು ತಿಳಿದುಬರುತ್ತದೆ. ಬಹುತೇಕ ಪತ್ರಿಕೆಗಳಲ್ಲಿ ಕಥೆಗಳನ್ನು ಪ್ರಕಟಿಸಲಾಗುತ್ತಿತ್ತು. ಅಂದರೆ ಸಣ್ಣಕಥೆಗಳಿಗೆ ಆ ಶತಮಾನದ ಆದಿಭಾಗದಲ್ಲಿ ಸಾಕಷ್ಟು ಪ್ರಚಾರ ದೊರೆತಿತ್ತೆಂದು ಕಾಣುತ್ತದೆ.

ಕನ್ನಡದ ಮಹತ್ವದ ಸಣ್ಣಕಥೆಗಳನ್ನು ಮೊದಲು ರಚಿಸಿದ ಮಾಸ್ತಿಯವರನ್ನು 'ಸಣ್ಣಕಥೆಗಳ ಜನಕ' ಎಂದು ಕರೆಯಲಾಗಿದೆ. ಪಂಜೆ ಅವರು ಮಾಸ್ತಿಯವರಿಗಿಂತ ಮೊದಲೇ ಸಣ್ಣಕಥೆಗಳನ್ನು ರಚಿಸಿದರೂ ಸಹ ಮಾಸ್ತಿಯವರೇ ಮೊದಲಿಗರೆಂಬ ಹೇಳಿಕೆಗಳಿವೆ. "ಕನ್ನಡ ಕಾವ್ಯದಲ್ಲಿ ಪಂಪ ಹೇಗೋ ಸಣ್ಣಕಥೆಯಲ್ಲಿ ಮಾಸ್ತಿ ಹಾಗೆ"[೪].

ಪಂಜೆ ಅವರು ಅನಂತರ ಕಾಣಲಿರುವ ಪ್ರಮುಖ ಕಥೆಗಾರರು ಎಂ.ಎನ್. ಕಾಮತರು (೧೮೮೩-೧೯೪೦), ಕಾಮತರ ಕಥೆಗಳು ೧೯೧೩-೧೪ ರ ಅನಂತರದಲ್ಲಿ ಕೆಲವು ಪತ್ರಿಕೆಗಳಲ್ಲಿ ಪ್ರಕಟವಾಗಿವೆ ಎಂದು ತಿಳಿದುಬರುತ್ತದೆ. ಕಾಮತರು ಬರೆಯುತ್ತಿದ್ದ ಕಾಲದಲ್ಲೇ ಧಾರವಾಡದ ಕಡೆಯಿಂದ ಕೆರೂರು ವಾಸುದೇವಚಾರ್ಯರು (೧೮೬೬-೧೯೨೧) ಸಣ್ಣ ಕಥೆಗಳನ್ನು ರಚಿಸುತ್ತಿದ್ದರು.

ಸ್ವತಃ ಸಂಪಾದಕರಾಗಿದ್ದ ಅವರು ಸಚಿತ್ರ ಭಾರತ ಪತ್ರಿಕೆಯಲ್ಲಿ ಪ್ರಕಟಿಸುತ್ತಿದ್ದರು. ೧೯೫೨ ರಲ್ಲಿ ಧಾರವಾಡದ ಮನೋಹರ ಗ್ರಂಥಮಾಲೆಯವರು ಕೆರೂರರ ಎಲ್ಲಾ ಕಥೆಗಳನ್ನು ಸಂಗ್ರಹಿಸಿ ಮೂರು ಸಂಪುಟಗಳಲ್ಲಿ ಪ್ರಕಟಿಸಿದ್ದಾರೆ.

ಹೊಸಗನ್ನಡ ಸಾಹಿತ್ಯದಲ್ಲಿ ೧೯೨೦ ರಿಂದ ೧೯೫೦ ರವರೆಗಿನ ಕಾಲವನ್ನು ನವೋದಯ ಎಂದು ಗುರುತಿಸುತ್ತಾರೆ. ಕೇವಲ ಕಾಲದ ದೃಷ್ಟಿಯಿಂದ ಮಾತ್ರವಲ್ಲದೆ ಸಾಹಿತ್ಯಿಕ ಧೋರಣೆ ಹಾಗೂ ಪರಂಪರೆಯ ದೃಷ್ಟಿಯಿಂದಲೂ ನವೋದಯವೆಂದು ಗುರುತಿಸಬಹುದಾಗಿದೆ. ಆದರೆ ಈ ಮೂರು ದಶಕಗಳಲ್ಲಿ ಮಾತ್ರವೇ ನವೋದಯ ಸಾಹಿತ್ಯ ಸೃಷ್ಟಿಯಾಯಿತು ಎಂದು ಹೇಳಲು ಬರುವುದಿಲ್ಲ.

ನವೋದಯ ತಲೆಮಾರಿನ ಹಿರಿಯರಲ್ಲಿ ಒಬ್ಬರಾದ ಮಾಸ್ತಿಯವರು ೧೯೧೪ ರಿಂದಲೇ ಸಣ್ಣಕಥೆಗಳನ್ನು ರಚಿಸಲು ಪ್ರಾರಂಭಿಸಿದರಲ್ಲದೆ ೧೯೮೦ರ ಅನಂತರವೂ ಸಣ್ಣಕಥೆಗಳನ್ನು ರಚಿಸಿದರು. ನವೋದಯ ಸಾಹಿತ್ಯದ ಧೋರಣೆಗಳನ್ನು ವಸ್ತುವಾಗುಳ್ಳ ಸಣ್ಣಕಥೆಗಳನ್ನು ಬರೆದ ಪ್ರಮುಖರು ಈ ಅವಧಿಯಲ್ಲೇ ಕಥಾರಚನೆಯಲ್ಲಿ ತೊಡಗಿದ್ದರು ಎಂಬ ಅಂಶ ಗಮನಾರ್ಹವಾದುದು. ಹಾಗಾಗಿ ಸ್ಥೂಲವಾಗಿ ಕಾಲದ ಅವಧಿಯನ್ನು ಆಧರಿಸಿ ನವೋದಯ ಎಂದು ಕರೆಯುವುದಾದರೂ ಈವರೆಗೆ ಸಾಹಿತ್ಯ ಸೃಷ್ಟಿಸಿದ ಬರಹಗಾರರನ್ನು ಗಮನದಲ್ಲಿಟ್ಟು ಮಾಡಿದ ವಿಭಜನೆ ಎಂದೇ ಹೇಳಬಹುದು.

ಮಾಸ್ತಿಯವರು ಸಣ್ಣಕಥೆಯ ಕ್ಷೇತ್ರದಲ್ಲಿ ಹಿರಿಯ ಕಥೆಗಾರರಾಗಿದ್ದು ಚಾರಿತ್ರಿಕ ಮಹತ್ವವುಳ್ಳವರು ಹಾಗೂ ಗುಣದ ದೃಷ್ಟಿಯಿಂದ ಪ್ರಮುಖರೆನಿಸಿದ್ದಾರೆ. ಇವರ ಬರಹಗಳಲ್ಲಿ

ಧರ್ಮದ ಮೌಲ್ಯ, ಭಾರತೀಯ ಸಂಸ್ಕೃತಿಯನ್ನು ಶ್ರದ್ಧೆಯಿಂದ ಕಾಪಾಡಬೇಕೆಂದ ಆಶಯ ಎದ್ದು ಕಾಣುತ್ತದೆ. ಇವರ ಕಥೆಗಳು ವ್ಯಕ್ತಿ ವ್ಯಕ್ತಿಗಳ ನಡುವೆ ಉಂಟಾಗುವ ಬಿಕ್ಕಟ್ಟು, ಮಾನವೀಯ ಸಂಬಂಧ, ಮಾನಸಿಕ ಅಂತರ ಇವುಗಳನ್ನು ಸೂಕ್ಷ್ಮವಾಗಿ ಬಿಚ್ಚಿಡುತ್ತದೆ. ತನ್ಮೂಲಕ ಸಂಸ್ಕೃತಿಯ ಮೌಲ್ಯಗಳ ಸತ್ವವನ್ನು ತೋರಿಸುತ್ತವೆ ಹಾಗೂ ಅದೇ ಮೌಲ್ಯಗಳ ಚೌಕಟ್ಟಿನಲ್ಲೇ ನೋವುಗಳಿಗೆ ಪರಿಹಾರ ಕಂಡುಕೊಳ್ಳುವ ರೀತಿಯನ್ನು ಕಾಣಬಹುದಾಗಿದೆ.

ಕಲಾತ್ಮಕ ಚೌಕಟ್ಟಿನಲ್ಲಿ ಕಥೆಗಳನ್ನು ಪ್ರಯೋಗಿಸಿ ನಿರೂಪಿಸಿರುವ ದೃಷ್ಟಿಯಿಂದ ಮಾಸ್ತಿಯವರ ಬರಹಗಳು ಪ್ರಮುಖವೆನಿಸುತ್ತವೆ. ಸನ್ನಿವೇಶ, ಪಾತ್ರ, ಕಥೆಗಾರ, ಇವರ ನಡುವೆ ಅಂತರ ಕಾಪಾಡುವುದರೊಡನೆ ತಾಳ್ಮೆ, ಸಮಾಧಾನ ಮಾದರಿಯ ಬರಹಗಳನ್ನು ಅವರಲ್ಲಿ ಕಾಣಬಹುದು. ಹಾಗಾಗಿ ಮುಂದಿನ ಕಥೆಗಾರರ ಮೇಲೆ ಅದರ ಪ್ರಭಾವ ಹೆಚ್ಚಾಗಿ ಆಗಿರುವುದನ್ನು ಗುರುತಿಸಬಹುದು.

ಮಾಸ್ತಿಯವರ ಅನಂತರ ಸಣ್ಣಕಥೆಗಳ ರಚನೆಯಲ್ಲಿ ನವೋದಯದ ತಲೆಮಾರಿನವರಲ್ಲಿ ಗುರುತಿಸಬೇಕಾದವರು ಎ.ಆರ್. ಕೃಷ್ಣಶಾಸ್ತ್ರಿಗಳು. ೧೯೨೭ ರಿಂದ ೧೯೪೪ ರವರೆಗೆ ಅವರು ಪ್ರಬುದ್ಧ ಕರ್ನಾಟಕದಲ್ಲಿ ಶ್ರೀಪತಿ, ಕಮಲ, ಕಪ್ಪಣ, ರಾಮಣ್ಣ, ಗೋಪಾಲ ಮುಂತಾದ ಹೆಸರುಗಳಲ್ಲಿ ಕಥೆಗಳನ್ನು ಪ್ರಕಟಿಸಿದರು. ಇವರ ಕಥೆಗಳು ಮಾನವ ಬದುಕಿನ ಗಂಭೀರ ಸಮಸ್ಯೆಗಳ ಬಗೆಗೆ ಸಹೃದಯರ ಗಮನ ಸೆಳೆಯುತ್ತದೆ.

ಸೋಸಲೆಗಳಗಪುರಿಶಾಸ್ತ್ರಿ ಅವರು (೧೯೯೦-೧೯೫೫) ಕೃಷ್ಣಶಾಸ್ತ್ರಿಗಳ ಸಮಕಾಲೀನರು. 'ಇದ್ದರೂ ಇರಬಹುದು' (೧೯೪೬)ಹಾಗೂ 'ಪರಪುರುಷ ಮತ್ತು ಇತರ ಕಥೆಗಳು' ಪ್ರಕಟಿತ ಸಂಕಲನಗಳು. ಇವರ ಕಥೆಗಳಲ್ಲಿ ಆದರ್ಶ, ಭಾವುಕತೆಗಳ ಎಳೆಗಳನ್ನು ಕಾಣಬಹುದು. ಮುಖ್ಯವಾಗಿ ಕೌಟುಂಬಿಕ ಬಿಕ್ಕಟ್ಟನ್ನು ವಸ್ತುವಾಗುಳ್ಳ ಕಥೆಗಳನ್ನು ರಚಿಸಿದ್ದಾರೆ.

ಕೊರಡ್ಕಲ್ ಶ್ರೀನಿವಾಸರಾವ್ (೧೮೬೫-೧೯೮೪) ಅವರ ಹಲವು ಕಥೆಗಳ ವಸ್ತು ದುರ್ಬಲ ಹಾಗೂ ಶೋಷಿತ ವರ್ಗಗಳ ಬದುಕಿನ ಚಿತ್ರಣವಾಗಿವೆ. ಅವರ 'ಧನಿಯರ ಸತ್ಯನಾರಾಯಣ' ಒಂದು ಉತ್ತಮ ಕಥೆಯಾಗಿದೆ.

ಮಾಸ್ತಿಯವರ ಪ್ರಭಾವದಲ್ಲಿ ಬೆಳೆದ ತುಂಬ ಜನಪ್ರಿಯ ಕಥೆಗಾರ ಅಜ್ಜಂಪುರ ಸೀತಾರಾಮ್ (ಆನಂದ). ಅವರ ಜನಪ್ರಿಯತೆ ಹೆಚ್ಚಿದ್ದು ಪ್ರಣಯ ಕಥೆಗಳಿಂದ. ಅವರು ತಮ್ಮ ಕಥೆಗಳಲ್ಲಿ ಸಂಸಾರದ ಸರಸಕ್ಕೆ ಪ್ರಾಧಾನ್ಯ ನೀಡುತ್ತಾರೆ. ಮಾಸ್ತಿ ಪ್ರಭಾವಿತ ಮತ್ತೊಬ್ಬ ಕಥೆಗಾರ ಕೆ. ಗೋಪಾಲಕೃಷ್ಣರಾಯರು (೧೯೦೯-೧೯೬೭) ನಟಿ, ಉಡುಗೊರೆ, ಬಂಗಾರದ ಡಾಬು ಮತ್ತು ಕೆನ್ನಿಂಗ್ ಟನ್‌ಪಾರ್ಕ್ ಎಂಬ ನಾಲ್ಕು ಕಥಾ ಸಂಕಲನಗಳು. ಅಂತಃಕರಣದ ಕಣ್ಣಿನಿಂದ ಬದುಕಿನ ಚಿತ್ರವನ್ನು ಹೆಣೆಯುವುದು ಹಾಗೂ ಆ ದಿಶೆಯಲ್ಲಿಯೇ ಬದುಕಿಗೆ ಅರ್ಥ ಹುಡುಕುವ ಪ್ರಯತ್ನವನ್ನು ಇವರ ಕಥೆಗಳಲ್ಲಿ ಕಾಣಬಹುದು.

ನವೋದಯ ಸಣ್ಣಕಥೆಯ ಗಣ್ಯರಲ್ಲೊಬ್ಬರು ಕುವೆಂಪು ಇವರ, "ಸನ್ಯಾಸಿ ಮತ್ತು ಇತರ ಕಥೆಗಳು" ಮತ್ತು "ದೇವರು ಮತ್ತು ಇತರ ಕಥೆಗಳು" ಎಂಬ ೨ ಕಥಾಸಂಕಲನಗಳು ಪ್ರಕಟವಾಗಿವೆ.

ಕಡೆಂಗೋಡ್ಲು ಶಂಕರಭಟ್ಟ, ಬೆಟಗೇರಿ ಕೃಷ್ಣಶರ್ಮ, ರಂ. ಶ್ರೀ. ಮುಗಳಿ, ಗೊರೂರು ರಾಮಸ್ವಾಮಿ ಅಯ್ಯಂಗಾರರು ಪ್ರಮುಖ ಸಣ್ಣಕಥೆ ಬರಹಗಾರರು. ಗೊರೂರು ತಮ್ಮ ಕಥೆಗಳಲ್ಲಿ ಹಳ್ಳಿಯ ಜೀವನ ಪರಿಪೂರ್ಣ ಎಂದು ಚಿತ್ರಿಸದೆ ಅಲ್ಲಿನ ಮೇಲು-ಕೀಳು, ಅಸೂಯೆ -ಸಂಪುಗಳು ಎಲ್ಲವನ್ನು ನಿರೂಪಿಸುತ್ತಾರೆ.

ನವೋದಯ ಸನ್ನಿವೇಶದಲ್ಲಿ ಮಹಿಳೆಯರೂ ಸಣ್ಣಕಥೆಗಳನ್ನು ಬರೆದಿದ್ದಾರೆ. ಆರ್ ಕಲ್ಯಾಣಮ್ಮ ಅವರ ಪ್ರಿಯಂವದಾ ಸಂಕಲನ. ಸ್ತ್ರೀಯರ ಆದರ್ಶ, ತ್ಯಾಗ, ನೀತಿ ಇವು ಇವರ ಕಥಾವಸ್ತು. ಕೊಡಗಿನ ಗೌರಮ್ಮ (೧೯೧೨-೧೯೩೯) ನವೋದಯ ಮಾರ್ಗದಲ್ಲಿ ಬರೆಯುತ್ತಿದ್ದ ಪ್ರಮುಖ ಕಥೆಗಾರರು. ಇವರ ಚಿಗುರು ಮತ್ತು ಕಂಬನಿ ಕಥಾಸಂಕಲನಗಳು ಪ್ರಕಟವಾಗಿವೆ.

ಗೌರಮ್ಮನವರು ಹೆಣ್ಣಿನ ಮನಸ್ಸಿನ ತುಮುಲವನ್ನು ಬಾಳಿನ ತೊಡರುಗಳನ್ನು ತಮ್ಮ ಕಥೆಯಲ್ಲಿ ಚಿತ್ರಿಸಿದ್ದಾರೆ.

ನವೋದಯ ಮಾರ್ಗದಲ್ಲಿ ಮೇಲೆ ತಿಳಿಸಿದವರುಗಳಲ್ಲದೆ ಇನ್ನು ಅನೇಕರು ಕಥೆಗಳನ್ನು ಬರೆದಿದ್ದಾರೆ. ಜಿ.ಪಿ. ರಾಜರತ್ನಂ, ಕೃಷ್ಣಕುಮಾರ ಕಲ್ಲೂರ, ಪು.ತಿ.ನ., ನವರತ್ನ ರಾಮರಾವ್, ಅಶ್ವತ್ಥ, ವಿ.ಸೀ., ಎಚ್.ವಿ. ಸಾವಿತ್ರಮ್ಮ, ಎಂ.ಕೆ. ಇಂದಿರಾ, ಶಾಂತದೇವಿ ಕಣವಿ, ಗೀತ ಕುಲಕರ್ಣಿ, ಎಲ್.ಎಸ್. ಶೇಷಗಿರಿರಾವ್, ಶ್ಯಾಮಲದೇವಿ, ಹಿರೇಮಲ್ಲೂರು ಈಶ್ವರನ್, ನಿರೂಪಮಾ, ಪ್ರೇಮಾಭಟ್ ಮೊದಲಾದವರು ಒಳ್ಳೆಯ ಕಥೆಗಳನ್ನು ಬರೆದಿದ್ದಾರೆ.

ಕನ್ನಡ ಸಾಹಿತ್ಯದ ರಚನೆಯಲ್ಲಿ ಐದನೆ ದಶಕದಲ್ಲಿ ಸಣ್ಣಕಥೆ ಬೇರೊಂದು ತಿರುವು ಪಡೆಯಿತು. ದೇಶದಲ್ಲಿ ಆಗತಾನೆ ಕಾಲಿಟ್ಟಿದ್ದ ಕೈಗಾರಿಕಾ ಕ್ರಾಂತಿಗೆ ಪ್ರತಿರೂಪವೆಂಬಂತೆ ಹುಟ್ಟಿದ ಈ ಹೊಸ ಸಾಹಿತ್ಯ ಮಾರ್ಗ ಪ್ರಗತಿಶೀಲ ಎಂಬ ಹೆಸರನ್ನು ಪಡೆಯಿತು. ಶೋಷಿತರ, ದುರ್ಬಲರ ಜೀವನವನ್ನು ಚಿತ್ರಿಸುವ ಉದ್ದೇಶವನ್ನು ಹೊಂದಿದ್ದ ಈ ಸಾಹಿತ್ಯ ಮೊದ ಮೊದಲು ನವೋದಯಕ್ಕೆ ಪ್ರತಿಕ್ರಿಯೆ ಎಂಬಂತೆ ರೂಪ ತಾಳಿತು.

ವರ್ಗಹೋರಾಟ ಹಾಗೂ ಸಮೂಹನಿಷ್ಠ ಧೋರಣೆ ಮುಖ್ಯವಾಗಿದ್ದ ವಸ್ತುವನ್ನು ಇವರು ಆರಿಸಿಕೊಂಡರು. ಶೋಷಕ ಶೋಷಿತರೆಂದು ಜನಸಮೂಹವನ್ನು ಎರಡು ಭಾಗ ಮಾಡಿಕೊಂಡು ನೋಡುವ ದೃಷ್ಟಿ ಬೆಳೆಯಿತು. ಪ್ರಗತಿಶೀಲರು ತಮ್ಮ ತತ್ತ್ವಪ್ರಕಾರಗಳಿಗೆ ವಿರೋಧವಾದವರನ್ನು ಖಂಡಿಸುವ ಮನೋಭಾವದ ಮೂಲಕವೇ ನೋಡುತ್ತಾರೆ. ನವೋದಯದವರಿಗೆ ಹಿಂದೂ ಆಶಯಗಳ ಬದ್ಧತೆ ಇದ್ದರೆ ಪ್ರಗತಿಶೀಲರು ಮಾರ್ಕ್ಸ್‌ವಾದದ ಬದ್ಧತೆಗೆ ಒಳಗಾಗಿದ್ದಾರೆ.

ಪ್ರಗತಿಶೀಲ ಮಾರ್ಗದ ಕಥೆಗಾರರಲ್ಲಿ ಮೊದಲಿಗರು ಅ.ನ. ಕೃಷ್ಣರಾಯರು (೧೯೦೮-೧೯೭೧) ಇವರು ಬರವಣಿಗೆಯ ಆರಂಭದಲ್ಲಿ ನವೋದಯದ ಪ್ರಭಾವದಲ್ಲೇ ಕಥೆ ರಚಿಸಿದರೂ ಮುಂದೆ

ಪ್ರಗತಿಶೀಲತೆಯನ್ನು ಅಳವಡಿಸಿಕೊಂಡರು. ಅನಕೃ ಅವರು ಕಿಡಿ (೧೯೩೨), ಪಾಪಪುಣ್ಯ, ಮಿಂಡು ಶಿಲ್ಪ, ಅಗ್ನಿಕನ್ಯೆ, ಸಮರ ಸುಂದರಿ (೧೯೬೦) ಕಥಾ ಸಂಕಲನಗಳನ್ನು ಪ್ರಕಟಿಸಿದ್ದಾರೆ. ಅವರ ಕಥೆಗಳಲ್ಲಿ ಸಾಮಾಜಿಕ ವಿಷಮತೆ, ರಾಜಕೀಯ ವ್ಯಕ್ತಿಗಳಿಂದಾಗುವ ಅನ್ಯಾಯ, ದುರ್ಬಲರ ದಲಿತರ ಮೇಲಿನ ಶೋಷಣೆ ವಸ್ತುಗಳಾಗಿವೆ. ಇವರ ಮುಖ್ಯ ಅನಸ್ತಿ ಕಾದಂಬರಿಯಾಗಿದ್ದು ಕಥೆಗಾರರಾಗಿ ಏನೂ ಸಾಧನೆ ಮಾಡಲಿಲ್ಲ.

ತ.ರಾ. ಸುಬ್ಬರಾಯರು (೧೯೨೦-೧೯೮೪) 'ರೂಪಸಿ', 'ತೊಟ್ಟಿಲ ತೂಗಿತು', 'ಗಿರಿಮಲ್ಲಿಗೆಯ ನಂದನದಲ್ಲಿ' ಮತ್ತು ಇದೇ ನಿಜವಾದ ಸಂಪತ್ತು ಎಂಬ ನಾಲ್ಕು ಕಥಾ ಸಂಕಲನಗಳನ್ನು ಪ್ರಕಟಿಸಿದ್ದಾರೆ. ತ.ರಾ.ಸು. ಅವರ ಕಥೆಗಳಲ್ಲಿ ವೈವಿಧ್ಯವಿದೆ, ಕಲೆಯಿದೆ '0-0=0' ಎಂಬ ಕಥೆ ವಸ್ತು ಮತ್ತು ತಂತ್ರದ ದೃಷ್ಟಿಯಿಂದ ಸಣ್ಣಕಥೆಯ ಸಂದರ್ಭದಲ್ಲಿ ಪ್ರಮುಖವಾದದೆನಿಸುತ್ತದೆ. ಇವರು ಬರವಣಿಗೆಯಲ್ಲಿ ಪ್ರಜ್ಞಾಪ್ರವಾಹ ತಂತ್ರವನ್ನು ಅಳವಡಿಸಿಕೊಂಡಿರುವುದಲ್ಲದೆ, ಭಾವಗೀತೆಗೆ ಸಮೀಪವಾದ ಭಾವತೀವ್ರತೆಯನ್ನು ಸಾಧಿಸಿದ್ದಾರೆ. ಆದರೆ ತರಾಸು ಅವರ ಕಥೆಗಳಲ್ಲಿ ಪ್ರಗತಿಶೀಲತೆ ಅತ್ಯಂತ ನಿಷ್ಠುರ ರೂಪದಲ್ಲಿ ಕಾಣಬರುವುದಿಲ್ಲ.

ಪ್ರಗತಿಶೀಲ ಕಥೆಗಾರರೆಂದು ಗುರುತಿಸುವುದಾದರೂ ಉಳಿದ ಕಥೆಗಾರರಿಗಿಂತ ಭಿನ್ನವಾದ ರಚನೆಯನ್ನು ಚದುರಂಗ (ಎಂ. ಸುಬ್ರಹ್ಮಣ್ಯರಾಜೇ ಅರಸ್) ಅವರಲ್ಲಿ ಕಾಣಬಹುದು. 'ಸ್ವಪ್ನಸುಂದರಿ', 'ಶವದ ಮನೆ', 'ಕ್ಯಾಟಿ' ಮೊದಲಾದ ಕಥಾಸಂಕಲನಗಳು.

ಚದುರಂಗರ ಕಥೆಗಳಲ್ಲಿ ಅನ್ಯಾಯ, ಅಸಮಾನತೆಗಳು ವಸ್ತುವಾಗಿವೆ. ಸಾಮಾಜಿಕ ಅನ್ಯಾಯಗಳ ಬಗೆಗೆ ಬರೆಯುವಾಗಲೂ ಮಾನವೀಯ ಅಂತಃಕರಣದಿಂದ ಬದುಕನ್ನು ನೋಡುವುದು ಪ್ರಗತಿಶೀಲರಲ್ಲಿ ಚದುರಂಗರನ್ನು ವಿಶಿಷ್ಟ ಬರಹಗಾರರನ್ನಾಗಿ ಮಾಡಿದೆ.

ಪ್ರಗತಿಶೀಲ ತತ್ತ್ವಗಳನ್ನು ಲಕ್ಷಣಗಳನ್ನು ಹೆಚ್ಚಿನ ಮಟ್ಟದಲ್ಲಿ ಮೈಗೂಡಿಸಿಕೊಂಡು ಹೆಚ್ಚಿನ ಉದ್ವಿಗ್ನತೆಯಿಂದ ವಸ್ತುವನ್ನು ಗ್ರಹಿಸುವ, ಅಭಿವೃತ್ತಿಸುವ ಕಲೆಗಾರಿಕೆ ಬಸವರಾಜ ಕಟ್ಟೀಮನಿ ಅವರದು. ಪ್ರಗತಿಶೀಲರಲ್ಲಿ ಹೆಚ್ಚಿನ ವೈಚಾರಿಕತೆಯನ್ನು ನಿರಂಜನ (ತುಳಕುಂದ ಶಿವರಾಯ) ಕಥೆಗಳಲ್ಲಿ ಕಾಣಬಹುದು.

ಗದ್ಯರೂಪ, ಕಾವ್ಯರೂಪಗಳಲ್ಲಿ ಕಥೆಗಳನ್ನು ರಚಿಸಿದ್ದಾರೆ. ಸಮಸ್ಯಾತ್ಮಕ ಪರಿಸ್ಥಿತಿಯ ಸಮಗ್ರ ಪರಿಕಲ್ಪನೆ ಮಾಡುವಂತ ಕಥೆಗಳನ್ನು ನಿರೂಪಿಸಿರುವ ಇವರ ಕಲಾತ್ಮಕತೆ ಪ್ರಗತಿಶೀಲರಲ್ಲೇ ಅಪೂರ್ವವಾದುದು.

ನವ್ಯಸಾಹಿತ್ಯ ಮಾರ್ಗದವರು ನವೋದಯದವರ ಆದರ್ಶ ಹಾಗೂ ಪ್ರಗತಿಶೀಲರ ಆವೇಶ ಇವುಗಳ ಬಗೆಗೆ ಅನುಮಾನದಿಂದ ನೋಡುವ ದೃಷ್ಟಿಯನ್ನು ಬೆಳೆಸಿಕೊಂಡರು. ಹಾಗಾಗಿ ನವ್ಯ ಕಥೆಗಾರರು ಚಿಂತನಾಶೀಲತೆಗೆ ಹೆಚ್ಚು ಒತ್ತು ನೀಡುತ್ತಾರೆ. ವ್ಯಕ್ತಿ ವಿಶಿಷ್ಟ ಅನುಭವದ ಜತೆಗೆ ಸಮಷ್ಟಿ ಅನುಭವವನ್ನು ಗುರುತಿಸುವ ಪ್ರಯತ್ನ ಮಾಡುತ್ತಾರೆ. ಇದರಿಂದಾಗಿ ಬರವಣಿಗೆಯಲ್ಲಿ ನವೋದಯ ಮತ್ತು ಪ್ರಗತಿಶೀಲರಿಗಿಂತ ಭಿನ್ನವಾಗಿ ಗೋಚರಿಸುತ್ತಾರೆ. ತಮಗಾದ ಅನುಭವಕ್ಕೆ ಧ್ವನಿ, ಸಂಕೇತ, ಪ್ರತಿಮೆಗಳ ಮೂಲಕ ಮಾತಿನ ಶರೀರ ಕೊಡಲು ಪ್ರಯತ್ನಿಸಿದ್ದಾರೆ. ವ್ಯಕ್ತಿ ಮುಖ್ಯವಾದ ವಿಶಿಷ್ಟ ಸ್ಥಿತಿಯು ಮಹತ್ವ ಪಡೆಯುವಂತಾದುದರ ಫಲವಾಗಿ ನವ್ಯಮಾರ್ಗ ಜನಿಸಿತು.

ನವ್ಯಕಥೆಗಳ ಉಗಮವನ್ನು ವಿಮರ್ಶಕರು ಗುರುತಿಸುವಾಗ ಮೊದಲಿಗೆ ಬಂಗಲೋಡಿ ದೇವರಾಯರನ್ನು (೧೯೨೭-೧೯೮೫) ಗುರುತಿಸುತ್ತಾರೆ. ಇವರು ಹುಚ್ಚು ಮುನಸೀಫ್ ಮತ್ತು ಇತರ ಕಥೆಗಳು ಆರಾಧನಾ ಎಂಬ ಸಂಕಲನಗಳನ್ನು ಪ್ರಕಟಿಸಿದ್ದಾರೆ.

ನವ್ಯದ ಧೋರಣೆ ಖಚಿತವಾಗಿ ಮೊದಲ ಬಾರಿಗೆ ಮೂಡಿಬಂದಿರುವುದು ರಾಮಚಂದ್ರ ಶರ್ಮರ (೧೯೦೫) ಕಥೆಗಳಲ್ಲಿ ಇನ್ನುಳಿದ ಪ್ರಗತಿಶೀಲರ ಕಥೆಗಳಲ್ಲಿ ಕಂಡುಬರುವ ಸಾಮಾಜಿಕ ಅಸಮಾನತೆಯ

ಬಗೆಗಿನ ಆಕ್ರೋಶಕ್ಕೆ ಬದಲಾಗಿ ಶರ್ಮರ ಕಥೆಗಳಲ್ಲಿ ವ್ಯಕ್ತಿಯ ಮನಸ್ಸಿನ ತುಮುಲಗಳು ಕಾಣಿಸಿಕೊಳ್ಳುತ್ತವೆ.

ನವ್ಯ ಕಥೆಗಾರರಲ್ಲಿ ಪ್ರಮುಖರಾದವರು ಯು.ಆರ್. ಅನಂತಮೂರ್ತಿ (೧೯೩೨) 'ಎಂದೆಂದೂ ಮುಗಿಯದ ಕಥೆ' (೧೯೫೫)'ಪ್ರಶ್ನೆ', 'ಮೌನಿ', 'ಆಕಾಶ ಮತ್ತು ಬೆಕ್ಕು' ಮೊದಲಾದವು. ಇವರ ಕಥೆಗಳ ಮುಖ್ಯ ಅಂಶವೆಂದರೆ ಪರಂಪರಾಗತ ಮೌಲ್ಯಗಳು ಮುಖಾಮುಖಿಯಾಗಿರುತ್ತವೆ. 'ಪ್ರಶ್ನೆ' ಕನ್ನಡದ ಪ್ರಮುಖ ಕಥಾ ಸಂಗ್ರಹಗಳಲ್ಲಿ ಒಂದಾಗಿದೆ.

ಯಶವಂತ ಚಿತ್ತಾಲರ ಕಥೆಗಳು ಹೆಚ್ಚು ಕಲಾತ್ಮಕವಾಗಿವೆ. ಚಿತ್ತಾಲರ 'ಸಂದರ್ಶನ' (೧೯೫೭), 'ಅಬೋಲೀನ', 'ಆಟ', ಸಂಗ್ರಹಗಳ ಹಲವು ಕಥೆಗಳಲ್ಲಿ ನಾವು ತೀವ್ರವಾಗಿ ಕಾಡುವ ವಸ್ತುವಾಗಿವೆ. ಕಥೆಯಾದಳು ಹುಡುಗಿ (೧೯೮೦) 'ಚೀನ್ಯಾ', 'ಸಿದ್ಧಾರ್ಥ', 'ತಮಟೆಗೆ ಬಂದ ಕಿಂದರಜೋಗಿ' ಸಂಕಲನಗಳಲ್ಲಿ ಹೆಚ್ಚಿನ ಮಟ್ಟದ ಚಿಂತನೆಯಿಂದ ಅನುಭವಗಳ ಪರಿಶೋಧನೆಯನ್ನು ಕಾಣಬಹುದು.

ನಗರ ಜೀವನವನ್ನು ಕ್ರಿಯಾ ಕೇಂದ್ರವನ್ನಾಗಿಕೊಂಡು ಕಥೆಗಳನ್ನು ರಚಿಸಿರುವವರು ಶಾಂತಿನಾಥ ದೇಸಾಯಿ. 'ಮಂಜುಗೆಡ್ಡೆ', 'ಕ್ಷಿತಿಜ', 'ದಂಡೆ', 'ರಾಕ್ಷಸ' ಮೊದಲಾದ ಸಂಕಲನಗಳು ಅವರ ಕಥೆಗಳಲ್ಲಿ ಮನಸ್ಸಿನ ವಿಶ್ಲೇಷಣೆ, ಸೂಕ್ಷ್ಮ ಪರಿಜ್ಞಾನ ಮತ್ತು ಖಚಿತತೆ ಕಂಡುಬರುತ್ತದೆ.

ನವ್ಯ ಕಥೆಗಾರರಲ್ಲಿ ಪಿ. ಲಂಕೇಶ ಪ್ರಮುಖರಾಗಿದ್ದಾರೆ. ಅವರ ಕಥೆಗಳಲ್ಲಿ ಮನುಷ್ಯನ ಸಣ್ಣತನ, ದುಷ್ಟ ನಡವಳಿಕೆಗಳನ್ನು ಎತ್ತಿ ಹಿಡಿಯುತ್ತಾರೆ. ಹಳ್ಳಿಯಿಂದ ನಗರಕ್ಕೆ ಬಂದ ವ್ಯಕ್ತಿ ನಗರದಲ್ಲಿ ತನ್ನತನ ಕಂಡುಕೊಳ್ಳಲು ನಡೆಸುವ ಪರಿಪಾಟಲು ಇವರ ಹಲವು ಕಥೆಗಳಲ್ಲಿ ವಸ್ತುವಾಗಿವೆ. 'ಕೆರೆಯ ನೀರನ್ನು ಕೆರೆಗೆ ಚೆಲ್ಲಿ' (೧೯೬೩) 'ನಾನಲ್ಲ', 'ಉಮಾಪತಿಯ ಸ್ಕಾಲರ್‌ಷಿಪ್ ಯಾತ್ರೆ', 'ಕಲ್ಲುಕರಗುವ ಸಮಯ', 'ಉಲ್ಲಂಘನೆ' ಎಂಬ ಸಂಕಲನಗಳು ಪ್ರಕಟವಾಗಿವೆ.

ನವ್ಯ ಸಾಹಿತ್ಯ ಸಂದರ್ಭದಲ್ಲಿಯೇ ಕಾಣಿಸಿಕೊಂಡು ನವ್ಯಕ್ಕಿಂತ ಭಿನ್ನವಾಗಿ ರಚಿಸಿದವರು ಪೂರ್ಣಚಂದ್ರ ತೇಜಸ್ವಿ. ತೇಜಸ್ವಿ ಅವರು ನವ್ಯದ ರೀತಿಯಲ್ಲೇ ತಮ್ಮ ಕಥೆಗಳಲ್ಲಿ ತಂತ್ರಗಳನ್ನು ರೂಢಿಸಿಕೊಂಡರೂ ಹೊಸಮಾರ್ಗದ ಅನ್ವೇಷಕರಂತೆ ಕಾಣುತ್ತಾರೆ. ಸಾಮಾಜಿಕ ದೃಷ್ಟಿಕೋನದಿಂದ ಬದುಕನ್ನು ಅರ್ಥೈಸುತ್ತಾರೆ. 'ಹುಲಿಯೂರಿನ ಸರಹದ್ದು', 'ಅಬಚೂರಿನ ಪೋಸ್ಟಾಪೀಸು', 'ಕಿರಗೂರಿನ ಗಯ್ಯಾಳಿಗಳು' ಎಂಬ ಸಂಕಲನಗಳನ್ನು ರಚಿಸಿದ್ದಾರೆ.

ಹೀಗೆ ಇನ್ನು ಮೊದಲಾದ ಕಥೆಗಾರರು ನವ್ಯ ಸಾಹಿತ್ಯ ಸಂದರ್ಭದಲ್ಲಿ ಕಥೆಗಳನ್ನು ರಚಿಸಿ ಕನ್ನಡ ಕಥಾ ಸಾಹಿತ್ಯ ಕ್ಷೇತ್ರಕ್ಕೆ ತಮ್ಮದೇ ಆದ ಕೊಡುಗೆ ನೀಡಿದ್ದಾರೆ.

ಇದೇ ವೇಳೆಗೆ ಮಹಾರಾಷ್ಟ್ರದಲ್ಲಿ ಹುಟ್ಟಿಕೊಂಡ ದಲಿತ್ ಫ್ಯಾಂಥರ್ಸ್ ಚಳುವಳಿ ಕರ್ನಾಟಕದ ಮೇಲೂ ಪ್ರಭಾವ ಬೀರಿತು. ಇದು ದಲಿತ ಸಾಹಿತ್ಯ ಎಂಬ ಹೊಸ ಮಾರ್ಗಕ್ಕೆ ನಾಂದಿಯಾಯಿತು. ಪ್ರಾರಂಭದಲ್ಲಿ ಮೇಲು ಜಾತಿಯ ಶೋಷಣೆಯನ್ನು ತೀವ್ರವಾಗಿ ಪ್ರತಿರೋಧಿಸುವ ರೀತಿಯ ಧೋರಣೆ ಕಂಡುಬಂದರೂ ಕ್ರಮೇಣ ಪ್ರತಿಭಟನೆ ಸೂಕ್ಷ್ಮ ಸಾಮ್ಯತೆಯನ್ನು ಪಡೆದು ಧ್ವನಿಪೂರ್ಣ ಬರವಣಿಗೆ ಮೂಡಿಬಂದಿತು. ಈ ಕಾಲದಲ್ಲಿ ದೇವನೂರು ಮಹಾದೇವ ಅವರು ಕಥೆಗಳನ್ನು ರಚಿಸಿದರು. ಅವರ ಕಥೆಗಳು ಯಾವುದೇ ಸಾಹಿತ್ಯ ಮಾರ್ಗದ ತಂತ್ರ ಹಾಗೂ ಲಕ್ಷಣಗಳನ್ನು ಹೊಂದದೆ ತನ್ನದೇ ವಿಭಿನ್ನ ನೆಲೆಯಲ್ಲಿ ನಿಲ್ಲುತ್ತದೆ. ಆದರೂ ಮಹದೇವ ಅವರನ್ನು ದಲಿತ ಕವಿ ಎಂದು ಬಿಂಬಿಸುತ್ತೇವೆ. ಹೊಸಗನ್ನಡ ಸಾಹಿತ್ಯ ಸಂದರ್ಭದಲ್ಲಿ ವಿಶೇಷವಾದ ಭಾಷಾ ಬಳಕೆಯನ್ನು ದೇವನೂರು ಮಾಡಿದ್ದಾರೆ. ಶೋಷಿತ ವರ್ಗದವರು ತಮ್ಮ ಮೇಲೆ ಆಗುತ್ತಿರುವ ದೌರ್ಜನ್ಯವನ್ನು ಪ್ರತಿಭಟಿಸಲು ಆಗದೆ, ಸಹಿಸಿಕೊಂಡು ಜೀವಿಸುವ ಜೀವನ ಚಿತ್ರಣವನ್ನು ಅದ್ಭುತವಾಗಿ ಚಿತ್ರಿಸುತ್ತಾರೆ. ಗ್ರಾಮ್ಯ ಭಾಷಾಶೈಲಿಯಿಂದಲೇ ಓದುಗರ ಗಮನ ಸೆಳೆಯುತ್ತಾರೆ. ದ್ಯಾವನೂರು (೧೯೭೩) ಕಥಾ ಸಂಕಲನ ಪ್ರಕಟವಾಗಿದೆ. ಬರವಣಿಗೆ ಅಲ್ಪವಾದರೂ ಅವುಗಳ ತೀವ್ರತೆ ಅತಿ ಹೆಚ್ಚು.

ದಲಿತ ಬಂಡಾಯ ಕಥೆಗಳ ಸನ್ನಿವೇಶದಲ್ಲಿ ಕೇಳಸಿಗುವ ಮತ್ತೊಂದು ಪ್ರಮುಖ ಹೆಸರು ಬರಗೂರು ರಾಮಚಂದ್ರಪ್ಪ. ಬಂಡಾಯ ಸಾಹಿತ್ಯ ಸಂಘಟನೆಯನ್ನು ಹುಟ್ಟು ಹಾಕಿ ಬೆಳೆಸಿದವರಲ್ಲಿ ಪ್ರಮುಖರು. ಇವರ ಕಥೆಗಳಲ್ಲಿ ಶೋಷಣೆಯ ವಿರುದ್ಧ ಪ್ರತಿಭಟನೆಯ ದನಿಯಿದೆ. 'ಸುಂಟರ ಗಾಳಿ', 'ಕಪ್ಪು ನೆಲದ ಕೆಂಪುಕಾಲು', 'ಬಯಲಾಟದ ಭೀಮಣ್ಣ' ಎಂಬ ಕಥಾಸಂಕಲನಗಳನ್ನು ಪ್ರಕಟಿಸಿದ್ದಾರೆ.

ಸದಾ ಬಂಡಾಯ ನಿಲುವು ಹಾಗೂ ಎಡಪಂಥೀಯ ಆಲೋಚನೆಗಳನ್ನು ಮೈಗೂಡಿಸಿಕೊಂಡಿರುವ ಕಾಳೇಗೌಡರ ನಾಗವಾರ ಅವರು ಈ ಸಾಹಿತ್ಯ ಸಂದರ್ಭದ ಪ್ರಮುಖರೆನಿಸಿದ್ದಾರೆ. ಸಹಬಾಳ್ವೆ, ಸ್ವಾತಂತ್ರ್ಯ, ಸಮಾನತೆ, ವೈಚಾರಿಕತೆಯನ್ನು ಪ್ರೀತಿಸುವ, ಜಾತ್ಯತೀತ ಮೌಲ್ಯವನ್ನು ಗೌರವಿಸುವ ಹಾಗೂ ಮೌಢ್ಯ, ಅಜ್ಞಾನ, ಅಸಮಾನತೆಗಳನ್ನು ತೀವ್ರವಾಗಿ ಖಂಡಿಸುವ ಕಾಳೇಗೌಡ ನಾಗವಾರರು ಈ ಸಮಾಜದ ಸ್ಥಾಪಿತ ನಿಯಮ, ಮೌಲ್ಯಗಳ ವಿರುದ್ಧ ಸದಾ ಬಂಡಾಯ ಹೂಡುವ ಹುನ್ನಾರ ನಡೆಸುತ್ತಲೇ ಇರುತ್ತಾರೆ. 'ಬೆಟ್ಟ ಸಾಲು ಮಳೆ', ಹಾಗೂ 'ಅಲೆಗಳು' ಎಂಬ ಕಥಾಸಂಕಲನಗಳನ್ನು ಪ್ರಕಟಿಸಿದ್ದಾರೆ.

ದಲಿತ ಬಂಡಾಯ ಬರಹಗಾರರು ಸಣ್ಣಕತೆಯ ಪ್ರಕಾರವನ್ನು ಅತ್ಯಂತ ಪರಿಣಾಮಕಾರಿಯಾಗಿ ಬಳಸಿದ್ದಾರೆ. ಮೇಲೆ ಹೆಸರಿಸಿದ ಕಥೆಗಾರರಲ್ಲದೆ ಬೊಳುವಾರು ಮಹಮದ್ ಕುಂಞ, ಬೆಸಗರಹಳ್ಳಿ ರಾಮಣ್ಣ, ಚನ್ನಣ್ಣವಾಲೀಕರ, ಅರವಿಂದ ಮಾಲಗತ್ತಿ, ಅಬ್ದುಲ್ ರಷೀದ್, ಮೊಗಳ್ಳಿ ಗಣೇಶ್, ಕೆ.ಟಿ. ಚಿಕ್ಕಣ್ಣ ಮೊದಲಾದ ಎಷ್ಟೋ ಮಂದಿ ಒಳ್ಳೆಯ ಕಥೆಗಾರರನ್ನು ಕೊಟ್ಟಿದೆ ದಲಿತ ಬಂಡಾಯ ಪಂಥ. "ಒಂದು ಇಡೀ ಸಮುದಾಯದ ಸೃಜನಶಕ್ತಿಯೇ ಇಲ್ಲಿ ಹೊರಚೆಲ್ಲುವಂತೆ ಭಾಸವಾಗುತ್ತದೆ"[೫] ಎಂದು ಪ್ರಶಂಸಿಸುತ್ತಾರೆ ಎಲ್.ಎಸ್. ಶೇಷಗಿರಿರಾಯರು.

ಈ ಕಾಲಘಟ್ಟದಲ್ಲಿ ಮಹಿಳಾ ಕಥೆಗಾರರು ಗಮನಾರ್ಹ ಬೆಳವಣಿಗೆ ಕಂಡುಕೊಂಡರು. ಸೂಕ್ಷ್ಮ ನಿರೂಪಣೆ, ಲವಲವಿಕೆ, ಉತ್ಸಾಹವನ್ನು ಸಶಕ್ತವಾಗಿ ಅಭಿವ್ಯಕ್ತಿಸುತ್ತಾ, ಗಟ್ಟಿ ದನಿ ಮಾಡದೆ ಬದುಕಿನ ಮೂಲ ಸಂತೋಷ ಉತ್ಸಾಹವನ್ನು ನಮ್ಮ ಅನುಭವಕ್ಕೆ ತರಬಲ್ಲವರು.

ಅಲ್ಲದೆ ಸಂವೇದನಾಸೂಕ್ಷ್ಮತೆ ಸಂಯಮ, ಮನಸ್ಸಿನ ವ್ಯಾಪಾರಗಳ ವಿಶ್ಲೇಷಣೆಗಳಲ್ಲದೆ ಜಡ್ಡುಗಟ್ಟಿದ ಸಂಪ್ರದಾಯವನ್ನು ವಿರೋಧಿಸುವ ಗಟ್ಟಿದನಿಯೂ ಮಹಿಳಾ ಬರಹಗಾರರಲ್ಲಿ ಗುರುತಿಸಬಹುದು. ವೈದೇಹಿ, ಸಾರಾಅಬೂಬಕರ್, ವೀಣಾ ಶಾಂತೇಶ್ವರ, ನೇಮಿಚಂದ್ರ, ಗಂಗಾ ಪಾದೇಕಲ್, ಕೆ.ಎಂ. ವಿಜಯಲಕ್ಷ್ಮಿ, ಗೀತಾನಾಗಭೂಷಣ ಮೊದಲಾದವರು ಸ್ತ್ರೀ ಸಂವೇದನೆಯನ್ನು ವಿಶಿಷ್ಟವಾಗಿ ಸಾಹಿತ್ಯಕ್ಕೆ ತಂದು ಕೊಡುತ್ತಿದ್ದಾರೆ.

ಬಂಡಾಯ ಸಾಹಿತ್ಯ ರೂಪದಿಂದ ಬರವಣಿಗೆ ಪ್ರಾರಂಭಿಸಿದ ಕುಂವೀ ಒಬ್ಬ ಸಮರ್ಥ, ಸಶಕ್ತ, ಸೃಜನಶೀಲ ಬರಹಗಾರ. ಅವರ ಕಥಾವಸ್ತು, ವಿಶಿಷ್ಟ, ಶೈಲಿ ಕಥೆಯ ಓಘವು ಸಹೃದಯರ ಕಲ್ಪನೆ ಮೀರಿ ಓತಪ್ರೋತವಾಗಿ ಹರಿಯುವ ರೀತಿ, ಅವರ ಸೃಜನಶೀಲ ಕಲ್ಪನೆ ಇವೆಲ್ಲವೂ ಕುಂ.ವೀ. ಅವರನ್ನು ಬಂಡಾಯದ ನೆಲೆಗಿಂತ ಭಿನ್ನವಾಗಿ ನೋಡುವಂತೆ, ಓದುವಂತೆ ಮಾಡುತ್ತದೆ. ಹಿಂದಿನ ಅಧ್ಯಾಯಗಳಲ್ಲಿ ಸವಿವರವಾಗಿ ಕುಂವೀ ಬಗೆಗೆ ಪರಿಚಯಿಸಲಾಗಿರುವುದರಿಂದ ಇಲ್ಲಿ ಮತ್ತೊಮ್ಮೆ ಅದರ ಪ್ರಸ್ತಾಪ ಅಪ್ರಸ್ತುತವೆನಿಸುತ್ತದೆ.

ಹೀಗೆ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಸಣ್ಣ ಕತೆಗಳು ಬೆಳೆದಿರುವ ಮಾರ್ಗವನ್ನು ಗುರುತಿಸಬಹುದು. ಇಂದು ಸಣ್ಣಕಥೆ ಸಾಹಿತ್ಯವು ತನ್ನೆಲ್ಲಾ ಸಾಧ್ಯತೆಗಳನ್ನು ಬಳಸಿಕೊಂಡು ಶಕ್ತ ಅಭಿವ್ಯಕ್ತಿ ಪ್ರಕಾರವಾಗಿ ಬೃಹತ್ತಾಗಿ ಬೆಳೆದು ಗಟ್ಟಿನೆಲೆ ಕಂಡುಕೊಂಡು ಮುಂದುವರಿಯುತ್ತದೆ ಎಂದು ಹೇಳಬಹುದು.

ಅಡಿಟಿಪ್ಪಣಿ

೧. ಕನ್ನಡ ಕಥನ ಸಾಹಿತ್ಯ-ಸಣ್ಣಕಥೆ - ಜಿ.ಎಸ್. ಅಮೂರ ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು (೨೦೦೩)

೨. ಹೊಸಗನ್ನಡ ಅರುಣೋದಯ -ಶ್ರೀನಿವಾಸ ಹಾವನೂರು; ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು (೧೯೮೦).

೩ An essay on canarese literature ಮುನ್ನುಡಿ, ನಾಗವರ್ಮನ ಕನ್ನಡ ಛಂದಸ್ಸು, ಕಿಟ್ಟೆಲ್ ಬಾಂಸೆಲ್ ಮಿಷನ್, ಮಂಗಳೂರು (೧೯೭೫)

೪ ಸಾಹಿತಿಗಳ ಸಂಘದಲ್ಲಿ - ದೇಜಗೌ; ಉಷಾ ಸಾಹಿತ್ಯ ಮಾಲೆ; ಮೈಸೂರು (೧೯೭೨)

೫ ಹೊಸಗನ್ನಡ ಸಾಹಿತ್ಯ ಚರಿತ್ರೆ - ಎಲ್.ಎಸ್. ಶೇಷಗಿರಿರಾಯರು; ಪು.ನಂ. ೨೬೬; ಅಂಕಿತ ಪುಸ್ತಕ ಪ್ರಕಾಶನ, ಬೆಂಗಳೂರು -೨೦೦೬

ಅಧ್ಯಾಯ 4

ಕುಂವೀ ಕಥೆಗಳ ವಸ್ತು ವೈವಿಧ್ಯ

ಕುಂ.ವೀ. ಪ್ರಸಕ್ತ ತಲೆಮಾರಿನ ಸಮೃದ್ಧ ಬರಹಗಾರ. ಸಾಮಾನ್ಯವಾದ ವಸ್ತುವೊಂದನ್ನು ಎತ್ತಿಕೊಂಡು ಅದನ್ನು ಆಕರ್ಷಕವಾಗಿ ನಿರೂಪಿಸುವ ನೈಪುಣ್ಯ ಕುಂ.ವೀ ಅವರದು. ಇವರ ಕಥೆಗಳನ್ನು ತಾತ್ತ್ವಿಕ, ಸಾಮಾಜಿಕ ಮತ್ತು ರಾಜಕೀಯ ಹಿನ್ನೆಲೆಗಳಿಂದ ವಿಶ್ಲೇಷಿಸಬಹುದು. ಈ ಸಂಬಂಧದಲ್ಲಿ ಕಂವೀ ಕಥೆಗಳ ವಸ್ತು ಮತ್ತು ಉದ್ದೇಶಗಳನ್ನು ಗುರುತಿಸುವ ಕಾರಣದಿಂದ ಅವರ "ಕುಂವೀ ಅವರ ಆಯ್ದ ಕಥೆಗಳು" (೧೯೯೯), '...ಮಣ್ಣೇ ಮೊದಲು' (೨೦೦೭) ಮತ್ತು 'ಕೂಳೆ' (೨೦೦೭) ಕಥಾಸಂಕಲನದ ಕಥೆಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ.

ಸಾಹಿತ್ಯ ರಚನೆಯಾಗುವಾಗ ಅದು ಒಂದು ವಸ್ತುವನ್ನು ಒಳಗೊಂಡಿರುತ್ತದೆ. ಆ ವಸ್ತು ಎರಡು ರೀತಿ ಇರುತ್ತದೆ. ಒಂದು, ಅದು ಪುರಾಣ ಅಥವಾ ಚರಿತ್ರೆಗೆ ಸಂಬಂಧಿಸಿದ್ದು ಮತ್ತೊಂದು ಪ್ರಚಲಿತ ಬದುಕಿಗೆ ಸಂಬಂಧಿಸಿದ್ದು, ಕುಂವೀ ಅವರು ಎರಡನೆಯ ರೀತಿಯಲ್ಲಿ ಅಂದರೆ ಪ್ರಚಲಿತ ಬದುಕಿಗೆ ಸಂಬಂಧಿಸಿದ ವಸ್ತುಗಳನ್ನೇ ಆಯ್ದುಕೊಂಡು ಬಹುಮಟ್ಟಿಗೆ ವಾಸ್ತವ ಚಿತ್ರಣ ನೀಡುವ ಪ್ರಯತ್ನ ಮಾಡುತ್ತಾರೆ.

ಕುಂವೀ ಅವರ ಕಥೆಗಳನ್ನು ನಿಬಂಧ ಬರವಣಿಗೆ ಅನುಕೂಲಕ್ಕಾಗಿ ವಸ್ತುವೈವಿಧ್ಯದ ದೃಷ್ಟಿಯಿಂದ ನಾಲ್ಕು ವಿಭಾಗಗಳಾಗಿ ಮಾಡಿಕೊಳ್ಳಲಾಗಿದೆ.

೧. ವ್ಯಕ್ತಿ ಚಿತ್ರ ಪ್ರಧಾನ ಕಥೆಗಳು

ಡಾ. ರೇವಣ್ಣ ಸಿದ್ದಪ್ಪ, ರುದ್ರಪ್ಪನ ಖಡ್ಗ, ಚರಾಸ್ತಿ, ವಡವಾಟಿಯೂ ಕ್ಲಾರಿನೇಟೂ, ಮಾತೇ ಜ್ಯೋತಿರ್ಲಿಂಗಪ್ಪಾಜಿ, ಕಥೆ ಹೇಳುವ ಕರಿಯಜ್ಜ, ಕೂರ್ಮಾವತಾರ, ಯಂಜಲೆಲೆ ಯಲ್ಲಮ್ತಾಯಿಯ ಜಳಕ ಪ್ರಕರಣವು ಮತ್ತು ಪುನರಪಿ.

೨. ಸ್ತ್ರೀ ಪಾತ್ರ ಪ್ರಧಾನ ಕಥೆಗಳು

ರತ್ನ ಎಂಬ ಹುಡುಗಿಯೂ ಉಗಾದಿ ಎಂಬ ಆಟವೂ, ಶುಲ್ಕ, ಭಗವತಿ ಕಾಡು, ಕುಬುಸ, ಬರಿಗೊಡಗಳು, ಹತ್ಯೆ.

೩. ಜಾತಿ ವರ್ಗ ಸಂಘರ್ಷಗಳ ಚಿತ್ರಿತ ಕಥೆಗಳು.

ರತ್ನ ಎಂಬ ಹುಡುಗಿಯೂ ಉಗಾದಿ ಎಂಬ ಆಟವೂ, ಶುಲ್ಕ, ದೇವರ ಹೆಣ, ಕೆಂಡದ ಮಳೆ, ಕರೆವಲ್ಲಿ ಉದಕವಾಗಿದ್ದವರ ಕಥೆ, ಕೂಳೆ.

೪ ಇತರ ಕಥೆಗಳು

ನೆರಳು, ಅಪೂರ್ವ ಚಿಂತಾಮಣಿಯ ಕಥೆ, ಹೂವು ತರುವ ಮನೆಗೆ, ಮರ್ಕಾಟೋಪಖ್ಯಾನ, ಒಂದು ಪ್ರಶ್ನೆ.

೧. ವ್ಯಕ್ತಿ ಚಿತ್ರ ಪ್ರಧಾನ ಕಥೆಗಳು

ವ್ಯಕ್ತಿ ಚಿತ್ರಗಳನ್ನೇ ಕಥೆಗಳನ್ನಾಗಿಸುವ ಅನೇಕ ಮಾದರಿಗಳು ಕುಂವೀ ಅವರಲ್ಲಿ ಕಾಣಸಿಗುತ್ತವೆ. ಅಂಥ ಕಥೆಗಳಲ್ಲಿ 'ಮಾತೇ ಜ್ಯೋತಿರ್ಲಿಂಗಪ್ಪಾಜಿ' ಪ್ರಮುಖ ಕಥೆ.

“ಮೂಲಿಮನೆ ಮಾತೇ ಜ್ಯೋತಿರ್ಲಿಂಗಪ್ಪನವರು ಅಪ್ಪಟ ಸಜ್ಜನರಾಗಿರುವ ಸಂಗತಿ ಸದರೀ ಗ್ರಾಮದೊಳಗೆ ಕಳೆದ ವಾರದಿಂದ ಚಲಾವಣೆಯಲ್ಲಿದ್ದರೂ ಮೊದಲಿಗೆ ಯಾರೂ ನಂಬಲಿಲ್ಲ”[೧]. ಹೀಗೆ ಆರಂಭವಾಗುವ ಕಥೆಯ ಕೇಂದ್ರ ಮಹಾನ್ ಬಯ್ಗುಳಗಾರ ಲಿಂಗಪ್ಪ. ಇವರು ಕಣೇಕಲ್ಲು ಗ್ರಾಮದ ಗಾಂಧಿವಾದಿ ಗುರುಲಿಂಗಪ್ಪನ ಮಗನಾಗಿದ್ದು, ಲಿಂಗಮೆಚ್ಚಿ ಆಹುದಹುದೆನ್ನುವ ಮನೆತನದವರು. ಬಾಲ್ಯದಲ್ಲಿ ಗಾಂಧಿವಾದದ ಸರಳತೆ, ಸೂಕ್ಷ್ಮತೆಗಳನ್ನು ಕಲಿತರೂ ಸಮಾಜದ ತಾರತಮ್ಯಕ್ಕೆ ಬೇಸರಗೊಂಡು, ದೇಶಭಕ್ತರ ಮಗನಾದ ನೀನು ಬಡತನದ ರೇಖೆಗಿಂತ ಕೆಳಗಿರಲು ಸಾಧ್ಯವಿಲ್ಲವೆಂದು ಹೇಳಲಾಗಿ, ಪ್ರಪ್ರಥಮವಾಗಿ ಲಿಂಗಪ್ಪಾಜಿ ತಮ್ಮ ನಾಲಿಗೆಯನ್ನು ಜಳಪಿಸಿದ್ದು, ಮುಂದೆ “ಮಾತಾಡು ಇಲ್ಲವೆ ಮಡಿ”[೨] ಎಂಬ ನಿರ್ಧಾರಕ್ಕೆ ಬಂದು, ಕುಟುಂಬ ನಿರ್ವಹಣೆಗಾಗಿ ಹೆಂಡತಿ ಪಾರವ್ವಳ ಸಲಹೆಯ ಮೇರೆಗೆ ಬಯ್ಯುವುದನ್ನೇ ವೃತ್ತಿಯಾಗಿಸಿಕೊಂಡರು.

ಮುಂದೆ “ಅವರ ಹೃದಯ ಬಯ್ಗುಳ ಉದ್ಯಾನವನವಾಯಿತು. ಅವರ ನಾಲಿಗೆಯ ಮೃಗಾಲಯದಲ್ಲಿ ಕ್ರೂರಮೃಗಗಳಿಗಿಂತ ಮಿಗಿಲಾದ ವಿವಿಧ ರೀತಿಯ ವಿವಿಧ ಗಾತ್ರದ ಬಯ್ಗುಳು ನಾ ಮುಂದು ತಾ ಮುಂದು ಘರ್ಜಿಸಲಾರಂಭಿಸಿದವು”[೩]. ಈ ರೀತಿಯ ಬಯ್ಗುಳಗಾರ ಲಿಂಗಪ್ಪಾಜಿ ಒಳ್ಳೆ ಹವ್ಯಾಸಿ ಬಯ್ಗುಳಗಾರರ ಚಿತಾವಣೆಗೆ ಸಿಕ್ಕಿ ಕೊತ್ಲಚಿಂತಿಯ ಅನಭಿಷಿಕ್ತ ಪಾಳೇಗಾರರಾದ ರಾಜಾ ಪಂಪನಗೌಡರನ್ನು ಬಯ್ಯುವ ಪಂಥ ಸ್ವೀಕರಿಸಿದರು.

ಪುಂಖಾನು ಪುಂಖವಾಗಿ ಬಳಸಿದ ಪದ ಮತ್ತೆ ಬಳಸದೇ ಬಯ್ದ ಲಿಂಗಪ್ಪನ ಚಮತ್ಕಾರಕ್ಕೆ ಮೆಚ್ಚಿ ರಾಜಾಪಂಪನಗೌಡ, ಅರ್ಧಸೇರು ತೂಕದ ಬೆಳ್ಳಿ ಕಡಗವನ್ನು ಬಹುಮಾನ ನೀಡಿ ಹೊಗಳಿ ಊಟ ಅರ್ಪಿಸಿ ಕಳುಹಿಸಿಕೊಟ್ಟರು. ಸತ್ಕಾರ ಸ್ವೀಕರಿಸಿ ತಮ್ಮೂರಿಗೆ ಮರಳಿದ ಲಿಂಗಪ್ಪಾಜಿ ಯಾರನ್ನು ತಾವು ಬಯ್ಯುವುದಿಲ್ಲವೆಂದು ಶಪಥ ಮಾಡಿ, ಸಾಲೀಗುಡಿಯ ಮಕ್ಕಳಿಗೆ ನೀತಿವಾಕ್ಯಗಳನ್ನು

ಹೇಳಿಕೊಡಲು ಮೊದಲು ಮಾಡಿದರು.

ಕಥಾ ಕಣಜವಾಗಿದ್ದ ಕರಿಯಜ್ಜ 'ಕಥೆಹೇಳೋ ಕರಿಯಜ್ಜ' ಕಥೆಯ ನಾಯಕ. ಕತೆ ಹೇಳುವಲ್ಲಿ ಗಟ್ಟಿಗನಾದ ಕರಿಯಜ್ಜನಿಗೆ ವಸ್ತುವಾಗದ ಚರಾಚರ ವಸ್ತುಗಳೇ ಇರಲಿಲ್ಲ. ಸೋಜಿಗವೆಂದರೆ ಇವನು ಕಥೆ ಹೇಳುವ ರೀತಿಗೆ ಮರುಳಾಗಿ ತಳವಾರ ಚಂದ್ರನ ಮಗಳು ಕೊಟ್ರಿ ಅವನ ಕೈಹಿಡಿದಿದ್ದಳು. ಈತ ಕಥೆಗಳನ್ನು ಹೆತ್ತ ಮಕ್ಕಳಂತೆ ಪ್ರೀತಿಸುತ್ತಿದ್ದ ಪ್ರತಿಯೊಂದು ಕಥೆಯನ್ನು ಹೇಳುವುದರ ಮೂಲಕ ಇನ್ನೊಬ್ಬರಿಗೆ ವರ್ಗಾಯಿಸಿ ಅದು ಬೆಳೆಯುವ ಪರಿಯನ್ನು ನೋಡಿ ಸಂತೋಷಪಡುತ್ತಿದ್ದ.

ಕರಿಯಜ್ಜನ ಕಥೆಯನ್ನು ಅಕ್ಕಪಕ್ಕದ ಗ್ರಾಮದ ಜನರೆಲ್ಲಾ ತಮ್ಮ ಗೃಹಕೃತ್ಯಕ್ಕೂ ಅನಿವಾರ್ಯವಾಗಿಸಿಕೊಂಡಿದ್ದರು. ಮದುವೆಗೊಲ್ಲದ ಮಗಳ ಒಪ್ಪಿಸಲು ಸಾಲ ವಸೂಲಿ ಮಾಡಲು ಹಸುಕಂದಮ್ಮಗಳ ಚಂಡಿ ಕಡಿಮೆ ಮಾಡಲು, ಹಾಯುವ ಎತ್ತುಗಳನ್ನು ಮಣಿಸಲು ಮುಂತಾಗಿ ಇಂಥ ಅಮೂಲ್ಯ ರತ್ನವನ್ನು ಶಿವಪೋಜೆ ರುದ್ರೇಗೌಡರು ತಮ್ಮ ಮಗಳ ಮತಿಭ್ರಮಣೆ ಬಿಡಿಸುವುದಕ್ಕಾಗಿ ಮನೆ ಮಗನಾಗಿ ಮಾಡಿಕೊಂಡರು.

ಉತ್ಸಾಹ ಕಥೆಗಾರ ಕರಿಯಜ್ಜ ಕ್ರಮೇಣ ಉದಾಸೀನನಾದ. ಕಾರಣ ಅರಿಯದ ಜನ ಶತಾಯಗಥಾಯ ಪ್ರಯತ್ನ ಮಾಡಿದರೂ ಕಥೆ ಹೇಳಿಸಲು ಸಾಧ್ಯವಾಗಲಿಲ್ಲ. ಕೊನೆಗೆ ಕರಿಯಜ್ಜನ ಒಳಗೇ ಇರುವ ಕಥೆಗಳು ಸಮಾಲೋಚನೆ ನಡೆಸಿ ಅವರ ನವರಂದ್ರಗಳಲ್ಲಿ ನುಗ್ಗುವ ತೀರ್ಮಾನ ತೆಗೆದುಕೊಂಡು ಕಾರ್ಯಪ್ರವೃತ್ತರಾದರೂ ಕರಿಯಜ್ಜ ಮೌನವೇ ಆಭರಣವಾಗಿದ್ದನು.

'ವಡವಾಟಿಯಾ; ಕ್ಲಾರಿನೇಟೂ', ಕತೆಯ ನಾಯಕ ನರಸಿಂಹಲು ವಡವಾಟಿ. ಈತ ಕ್ಲಾರಿನೇಟ್ ಎಂಬ ವಿದೇಶೀ ವಾದ್ಯಕ್ಕೆ ದೇಸಿ ಮೆರಗು ನೀಡಿದ ಕಲಾವಿದ. ಕ್ಲಾರಿನೆಟ್ ವಾದ್ಯವನ್ನು ಪ್ರಾಣದಷ್ಟೇ ಪ್ರೀತಿಸುತ್ತಿದ್ದ ವಡವಾಟಿ ಅವರು ಒಮ್ಮೆ ಅದನ್ನು ಕಳೆದುಕೊಳ್ಳುತ್ತಾರೆ.

ನಿರೂಪಕರ ಸಲಹೆ ಸಹಕಾರದಿಂದ ಹುಡುಕುವ ಪ್ರಯತ್ನ ಮಾಡಿದಾಗ್ಯೂ ಜೀವಂತಶವದಂತೆ ಇರುತ್ತಿದ್ದ ವಡವಾಟಿಯವರಿಗೆ ಕಥೆಯ ಕೊನೆಯಲ್ಲಿ ಬಸ್ ನಿಲ್ದಾಣದಲ್ಲಿ ಅವರ ಜೀವತಂತು ಕ್ಲಾರಿನೇಟ್ ಸಿಗುತ್ತದೆ, ಕಂಡು ಕಣ್ಣೀರಾಗುತ್ತಾರೆ ಕಲಾವಿದ. ಒಬ್ಬ ಕಲಾವಿದನಿಗೆ ತನ್ನ ವಾದ್ಯವು ಎಷ್ಟು ಶ್ರೇಷ್ಠ ಭಾವನಾತ್ಮಕಕೊಂಡಿ ಎಂಬುದನ್ನು ಬಿಡಿಸಿಡುತ್ತಾರೆ ಕುಂವೀ.

ಕುಂವೀ ಅವರ ಕಾಲೇಜು ದಿನಗಳಲ್ಲಿ ತಮ್ಮ ಊರಿನಲ್ಲಿ ಕಂಡ, ಒಡನಾಡಿದ ವ್ಯಕ್ತಿಯ ಚಿತ್ರವೇ 'ಡಾ. ರೇವಣ್ಣಸಿದ್ದಪ್ಪ' ಕಥೆ. ಊರಿನ ಸುಪರಿಚಿತ ಡಾಕ್ಟರ್ ರೇವಣ್ಣ ಸಿದ್ದಪ್ಪ, ಉದಾರಿ, ಉತ್ತಮ ಕೈಗುಣದ ವೈದ್ಯನೆನಿಸಿದ್ದರು. ನಿರೂಪಕರ ತಮ್ಮ ಸ್ನೇಹಿತರೊಡನೆ 'ಬಹಿರಂಗ' ಎಂಬ ವಾರಪತ್ರಿಕೆ ಪ್ರಾರಂಭಿಸಿದ್ದರು. ಅದಕ್ಕೆ ಡಾಕ್ಟರರಿಂದ ೧೦೦ ರೂ. ಹಣವನ್ನು ಪಡೆದು ಪೋಷಕರಾಗಿಸಿಕೊಂಡಿದ್ದು ಸರಿಯಷ್ಟೇ. ಒಮ್ಮೆ ನಿರೂಪಕರು ತಮ್ಮ ಸ್ನೇಹಿತನೊಡನೆ ಜಿಲ್ಲಾ ಕೇಂದ್ರದ ಪೋಲೀಸ್ ಠಾಣೆಗೆ ಹೋದಾಗ ಬಗೆಬಗೆಯ ಚಿತ್ರಪಟಗಳಲ್ಲಿ ರೇವಣ್ಣಸಿದ್ದಪ್ಪರನ್ನು ಗುರುತಿಸುತ್ತಾರೆ. ಚಟಪಟಿಕೆ ಪ್ರಾರಂಭವಾಗಿ, ಹೇಳದೆ ಇರಲಾರದೆ ಡಾಕ್ಟರ್ ಮುಂದೆ ಪ್ರಸ್ತಾಪಿಸುತ್ತಾರೆ.

ವಿಷಯ ತಿಳಿದ ರೇವಣ್ಣಸಿದ್ದಪ್ಪ ಭಯಾತಂಕದಿಂದ ನಡುಗಿ ಹೋಗಿ, ನಿರೂಪಕರನ್ನು ಓಲೈಸುವ ಪ್ರಯತ್ನ ಮಾಡುತ್ತಾರೆ. ಕಾಲಸರಿದಂತೆ, ರಾತ್ರಿಯನ್ನು ಕಾರ್ಯಕ್ಷೇತ್ರಮಾಡಿಕೊಂಡು ಡಕಾಯಿತಿ ನಡೆಸುತ್ತಾ, ಹಗಲು ಸಭ್ಯನಾಗಿದ್ದ ರೇವಣ್ಣಸಿದ್ದಪ್ಪ ಪೋಲೀಸರ ಗುಂಡಿಗೆ ಬಲಿಯಾಗುತ್ತಾನೆ.

'ಚರಾಸ್ತಿ' ಕಥೆಯ ನಾಯಕ ಶೆಟ್ರು ಗುರುಸಾಂತಪ್ಪ, ಈಶಾನ್ಯ ದಿಕ್ಕಿನಿಂದ ಬರಿಗೈಯಲ್ಲಿ ಪ್ರವೇಶಿಸಿದ ಬಣಜಿಗ ಗುರುಸಾಂತಪ್ಪ ಊರವರ ಒತ್ತಾಸೆಯಿಂದ ನೆಲೆನಿಲ್ಲುತ್ತಾನೆ. ಮಾರಮ್ಮನ ಉರಿಕೋಪದಿಂದ ಸರ್ವನಾಶವಾದ ಊರಿಗೆ ಬಣಜಿಗನೊಬ್ಬ ಈಶಾನ್ಯ ದಿಕ್ಕಿನಿಂದ ಪ್ರವೇಶಿಸಿದರೆ ಊರಿಗೆ ಶ್ರೇಯಸ್ಸೆಂದು ಬಗೆದ ಊರವರು ಅವನಿಗೆ ನೆಲೆ ನಿಲ್ಲಲು ಸಹಕಾರ ನೀಡುತ್ತಾರೆ. ಒಂದು ಪುಟ್ಟ ಅಂಗಡಿ ವ್ಯಾಪಾರ ಪ್ರಾರಂಭಿಸಿದ ಗುರುಶಾಂತಪ್ಪ ಲೇವಾದೇವಿ ವ್ಯವಹಾರದಿಂದ ಕಾಸಿಗೆ

ಕಾಸು ಕೂಡಿಸಿ ದೊಡ್ಡ ಕುಳವಾಗುತ್ತಾನೆ. ಜಿಪುಣ ಶೆಟ್ಟು ಎಲ್ಲಾ ಚರಾಸ್ತಿಯನ್ನು ಸ್ಥಿರಾಸ್ಥಿ ಮಾಡುವ ಭ್ರಮೆಗೆ ಒಳಗಾಗಿ ಹುಚ್ಚನಾದ ಕಥೆ ಚರಾಸ್ತಿ. ಈ ಕಥೆಯು 'ಆಸ್ತಿ' ಕಾದಂಬರಿಯಾಗಿ ಬೆಳೆದಿರುವುದು ಕುಂವೀ ಅವರ ಸೃಜನಶೀಲ ಬರವಣಿಗೆಯ ದೈತ್ಯ ಶಕ್ತಿಗೆ ನಿದರ್ಶನ.

ವ್ಯಕ್ತಿಯ ಒಂದು ಸ್ವಭಾವ, ಕೌಶಲವನ್ನು ತೆರೆದಿಡುತ್ತಾ ಸಾಗುವ ಕುಂವೀ, 'ರುದ್ರಪ್ಪನ ಖಡ್ಗ' ಕಥೆಯಲ್ಲಿ ರುದ್ರಪ್ಪನ ಪಿತ್ರಾರ್ಜಿತ ಆಸ್ತಿಯಾದ ಖಡ್ಗದ ಮೇಲಿನ ವ್ಯಾಮೋಹವನ್ನು ಚಿತ್ರಿಸುತ್ತಾರೆ. ಹೆಂಡತಿಯ ಮನೆಗೆ ಮನೆ ಅಳಿಯನಾಗಿ ಬರುತ್ತಾನೆ ರುದ್ರಪ್ಪ.

ಸಭ್ಯ ನಡವಳಿಕೆಯ ಶ್ರಮಜೀವಿಯಾಗಿರುತ್ತಾನೆ. ಹೀಗಿರಲು ಒಮ್ಮೆ ಪಿತ್ರಾರ್ಜಿತ ಆಸ್ತಿ ಪಡೆಯುವ ಹಂಬಲದಿಂದ ತನ್ನೂರಿಗೆ ಹೋಗುತ್ತಾನೆ. ತಂದೆಯ ದರ್ಪ, ದುಂದುಗಾರಿಕೆಯ ಬದುಕಿನಿಂದ ಆಸ್ತಿಯೆಲ್ಲ ಕರಗಿಹೋಗಿರುತ್ತದೆ, ಜತೆಗೆ ಒಡಹುಟ್ಟಿದ್ದವರು ಕುತಂತ್ರವು ಸೇರಿಹೋಗುತ್ತದೆ. ರುದ್ರಪ್ಪನ ಪಾಲಿಗೆ ಆಸ್ತಿ ಲಭಿಸುವುದಿಲ್ಲ. ಆ ಊರಿನ ಪಟೇಲ ರುದ್ರಪ್ಪನನ್ನು ಸಮಾಧಾನ ಮಾಡಿ, ವಸ್ತುಸ್ಥಿತಿ ತಿಳಿಸಿ ಒಂದು ತುಕ್ಕುಹಿಡಿದ ಖಡ್ಗವನ್ನು ನಿನ್ನ ವಂಶಜರ ಪರಾಕ್ರಮದ ಸಂಕೇತವೆಂದು ಹೇಳಿ ಕೊಟ್ಟು ಕಳುಹಿಸುತ್ತಾನೆ.

ಖಡ್ಗದೊಂದಿಗೆ ಹೆಂಡತಿಯ ಮನೆಗೆ ಹಿಂದುರುಗಿದ ರುದ್ರಪ್ಪನ ನಡವಳಿಕೆಯೇ ಬದಲಾಗುತ್ತದೆ. ಖಡ್ಗದ ಗುಣಗಾನಕ್ಕೆ ತೊಡಗುತ್ತಾನೆ. ಆ ಖಡ್ಗದ ಉಪಟಳದಿಂದ ರೋಸಿಹೋದ ಆತನ ಹೆಂಡತಿ ಮತ್ತು ಅತ್ತೆ ಅದರ ನಾಪತ್ತೆಗೆ ನಾನಾ ತಂತ್ರ ರೂಪಿಸಿ ಸೋತು ಕಡೆಗೆ ವೀರಭದ್ರ ಗುಡಿಯ ಒಳಗೆ ಇಟ್ಟು ಬರುತ್ತಾರೆ. ಖಡ್ಗಕ್ಕಾಗಿ ಶೋಧಿಸಿ ಪರಿಸ್ಥಿತಿಯನ್ನು ಅರಿತು ಅಸಹಾಯಕನಾದ ರುದ್ರಪ್ಪ ಗುಮ್ಮನಗುಸಕನಂತೆ ಸುಮ್ಮನಾಗುತ್ತಾನೆ; ಮೌನಿಯಾಗುತ್ತಾನೆ.

'ಕುರ್ಮಾವತಾರ' ಕಥೆಯ ವಸ್ತು ಗಾಂಧೀವಾದದ ಆದರ್ಶದ ಬೆನ್ನು ಹತ್ತಿ ಹೋಗುವ

ಆನಂದರಾಯರು ಸಂಸಾರವನ್ನು ನಿರ್ಲಕ್ಷಿಸುವ ಹೆಂಡತಿ ಮಗನನ್ನು ಕಳೆದುಕೊಂಡು ಪಾಪಪ್ರಜ್ಞೆಯಿಂದ ಹೊರಬರಲು ಸೊಸೆ ಮೊಮ್ಮಗನನ್ನು ಕಾಪಾಡುವ ಹೊಣೆ ಹೊತ್ತವರು.

ಗಾಂಧೀಜಿಯವರ ಬಗೆಗಿನ ಧಾರವಾಹಿಯಲ್ಲಿ ಗಾಂಧೀಪಾತ್ರ ಮಾಡಿದ ರಾಯರು ಧಾರವಾಹಿಯು ಗಾಂಧಿ ಹತ್ಯೆಯ ಸನ್ನಿವೇಶದಲ್ಲಿಯೇ ಮರಣವನ್ನಪ್ಪುತ್ತಾರೆ. ಗೂಡ್ಸೆ ಪಾತ್ರದ ಇಕ್ಬಲ್ ರಾಯರ ಸಾವಿಗೆ ತಾನೇ ಕಾರಣನೆಂದು ಹೇಳಿಕೊಂಡು ತಿರುಗುತ್ತಾನೆ. ಕೋಮುವಾದದ ಗಲಭೆಗೆ ಕಾರಣವಾಗಬಹುದಾದ ಎಳೆಯನ್ನು ಮಾನವೀಯ ರೂಪಕೊಟ್ಟು ಕಥೆಯನ್ನು ಮುಕ್ತಾಯಗೊಳಿಸುತ್ತಾರೆ ಕುಂವೀ.

ಕಲ್ಪನಾತಿಶಯವಾದ ವರ್ಣನೆಯನ್ನು ಹೊಂದಿರುವುದು 'ಯಂಜಲಲೆಯಲ್ಲಮ್ಮಾಯಿಯ ಜಳಕ ಪ್ರಕರಣ', "ಸತ್ಯಯುಗದಾದಿಯಲ್ಲಿ ಹುಟ್ಟಿ, ಕೃತಯುಗದಲ್ಲಿ ಮೈನೆರೆದು, ತ್ರೇತಾಯುಗದಲ್ಲಿ ಸೋಬನ ಮಾಡಿಕೊಂಡು, ದ್ವಾಪರಯುಗದಲ್ಲಿ ಹದಿನೆಂಟು ಅಕ್ಷೋಹಿಣಿ ಮಕ್ಕಳನ್ನು ಹಡೆದಾಕಿ"' ಯಲ್ಲಮ್ಮಾಯಿ.

ಕಾಲಭೈರವನ ಸ್ತ್ರೀರೂಪದಂತಿದ್ದ ಯಲಮ್ಮಾಯಿ ಜಳಕ ಮಾಡುವುದು ಲೋಕಕ್ಕೆ ಕೇಡು ಎಂಬ ನಂಬಿಕೆಯನ್ನೇ ಜೀವಾಳವಾಗಿಸಿಕೊಂಡು, ಸತ್ಯಯುಗದಿಂದ ಕಲಿಯುಗದವರೆಗೂ ಬದುಕಿ ಬಂದಿದ್ದ ಈಕೆ ಈ ಯುಗದಲ್ಲಿ ರೋಚಕವಾಗಿ ಅಂತ್ಯ ಕಾಣುವ ರಮ್ಯಾದ್ಭುತ ವರ್ಣನೆ ಒಳಗೊಂಡಿರುವ ಕಥೆಯೇ ಯಂಜಲಲೆ ಯಲಮ್ಮಯಿಯ ಜಳಕ ಪ್ರಕರಣ. ಈ ಪಾತ್ರ ಕುಂವೀ ಅವರ ಅರಮನೆ ಕಾದಂಬರಿಯಲ್ಲಿ ಸ್ಥಾನ ನಡೆದಿದೆ.

ಪುನರ್ಜನ್ಮದ ಪೂರ್ವಾಗ್ರಹಕ್ಕೆ ಒಳಗಾಗಿ ಮನಸ್ಸನು ಮರೆತು ಬದುಕುವ ವ್ಯಕ್ತಿ ಚಿತ್ರವಿರುವ ಕಥೆ 'ಪುನರಪಿ' ಈ ಕಥೆಯಲ್ಲಿ ಗ್ರಾಮೀಣ ಬದುಕಿನ ಕಲ್ಪಿತ ವರ್ಣನೆಗಳನ್ನು ಮಾಡುವ ಕಥೆಗಾರರು ಮೂಢನಂಬಿಕೆಗೆ ಒಳಗಾಗಿ ವಾಸ್ತವ ಮರೆತು ಬದುಕುವುದನ್ನು ವ್ಯಂಗ್ಯಮಾಡುತ್ತಾರೆ ಎನ್ನಬಹುದು.

ಪುನರ್ಜನ್ಮದ ಮೋಡಿಗೆ ಒಳಗಾದ ಕಥಾನಾಯಕ, ಮುಂದಿನ ಜನ್ಮದಲ್ಲಿ ಹುಟ್ಟುವ ಬಡಕುಟುಂಬವನ್ನು ಶ್ರೀಮಂತಗೊಳಿಸುವ ಹುನ್ನಾರ ನಡೆಸುತ್ತಾನೆ. ಯಾವಾಕೆಯ ಉದರದಿಂದ ಜನಿಸುವೆನೋ ಎಂಬ ಭ್ರಮೆಯಿರುತ್ತದೋ ಆಕೆಯೇ ಸಾವನ್ನಪ್ಪುವ ದುರಂತ ಚಿತ್ರಣದಿಂದ ಮೂಡನಂಬಿಕೆಯನ್ನು ವಿಡಂಬಿಸುತ್ತಾರೆ ಕುಂ.ವೀ.

ಹೀಗೆ ವ್ಯಕ್ತಿ ಚಿತ್ರಣವಿರುವ ಕಥೆಗಳನ್ನು ಹೆಸರಿಸಬಹುದು. ಕನ್ನಡ ಕಥೆಗಳ ಕಾಮನಬಿಲ್ಲಿನಲ್ಲಿ ಕುಂವೀ ಅವರು ತಮಗೊಂದು ವಿಶಿಷ್ಟ ಬಣವನ್ನು ಕಲ್ಪಿಸಿಕೊಂಡವರು. "ಓದುಗರ ಮನಸ್ಸಿನಾಳವನ್ನು ಹೊಕ್ಕು ಗಪ್ಪನೆ ಹಿಡಿದುಬಿಡುವ ಅವರ ಕಥೆಗಳಲ್ಲಿ ಜೀವಂತಶಕ್ತಿಯಿದೆ. ಹಾಗಾಗಿಯೇ ಕುಂವೀ ಕಥಾ ಲೋಕದ ಮಹಾನ್‌ಶಕ್ತಿಯಾಗಿ ನಿಲ್ಲುತ್ತಾರೆ"[೫].

ಸ್ತ್ರೀ ಪಾತ್ರ ಪ್ರಧಾನ ಕಥೆಗಳು

"ಭಗವತಿ ಕಾಡು", ಮಹಿಳಾ ಕೇಂದ್ರಿತ ನೆಲೆಯನ್ನು ಹೊಂದಿರುವ ಕಥೆಯೆನ್ನುವುದರಲ್ಲಿ ಎರಡು ಮಾತಿಲ್ಲ. ಕಾರಣವಿಷ್ಟೇ ತಮ್ಮ ಸಾಂಸಾರಿಕ ಬದುಕಿನಲ್ಲಿ ಅತ್ತೆ ಸೊಸೆಯರು ಎಂದ ತಕ್ಷಣ ಕದನವೆನ್ನುವುದು ಸರ್ವ ಸಾಮಾನ್ಯ ಹಾಗೇಯೇ ಇಲ್ಲಿ ಅತ್ತೆ ಸೊಸೆಯರು ಜಗಳವಾಡಿದರೂ, ತಮ್ಮ ಕುಟುಂಬದ ಮೂಲ ಆಸ್ತಿತ್ವಕ್ಕೆ ಧಕ್ಕೆ ಉಂಟಾದಾಗ, ಹೊರಗಿನ ಆಕ್ರಮಣಗಳನ್ನು ತಡೆಯಲು ಶತ್ರುಗಳಂತಿದ್ದ ಅತ್ತೆ ಸೊಸೆಯರು ಒಟ್ಟಾಗಿ ಪ್ರತಿಭಟಿಸುವರು.

ಒಂದು ಸಂಸಾರವೆಂದ ಮೇಲೆ ಅತ್ತೆ-ಸೊಸೆ, ಗಂಡ-ಮಗ, ಮುಂತಾದ ಸಂಬಂಧಗಳ ಬೆಸುಗೆಯಿರುತ್ತದೆ. ಭಾರತೀಯ ಸಂಪ್ರದಾಯದಲ್ಲಿ ಒಂದರ ಸಂಬಂಧ ಮತ್ತೊಂದರಲ್ಲಿ ಅಡಕವಾಗಿರುತ್ತದೆ. ಹಾಗೇ ಅದನ್ನು ನಿಯಂತ್ರಿಸುತಲಿದ್ದು ಮಾರ್ಗದರ್ಶನ ಮಾಡುವ ಬೆಸುಗೆಗಳಾಗಿರುತ್ತವೆ. ಈ ನೆಲೆಯಲ್ಲಿ ನೋಡುವುದಾದರೆ, ಕಥೆಯಲ್ಲಿ ಬರುವ ಅತ್ತೆ 'ಸೇವುಡವ್ವ'

ಮತ್ತು ಸೊಸೆ ನಾಗವ್ವ ಇವರಿಬ್ಬರಲ್ಲಿ ವಯೋಮಾನ ಮತ್ತು ಕಾಲಮಾನಕ್ಕನುಗುಣವಾಗಿ ಗುಣಗಳು ಭಿನ್ನವಾಗಿರುವುದು ಕಂಡುಬರುತ್ತದೆ. ಹಾಗೆ, ಭಿನ್ನ ಮನೋಧರ್ಮದ ಭಿನ್ನ ಪರಿಸರದಲ್ಲಿ ಬೆಳೆದು ಗಂಡನ ಮನೆಯಲ್ಲಿ ಬೆಳಕಾಗಿ ಬೆಳಗುವ ದೀವಿಗೆಗಳಿವು. ಈ ಎರಡು ಹಣತೆಗಳ ನಡುವೆ ಒಂದು ಕಡೆ ಮಗನಾಗಿ ಮೊಗದೊಂದು ಕಡೆ ಗಂಡನಾಗಿ 'ಭರಮು' ಕಂಬಚ್ಚಿನ ಇಕ್ಕಟ್ಟಿನಲ್ಲಿ ತಿಣುಕುವುದು ಕಂಡುಬರುತ್ತದೆ. ಇದರಲ್ಲಿ ಒಂದು ಸುಂದರ ಸಾಮಾಜಿಕ ಚೌಕಟ್ಟನ್ನು ಪ್ರತಿಬಿಂಬಿಸುವ, ಹಾಗೇ ಒಂದು ಹೆಣ್ಣು ತನ್ನ ಕುಟುಂಬದಲ್ಲಿ ತನ್ನ ಹಿಡಿತವನ್ನು ಸಾಧಿಸಲು ಹೇಗೆ ಪ್ರಯತ್ನಿಸುವಳು ಎನ್ನುವುದರ ಅರಿವಿದೆ. ಇದನ್ನು ಮನಗಂಡ ಅತ್ತೆ ಸೆವುಡವ್ವ ಸೊಸೆ ನಾಗವ್ವನನ್ನು ಹಿಡಿತದಲ್ಲಿಡಲು, ಹಾತೊರೆಯುವಳು. ಇದರ ಜೊತೆಯಲ್ಲಿ ಮಗನ ಗುಣಮಾಡಿ, ಮದುವೆಯಾಗಿ ಬಂದು ಸೊಸೆ ಮುಂದೆ ಆತನಲ್ಲಿರುವ ದೌಬಲ್ಯಗಳನ್ನು ಮುಚ್ಚಿಡಬೇಕು ಎಂಬ ಹಿನಲ್ಲೆಯಲ್ಲಿ ಆತನನ್ನು ಸಮರ್ಥಿಸಿಕೊಳ್ಳುವಳು. ಈ ನಿಟ್ಟಿನಲ್ಲಿ ಆಕೆ ಭರಮನಿಗೆ "ಲೋ ಜೋಗಮ್ನಂಥೋನೆ.... ಮಾಡಿಕ್ವಂಡೋಳ್ಗೆ ಇಟಾಕೊಂದು ಸೊಡ್ಲ ಕ್ಷಟ್ರೆ ಮುಂದೆ ಬಾಳೂವೆ ನಡೆದೀತೆ.... ಸಣ್ಣಪುಟ್ಟ ತೆಪ್ಪು ಕಂಡುಹಿಡ್ದು ಯೆಂಡ್ತೀ ಮೊಗ್ಗು ಮರೀತಿರಬೇಕು.... ಅದು ಗಂಡಸ್ರ ಲಚ್ಚಣ...."೧ ಹೀಗೆ ಪ್ರೇರೇಪಿಸುವಳು. ಇಂಥ ವಿಲಕ್ಷಣ ಸಂಸಾರದಿಂದ ದೂರ ಇದ್ದ ಭರಮ್ಮ ಮುಂದೊಂದು ದಿನ ತನಗೆ ಗೊತ್ತಿಲ್ಲದಂತೆ ತನ್ನ ಸಂಸಾರವನ್ನು ಅತಂತ್ರ ಸ್ಥಿತಿಗೆ ತಳ್ಳುವನು. ಇದರಿಂದ ಈ ಊರಿನ ಗೌಡನ ಗುಲಾಮನಾಗಿ ಹಂಗಿನ ಆಳಾಗುವನು ಇದನ್ನು ಅರಿತ ಗೌಡ ದಲಿತಕೇರಿಯ ಭರಮನ ಮನೆ ಮುಂದಿನ ಬೇವಿನ ಮರ ಕಡಿಯಲು ಪ್ರೇರೇಪಿಸುವನು. ಲಾಭದ ದೃಷ್ಟಿಯಿಂದ ಇಲ್ಲಿ ಬೇವಿನ ಮರ ಕೇವಲ ಬೇವಿನ ಮರವಾಗಿರಲಿಲ್ಲ. ಅದು ಇಡೀ ದಲಿತಕೇರಿಯ ಆರಾಧ್ಯದೈವ. ಸಾಂಸ್ಕೃತಿಕ ಬದುಕಿನಲ್ಲಿ ಅದು ಒಳನಾಡಿಯಾಗಿ ಜನರಲ್ಲಿ ಶಾಶ್ವತವಾಗಿ ಬೆರೆತು ಹೋಗಿತ್ತು. ಹಲವಾರು ಸಂದರ್ಭಗಳಲ್ಲಿ ಸೆವುಡವ್ವ ಮತ್ತು ನಾಗವ್ವನಿಗೂ ಪ್ರೀತಿಯ ಪೂಜ್ಯ ನೆಲೆಯಾಗಿತ್ತು. ಇಲ್ಲಿ ಗಮನಿಸಬೇಕು ಗ್ರಾಮೀಣರ ಬದುಕನ್ನು ತೊಂಭತ್ತು ಭಾಗ ದೇವರು ಅಥವಾ ನಂಬಿಕೆಗಳು

ನಿಯಂತ್ರಿಸುತಲಿರುತ್ತವೆ. ಇದಕ್ಕೆ ಸಾಕ್ಷಿ ಬೇವಿನಮರ. ಬೇವಿನ ಮರ ಕಡಿಯಲು ಬಂದವರನ್ನು ಊರಿನ ಜನತೆ ಜೊತೆಯಾಗಿ ಮರ ಕಡಿಯುವ ಕೈಯ ನಿಯಂತ್ರಿಸುವರು. ಅತ್ತೆ-ಸೊಸೆಯರು ಒಗ್ಗಟ್ಟಾಗಿ ತಮ್ಮ ಆಸ್ತಿತ್ವವನ್ನು ತಮ್ಮ ಸಂಪ್ರದಾಯವ್ನನು ಉಳಿಸಿಕೊಳ್ಳಲು ಹೋರಾಟ ಮಾಡುವರು. ಇದು ಗ್ರಾಮೀಣ ಬದುಕಿನಲ್ಲಿ ಕಾಣ ಬರುವ ಒಂದು ಅನನ್ಯ ಸಂಬಂಧಕ್ಕೆ ಸಾಕ್ಷಿಯಾಗಿದೆ.

ಕುಬುಸ ಕಥೆಯ ಮೂಲಕ ಕುಂವೀ ಧಾರುಣತೆಯ ಅನನ್ಯವಾದ ಇನ್ನೊಂದು ಪ್ರಪಂಚದ ಅನಾವರಣ ಮಾಡುವರು. ಈ ಕಥೆಯಲ್ಲಿ ಶಿಲಾಯುಗ ಕಾಲದ ಲಕ್ಷಣ, ಸ್ವಭಾವಗಳನ್ನು ಉಳ್ಳ ವಡ್ಡಟ್ಟಿಯು ಆಧುನಿಕ ಪ್ರಪಂಚದ ಯಾವ ಸಂಪರ್ಕ ಸಾಧನಗಳು ಇಲ್ಲದೆ ಇರುವ, ನಾಗರೀಕ ಪ್ರಪಂಚದ ನಡುವಿದ್ದರು ಪ್ರತ್ಯೇಕಗೊಂಡಿರುವ ಒಂದು ಹಳ್ಳಿ. ಕುಂವೀ ಕಥೆಗಳಲ್ಲಿ ಇರುವ ವಿಷಾದದ ಛಾಯೆ ಇಂಥದ್ದು, ನಾಗರೀಕತೆಯ ತುತ್ತತುದಿಯನ್ನು ಪ್ರವೇಶಿದ್ದೇನೆ ಎಂದು ಬೀಗುವ ಓದುಗವರ್ಗದ ಕಲ್ಪನೆಯನ್ನು ಘಾಸಿಗೊಳಿಸುವ ಅನೇಕ ಪರಿ ಅವರ ಕಥೆಗಳಲ್ಲಿ ಕಾಣಸಿಗುತ್ತವೆ.

ಕುಬುಸ ಕಥೆಯಲ್ಲಿ ಬಂಡೆವಜ್ಜಿ ಮತ್ತು ಕಮಲಳ ಮೂಲಕ ಆಧುನಿಕತೆ ಮತ್ತು ಸಂಪ್ರದಾಯ ಬದ್ದ ನಂಬಿಕೆಗಳ ಒಂದು ಘರ್ಷಣೆಯನ್ನು ಕಾಣಬಹುದು. ಹೊರ ಪ್ರಪಂಚವನ್ನೇ ಕಾಣದ 'ಬಂಡವಜ್ಜಿ' ತನ್ನ 'ವಡ್ಡಟ್ಟಿಯನ್ನೆ' ಒಂದು ಜಗತ್ತು ಎಂದು ಭಾವಿಸಿಕೊಂಡು ಅದರೊಳಗಿರುವ ನೋವು-ನಲಿವು, ಸುಖ-ದುಃಖಗಳಿಗೆ ಸ್ಪಂದಿಸುವ ಸೂಕ್ಷ್ಮ ಸ್ವಭಾವದವಳು. ಮಗ-ಸೊಸೆ ಸತ್ತ ನಂತರ ಮೊಮ್ಮಗ ಮಿಸ್ಟರ್ ವಡವಟ್ (ನೆಟ್ಟಕಲ್ಲ)ನನ್ನು ಸಾಕಿ ಸಲಹುವಳು.

ಅದು ಆಕೆಯ ಒಂದು ತಪಸ್ಸು. ನಮ್ಮ ಕಾಲದ ಅನೇಕ ಕಥೆಗಳಲ್ಲಿ ರೂಪಿತಗೊಂಡ ಸ್ತ್ರೀ ಪಾತ್ರಗಳು ಕೇವಲ ಲೈಂಗಿಕಾಸಕ್ತಿಯ ಕೇಂದ್ರ ಬಿಂದುಗಳು. ಕುಂವೀ ಅಧುನಿಕ ಜಗತ್ತಿಗೆ ಬಹುಮುಖ ಸಾಂಸ್ಕೃತಿಕ ಹಿನ್ನಲೆಯಲ್ಲಿರುವ ಶ್ರಮ ಜೀವಿಗಳ, ಸ್ತ್ರೀಯರ ದುಸ್ತರ ಬದುಕನ್ನು ಚಿತ್ರಿಸುವುದು ಬೆರಗುವುಟ್ಟಿಸುವುದು. ಬಂಡೆವಜ್ಜಿ ತನ್ನ ಮೊಮ್ಮಗ ಆಧುನಿಕ ಜಗತ್ತಿನ ಪ್ರವೇಶವನ್ನು ಪಡೆದ

ನಂತರ ಆತನ ನೆನಪಿನಲ್ಲೇ ಏಕಾಂಗಿಯಾಗಿ ಜೀವನ ಸವೆಸುತ್ತಿರುವಳು.

ಆಕೆಗೆ ವಡ್ಡಟ್ಟಿಯಲ್ಲಿ ಬೇರೆ ಯಾರು ಸಂಬಂಧಿಕರು ಇರುವುದಿಲ್ಲ. ಜೊತೆಗೆ ಕಾಲನ ಸನಿಹಗೊಂಡಿದಳು. ಆಧುನಿಕ ಜಗತ್ತಿನಲ್ಲಿ ಸ್ತ್ರೀಯರು ಆರ್ಥಿಕ ಸಬಲತೆಯ ಹಿನ್ನಲೆಯಲ್ಲಿಯೇ ಬದುಕನ್ನು ಸುಭದ್ರಗೊಳಿಸಿಕೊಳ್ಳಬಹುದು, ಹೆಣ್ಣು ಒಂಟಿಯಾಗಿ ಜೀವಿಸಬಲ್ಲಳು ಎಂಬಂಥ ಯಾವ 'ಇಸಂ' ಇಲ್ಲದೆ ಅದರ ಅಲೋಚನೇಯ ಪ್ರಕ್ರಿಯೆಯೂ ಇಲ್ಲದೆ ಹಾಗೇ ಬದುಕು ಸಾಗಿಸುವ ಗ್ರಾಮ ಭಾರತದ ಸ್ತ್ರೀ ಪ್ರಪಂಚವನ್ನು ಬಂಡೆವಜ್ಜಿಯ ಮೂಲಕ ಕುಂವೀ ಅನಾವರಣಗೊಳಿಸುವರು. ತುಂಬ ಮುಖ್ಯ ಸಂಗತಿಗಳೆಂದರೆ, ಆಕೆ ತನ್ನ ಗಂಡನ ದುಡಿಮೆ, ಬದುಕು ಇವುಗಳನ್ನು ಕುರಿತು ಮತನಾಡುವಳು.

ಆಕೆಯ ಮನಸ್ಸಿನಲ್ಲಿ ಗಂಡ ಸತ್ತ ನಂತರವು ಇರುನ ಇಂತ ಜಾಗೃತ ಅವಸ್ಥೆಯೇ ಬಂಡೆವಜ್ಜಿ ಹಾಗೂ ಅಂಥ ಅನೇಕ ಗ್ರಾಮೀಣ ಸ್ತ್ರೀಯರ ನೈತಿಕ ಬಲವು ಆಗಿ ಬಿಡುವುದು. ಇನ್ನೊಂದು ಮುಖ್ಯ ಸಂಗತಿ ಎಂದರೆ, ಆಕೆಯ ಮೊಮ್ಮಗ ವಡವಟ್ ಉರುಫ್ ನೆಟ್ಟಕಲ್ಲು ಕೆಲಸಸಿಕ್ಕಿ ಮನೆಗೆ ಬಂದದ್ದೆ ತನ್ನ ಬದುಕಿನ ಆನಂತ ಸುಖದ ಕ್ಷಣ ಎಂದು ಭಾವಿಸುವ ಅಜ್ಜಿ, ಕುಸುಬತೂಟ್ಟ ಹುಡುಗಿಯ ಪೋಟೋ ಹಿಡಿದು ಮದುವೆಯಾಗುತ್ತೇನೆ ಎಂದಾಗ ಆಕೆ ಅದನ್ನು ವಿರೋಧಿಸುವಳು.

ಬಹುಶಃ ಆಕೆ ಕಲ್ಪಿಸಿಕೊಳ್ಳಲೂ ಅಸಾಧ್ಯವಾದ ಸಂಗತಿ ಥರ ಕಾಣುವುದು ಅದು. ಇನ್ನೊಂದು ಸೂಕ್ಷ್ಮ ಸಂಗತಿಯನ್ನು ಇದೇ ಸಂದರ್ಭದಲ್ಲಿ ಕಾಣಬೇಕು. ತನ್ನ ಮೊಮ್ಮಗ ಸರಕಾರಿ ನೌಕರಿ ಹಿಡಿದ ಮೇಲೆ ಆತನೊಳಗೆ ಆಗಿರುವ ಬದಲಾವಣೆಯನ್ನು ಆಕೆ ಒಪ್ಪಿಕೊಂಡಿರುವಳು. ಆತ ಈಗ ಹಳ್ಳಿಗೆ ಬಂದಾಗ ಇನ್‌ಸರ್ಟ್ ಮಾಡಿಕೊಂಡು ಬಂದ ನಾಗರಿಕ ಪ್ರಪಂಚದ ಎಲ್ಲಾ ಲಕ್ಷಣ, ಸೌಂದರ್ಯಗಳನ್ನು ಉಳ್ಳವನಾಗಿರುವನು.

ಆತನ ಬಗ್ಗೆ ಆಕೆ ಚಕಾರವೆತ್ತುವುದಿಲ್ಲ, ಬದಲಿಗೆ ಸಂತೋಷ ಪಡುವಳು ಆದರೆ ಆತ ಮದುವೆಯಾಗುವ ಹುಡುಗಿ ಕುಬುಸ ತೊಟ್ಟಿರುವ ವಿಚಾರ ಮಾತ್ರ ಆಕೆಗೆ ಸರಿ ಕಾಣದು.

ಗಮನಿಸಬೇಕಾದ ವಿಚಾರವೆಂದರೆ ಒಟ್ಟು ಭಾರತೀಯ ಪರಿಕಲ್ಪನೆಯಲ್ಲಿಯೇ ಸ್ತ್ರೀ ಸಂಪ್ರದಾಯಕ್ಕ ಆಧುನಿಕತೆಯನ್ನು ವಿರೋಧಿಸುವುದನ್ನು ಕಾಣಬಹುದು. ಕುವೆಂಪುರವರ ಮಲೆಗಳಲ್ಲಿ ಮದುಮಗಳು ಕಾದಂಬರಿಯಲ್ಲಿ ರೇವಯ್ಯ ಕ್ರೈಸ್ತ ಮತಕ್ಕೆ ಮತಾತರಗೊಂಡು ಆತನ ಹೆಂಡತಿ ನೀರಿಗೆ ಬಿದ್ದು ಸಾಯುವಳು.

ಇದು ತೀರ ಆಳವಾಗಿ ಬೇರು ವರುಷಗಳಲ್ಲಿ ಪುರುಷನೊಳಗೆ ಆಗಿರುವ ಬದಲಾವಣೆ ಸ್ತ್ರೀಯರಲ್ಲಿ ಒಂದು ಶತಮಾನವಾದರೂ ಅವಳ ಮೂಲ ಸ್ವರೂಪದಲ್ಲಿ ವ್ಯಾತ್ಯಾಸವಾಗದೆ ಇರುವುದನ್ನು ಈ ರೀತಿಯಲ್ಲ ಕಾಣಬಹುದು. ಕಥೆಯಲ್ಲಿ ಆಧುನಿಕ ಪ್ರಪಂಚಕ್ಕೆ ಪ್ರವೇಶವಾಗುವ ಮನೋಭಾವನೆ ಮನೋಜ್ಞವಾಗಿದೆ. ಬಸ್ಸನ್ನು ಕಾಣದೇ ಇರುವ ಆಕೆ, ಗಾಯಿತ್ರಿ ನಗರದಲ್ಲಿ ಪ್ರದರ್ಶನದ ವಸ್ತುವಾಗುವುದು. ವಡಯಟ್‌ನ ಆಫೀಸಿನಲ್ಲಿ ಚರ್ಚೆಗೆ ಗ್ರಾಸವಾಗುವು, ಇವೆಲ್ಲವು ಆಧುನಿಕ ಪ್ರಪಂಚಕ್ಕೆ ಗ್ರಾಮ ಭಾರತವೊಂದು ಕಾಣುವ ರೀತಿಯನ್ನು ತೋರಿಸುವುದು. ಮುಂದೆ ನೆಟ್‌ಕಲ್‌ನ ಹೆಂಡತಿ ಕಮಲಳಿಗೆ ಅಜ್ಜಿ ಕುಬುಸ ತೊಡದಿರುವುದೇ ಅನಾಗರೀಕತೆಯ ಲಕ್ಷಣವಾಗಿ ಕಂಡು ಅದನ್ನು ಬದಲಾಯಿಸುವ ಶತ ಪ್ರಯತ್ನ ವಿಫಲವಾಗಿ ಗಂಡನ ಮೂಲಕ ಹೇಳಿ ಸಫಲ ಕಾಣದೆ, ಬಂಡೆವಜ್ಜಿಯ ವಯಸ್ಸಿನಷ್ಟೇ ವಯಸ್ಸಾದ ಅಕ್ಕಪಕ್ಕದ ಮನೆಯ ಮೂರು ಜನ ಅಜ್ಜಿಯಂದಿರನ್ನು ಈ ಕೆಲಸಕ್ಕೆ ನಿಯುಕ್ತಗೊಳಿಸುವಳು.

ಕಥೆಯ ತಾರ್ಕಿಕ ಸಂಘರ್ಷ ಕಾಣುವುದೇ ಇಲ್ಲಿ, ಆ ಮೂರು ಜನ ಅಜ್ಜಿಯಂದಿರು ಕುಬುಸದ ಮಹತ್ವ ತಿಳಿಸಲು ಸೆರಗನ್ನು ಜಾರಿಸಿ ಅದನ್ನು ಸೂಚ್ಯವಾಗಿ ಹೇಳುವ ಪ್ರಯತ್ನ ಮಾಡುವರು. ಈ ಸೂಚನೆಯ ರೀತಿ ಅವರಿಗೆ ಅಸಹ್ಯಕರವಾಗಿ ಕಾಣಿಸುವುದಿಲ್ಲ. ಆದರೆ ಈ ಹೆಂಗಸರಿಗೆ ಕುಬುಸ ತೊಡದೆ ಇರುವ ಬಂಡವಳ್ಳಿ ಅಶ್ಲೀಲವಾಗಿ ಕಾಣುವಳು. ಆದರೆ ಬಂಡೆವಜ್ಜಿಯ ಈ ಮಾತು ನೋಡಿ "ಅಯ್ .... ಸೆರಗು ಹೊದ್ಕಳ್ರಿ ನಮ್ಮವ್ವರೇ .... ಯಾರಾದ್ರೂ ಹುಡ್ಗು ಹುಪ್ಡಿ

ನೋಡ್ಯಾರು"೨ ಎಂದು ಗದರಿಸಿದಳು. ಇದು ನಮ್ಮ ಯೋಚನಾಕ್ರಮ ಮತ್ತು ಗ್ರಹಿಕೆಯ ಗೋಪಗಳನ್ನು ಶಕ್ತವಾಗಿ ಅಭಿವ್ಯಕ್ತಿಸುವುದು. ಕುಬುಸ ತೊಡದೆ ಇರುವ ಬಂಡೆವಜ್ಜಿಗೆ ಅಶ್ಲೀಲತೆಯ ಅರಿವಿದೆಓ. ಆದರೆ ಕುಬುಸ ತೊಡುವ ನಾಗರೀಕ ಪ್ರಪಂಚದವರಿಗೆ ಶೀಲ ಅಶ್ಲೀಲಗಳ ಅಂತರವೇ ಗೋಜು ಗೋಜು ಆಗಿರುವುದು.

ಶುಲ್ಕ ಕಥೆಯಲ್ಲಿ ಅನಾವರಣಗೊಳ್ಳುವ ನಿರೂಪಕನ ಹೆಂಡತಿ ಅನ್ನಪೂರ್ಣಳ ಪಾತ್ರ ವಿದ್ಯಾಭ್ಯಾಸವನ್ನು ಪಡೆದ, ಮೂಲಭೂತವಾಗಿ ಭಾರತೀಯ ಪರಿಕಲ್ಪನೆಯನ್ನು ಯೋಚಿಸುವ ಸಮಗ್ರ ವ್ಯವಸ್ಥೆಗೆ ಸ್ಪಂದಿಸುವ ರೀತಿ ತುಂಬಾ ಸೊಗಸಾಗಿದೆ. ನಿರೂಪಕ ಹಾಗೂ ಆಕೆಯ ನಡುವೆ ನಡೆಯುವ ಕಥೆಯ ಆರಂಭದ ಸಂವಾದದ ಭಾಗವನ್ನು ಗಮನಿಸಿ ಆಕೆ ಇದ್ದಕ್ಕಿದ್ದಂತೆ ಭಾರತದ ಆರ್ಥಿಕ ವ್ಯವಸ್ಥೆಯ ಬಗ್ಗೆ ಸಿಡಿಮಿಡಿಗುಟ್ಟುವುಳು, "ಸಾಮಾಜಿಕ ಅಸಮಾನತೆಗೆ ಆರ್ಥಿಕ ವ್ಯವಸ್ಥೆಯೇ ಕಾರಣವೆಂದು ಆಕೆಯೂ, ಜಾತಿ ವ್ಯವಸ್ಥೆ ಕಾರಣವೆಂದು ನಾನೂ ವಾದಿಸುತ್ತಾ ಕ್ರಮೇಣ ಮೊಂಡು ಹಠಕ್ಕೆ ಬಿದ್ದ ನಾವು ರಾಷ್ಟ್ರೀಯ ಮಟ್ಟದಿಂದ ಕುಟುಂಬ ಮಟ್ಟಕ್ಕೆ ಇಳಿದೆವು"೩. ಮೂರನೆಯ ಹೆರಿಗೆಯಯ ನಂತರ ಕುಟುಂಬದ ಆರ್ಥಿಕ ಸುಧಾರಣೆಗೆ ಕಠಿಣ ಕ್ರಮ ಕೈಗೊಂಡಿರುವ ಆಕೆ ಮಗುವಿನಂತೆ ನಿದ್ದೆ ಸವಿಯ ತೊಡಗಿದಳು. ಬಹುಶಃ ಆಕೆ ಗುರುತಿಸುವಷ್ಟು ಸುಲಭ ಮತ್ತು ಸರಿಯಾಗಿ ಜಾತಿ ವ್ಯವಸ್ಥೆಯ ಅಸಮಾನತೆಗೆ ಆರ್ಥಿಕ ಮೂಲವೇ ಕಾರಣ ಎಂಬ ಸಂಗತಿ ನಿರೂಪಕನಿಗೆ ಹೊಳೆಯದೆ ಹೋಗುವುದು. ಆಕೆ ಮುಂದುವರಿದು ಇಡೀ ಕುಟುಂಬದ ಆರ್ಥಿಕ ಸ್ಥಿತಿಯ ಬಗ್ಗೆ ಜಾಗೃತ ವಹಿಸುವುದನ್ನು ಗಮನಿದರೆ, ನಮಗೆ ಗೋಚರಿಸುವ ತುಂಬಾ ಮುಖ್ಯ ಸಂಗತಿ ಎಂದರೆ, ಸಮಾಜದ ಮೂಲ ಘಟಕ ಕುಟುಂಬದಲ್ಲಿಯೇ ನಿರ್ಮಿತಗೊಳ್ಳುವ ತುಂಬಾ ಮುಖ್ಯ ಸಂಗತಿ ಎಂದರೆ, ಸಮಾಜದ ಮೂಲ ಘಟಕ ಕುಟುಂಬದಲ್ಲಿಯೇ ನಿರ್ಮಿತಗೊಳ್ಳುವ ಅನೇಕ ಯೋಚನೆ ಮತ್ತು ಯೋಜನೆಗಳು ಸಮಾಜಕ್ಕೂ ವಿಸ್ತರಿಸುವವು.

ಆ ಕಾರಣದಿಂದಲೇ ಆಕೆ ಕುಟುಂಬದ ಆರ್ಥಿಕ ಸದೃಢತೆಯ ಬಗ್ಗೆ ಸದಾ ಜಾಗೃತಳಾಗಿರುವಳು. ಇನ್ನೊಂದು ಸಂಗತಿ ಎಂದರೆ, ಭಾರತದಂತಹ ಸಂಪ್ರದಾಯದ ದೇಶದೊಳಗೆ ಇಂಥ ಆರ್ಥಿಕ ಅಸಮಾನತೆಗಳೆಲ್ಲ ಜಾತಿಯ ವೇಷವನ್ನು ತೊಟ್ಟು ವರ್ಗ ಸಂಘರ್ಷಕ್ಕೆ ಇರಬಹುದಾದ ಘರ್ಷಣೆಯನ್ನು ಇಲ್ಲವಾಗಿಸಿ ಬಿಡುವವು. ನಿರೂಪಕ ಸಾಮಾಜಿಕ ಅಸಮಾನತೆಗೆ ಜಾತಿಯನ್ನು ಕಾರಣವಾಗಿರಿಸಿರುವುದನ್ನು ಗಮನಿಸಬಹುದು.

ಮುಂದೆ ನಿರೂಪಕನ ಪ್ರಿಯ ವಿದ್ಯಾರ್ಥಿ ಅಶೋಕ ನಕ್ಸಲೈಟ್ ಆಗಿ ಆತ ನಿರೂಪಕನ ಮನೆಗೆ ಆಗಮಿಸಿ ನಡೆದುಕೊಳ್ಳುವ ರೀತಿ ಹಾಗೂ ಆ ಸನ್ನಿವೇಶದಲ್ಲಿ ಅನ್ನಪೂರ್ಣಳ ನಡೆವಳಿಕೆಯನ್ನು ಗಮನಿಸಬೇಕು ನಿರೂಪಕ ಸರಿ ತಪ್ಪುಗಳ ಜಿಜ್ಞಾಸೆಗೆ ಬಿದ್ದು, ಏನನ್ನು ಹೇಳಲು ಆಗದೆ ಒದ್ದಾಡುತ್ತಿದ್ದರೆ, ಅನ್ನಪೂರ್ಣ ಬಂದು ಅಡುಗೆಮಾಡಿ ಬಡಿಸುವಳು. ಆಕೆಗೆ ಹಿಂಸೆಯ ಪ್ರವೃತ್ತಿಗೆ ಬಲಿಯಾದ ಅಶೋಕನ ನಡೆವಳಿಕೆ ಇಷ್ಟವಾಗುವುದಿಲ್ಲ. ಅದನ್ನು ಗಂಡನ ಮುಂದೆ ಸ್ಪಷ್ಟವಾಗಿ ಹೇಳುವಳು. ಆದರೆ ನಿರೂಪಕ ಮಾತ್ರ ತನಗೆ ಅನಿಸಿದ್ದನ್ನು ಹೇಳದೆ ಆಕೆಯನ್ನು ಸಮಾಧಾನಿಸುವನು. ಅಶೋಕ ಕೊನೆಯಲ್ಲಿ ತನಗೆ ಬೇಕಾಗಿರುವ ಹಣಕ್ಕೆ ಅವರ (ನಿರೂಪಕ)ಹೆಂಡತಿಯ ಕೈ ಬಳೆಯನ್ನು ಕೇಳಿದಾಗ ಅನ್ನಪೂರ್ಣಳು ವರ್ತಿಸುವ ರೀತಿ ಇಡೀ ಭಾರತೀಯ ಸ್ತ್ರೀಯರ ಮನಸ್ಸಿನ ಸಂಕೀರ್ಣತೆಯನ್ನು ಸೂಕ್ಷ್ಮವಾಗಿ ಅಭಿವ್ಯಕ್ತಿಸುವುದು.

ಮಹಿಳೆಗೆ ಒದಗುವ ಧಾರಣ ಸ್ಥಿತಿ ಹಾಗೂ ಸಂಕಟಗಳನ್ನು ಮನೋಜ್ಞವಾಗಿ ಚಿತ್ರಿಸುವ ಮತ್ತೊಂದು ಕಥೆ ಕೆಂಡದ ಮಳೆ ಕರೆವಲ್ಲಿ ಉದಕವಾಗಿದ್ದವರ ಕಥೆ. ಈ ಕಥೆಯಲ್ಲಿ ಕಂಡು ಬರುವ ಸ್ತ್ರೀ ಪಾತ್ರಗಳೆಂದರೆ, ಶೇಕಣ್ಣನ ಪತ್ನಿ ಶಾಲಮ್ಮ, ಹಾಗೂ ಮಗಳು ಬೇಗಮ್ಮ. ಗೌಡರ ಹೆಂಡತಿ ನಿಂಗವ್ವ, ಸೊಸೆಯಂದಿರಾದ ಮಲ್ಲವ್ವ ಮತ್ತು ಸಿದ್ದವ್ವ ಎಂಬ ಪಾತ್ರಗಳು.

ಶಾಲಮ್ಮ ತನ್ನ ಗಂಡನ ಹೆಣವನ್ನು ವೀರಶೈವ ರುದ್ರಭೂಮಿಯಲ್ಲಿ ಹೂತಿರುವ

ಅಪರಾಧಕ್ಕಾಗಿ, ಪಂಚಾಯ್ತಿ ಸೇರಿಸಿ ಐದುನೂರೊಂದು ರೂಪಾಯಿ ದಂಡ ಹಾಕಿದಾಗ "ಕೈ ಮುಗಿತೀನ್ರಿ ...... ಕಾಲ್ಗೂ ಬೀಳ್ತೀನಿ .... ಏನೋ ಆಗೋದು ಆಗಿ ಹೋಗೇತಿ .... ಮುಸಲ್ಮಾನರ ಮನೆ ನಮ್ಮದೊಂದೆ ಈ ಊರಾಗಿರೋದು : ನಮಗಾರಿಗೂ ಮುಸಲ್ಮಾನಿ ಮತಾಕೋಕೆ ಬರೋದಿಲ್ಲ .... ನಾವು ಪೀರ್ಲ ಹಬ್ಬ ಮಾಡ್ತಿಲ್ಲ .... ರಂಜಾನೂ ಮಾಡ್ತಿಲ್ಲ. ನಾವು ನಿಮ್ಮಂಗೆ ನಾಗ್ರಪಂಚಮಿ, ಮಾನಾಮಿ, ಉಗಾದಿ ಹಬ್ಬ ಮಾಡ್ತಿವಿ .... ಬಸಂದೇವ್ರೆ ನಮ್ ಮನೆದೇವ್ರು .... ಇಂಥದ್ರಾಗೆ ನನ್ ಗಂಡನ ಹೆಣಾನ ನಿಮ್ ಸುಡುಗಾಡ್ನಾಗೆ ಉಗುದ್ರೆ ಅದ್ರಾಗೇನೈತಿ ತಪ್ಪು .... ಊರಿಗೆ ಇರೋದೆ ಒಂದು ಸುಡುಗಾಡು .... ನನ್ ಹೆಣಾನೂ, ತನ್ನ ಮಕ್ಳ ಹೆಣಾನೂ .... ಅದ್ರಾಗ ಇಟ್ರೆ ತಪ್ಪೇನೈತಿ ....ಆಂಅ"ಳ ಎಂದು ಆವೇಶದಿಂದಲೇ ನುಡಿದಳು. ಅದರ ಹಿಂದೆ ದೈನ್ಯತೆಯ ಛಾಯೆಯನ್ನು ಕಾಣಬಹುದು ಮುಂದೆ ತನ್ನ ಗಂಡನ ಹೆಣ ಕಿತ್ತು ಊರಿನ ಮುಂಭಾಗ ಬೀಸಾಕಿದ್ದಾಗ ಅದನ್ನು ನೋಡಿ ಆಕೆ ಗೋಳಿಡುತ್ತ ಈ ಮೇಲ್ವರ್ಗದ ಮನುಷ್ಯರು, ಮನುಷ್ಯ ಸತ್ತ ಮೇಲೂ ಕಾಡುತ್ತಾರಲ್ಲ. ನಾವೇನು ಪಾಪ ಮಾಡಿದ್ವಿ ಎಂದು ಹೇಳುತ್ತಾ ತನ್ನನ್ನೂ ನಿನ್ನ ಜೊತೆ ಕರಕೊಂಡೋಗೋ ಎಂದು ಕೂಗುತ್ತಾಳೆ. ಇಲ್ಲಿ ಶಾಲಮ್ಮಳ ಅಸಹಾಯಕ ಸ್ಥಿತಿಯನ್ನು ಗಮನಿಸಬಹುದು. ಅಸಹಾಯಕಳಾದ ಶಾಲಮ್ಮ ಹೆಣದ ವಾಸನೆಯನ್ನು ಆಕೆಯ ಆಲಿಂಗನದಿಂದ ಕಾರಂಜಿಯಂತೆ ಚಿಮ್ಮಿದ ರಸವನ್ನು ಲೆಕ್ಕಿಸದೆ ಅಪ್ಪಿಕೊಳ್ಳುತ್ತಾಳೆ ಗಂಡನ ಮೇಲಿನ ಪ್ರೀತಿಯಿಂದ. ಬಾಷನನ್ನುಗೌಡರು ಕಟ್ಟಿಹಾಕಿ ಪೋಲೀಸರಿಗೆ ಕೊಡುತ್ತೇವೆಂದಾಗ ಚೀರಿಕೊಳ್ಳುತ್ತಾಳೆ. ಕೊನೆಗೂ ಬಾಷ ಜೈಲಿಗೆ ಹೋಗುತ್ತಾನೆ. ಇಲ್ಲಿ ಪೋಲೀಸ್ ಠಾಣೆಯ ಆವರಣದಲ್ಲೇ ಗೌಡನ ಮುಖಕ್ಕೆ ಚಪ್ಪಲಿಯಿಂದ ಬಾರಿಸಿ ವೀರವನಿತೆಯಂತೆ ಪೇದೆಗಳ ದೃಷ್ಟಿಗೆ ಗೋಚರಿಸುತ್ತಾಳೆ.

ಶಾಲಮ್ಮನ ಮಗಳಾದ ಬೇಗಂ ಮುಗ್ದೆಯಂತೆ ಗೋಚರಿಸುತ್ತಾಳೆ. ಅಪ್ಪ ದೇವ್ರವಾಗಿ, ಹಿಂಸಿಸುವವರನ್ನು ಕಾಡಿದರೆ ಹೇಗೆ? ಎಂದು ಆಲೋಚಿಸುತ್ತಾಳೆ. ತಾನು ಕಂಡ ಕನಸನ್ನು ವಿವರಿಸುತ್ತಾ

ಗೌಡನ ಕ್ರೂರ ಮುಖವನ್ನು 'ಥೇಟ್ ಹುಲ್ಲಿಯಂತಿದ್ದ ಕಣಮ್ಮ' ಎಂದು ಹೇಳುತ್ತಾಳೆ. ಕೊನೆಗೆ ತನ್ನ ಅಪ್ಪನ ಹೆಣ ನೋಡಿದ ಕಾರಣದಿಂದ ಭಯಭೀತಳಾಗಿ ಜ್ವರ ಬಂದು ಮಲಗುತ್ತಾಳೆ.

ಕಥೆಯ ಅಂತ್ಯದಲ್ಲಿ ತನ್ನಪ್ಪನ ದೆವ್ವ ಜೀವ ತನಗೆ ಬಂದು ಬಡಕಂಡಂತೆ ವರ್ತಿಸುತ್ತಾಳೆ. ವಸ್ತವಿಕ ಪ್ರಪಂಚದಲ್ಲಿ ಅತ್ತೆ ಸೊಸೆಯರ ನಡುವಿನ ಹೊಂದಾಣಿಕೆ ಇಲ್ಲದಿರುವಂತೆಯೇ ಈ ಕಥೆಯಲ್ಲಿ ಬರುವ ಅತ್ತೆ ನಿಂಗವ್ವ ಮತ್ತು ಸೊಸೆಯಂದಿರಾದ ಮಲ್ಲವ್ವ ಮತ್ತು ಸಿದ್ದವ್ವರ ಜೀವನವೂ ಇದೆ. ನಿಂಗವ್ವನಿಗೆ ಮನೆಯಲ್ಲಿ ಏನೇ ಆಗುತ್ತಿದ್ದರು ತಾನು ಮಾಡಿದ ಅಡುಗೆ ನಷ್ಟವಾಗುತದಲ್ಲ ಎಂಬ ಚಿಂತೆ ಕಾಡುತ್ತದೆ.

ರತ್ನ ಎಂಬ ಹುಡುಗಿಯೂ ಉಗಾದಿ ಎಂಬ ಆಟವೂ ಕಥೆಯಲ್ಲಿ ಬರುವ ಪ್ರಮುಖ ಮಹಿಳಾ ಪಾತ್ರಗಳೆಂದರೆ, ತಿಪ್ಪವ್ವ, ಆಕೆಯ ಅತ್ತೆ ಹಾಗೂ ಮಗಳು ರತ್ನ, ಗಂಡನನ್ನು ಕಳೆದುಕೊಂಡ ತಿಪ್ಪವ್ವ ಅತ್ತೆಯ ಬೈಗುಳಗಳನ್ನು ತಡೆದುಕೊಳ್ಳುತ್ತಾ, ಮನೆಯ ಮರ್ಯಾದೆಯನ್ನು ಕಾಪಾಡುತ್ತಾ, ಕೂಲಿ ಮಾಡಿ ತಂದ ಹಣದಿಂದ ಹಬ್ಬದ ದಿನ ಅಡುಗೆ ಮಾಡಿ ಸಂಪ್ರದಾಯದಂತೆ ಅಯ್ನೋರ್ನ ಕರೆಯಿಸಿ ಊಟ ಹಾಕಿದಾಗ ಆತ ಎಲ್ಲವನ್ನು ತಿಂದುಹಾಕುತ್ತಾನೆ. ಉಳಿದ ಒಂದೇ ಒಂದು ಹೋಳಿಗೆಯಲ್ಲಿ ಮಕ್ಕಳಿಬ್ಬರನ್ನು ಸರಿಪಡಿಸುವಾಗ ಅಸಹಾಯಕಳಂತೆ ಕಾಣಿಸುತ್ತಾಳೆ. ಅತ್ತೆ ಮಗ ಸತ್ತ ಮೇಲೆ ಸೊಸೆಯ್ನು ಬೈಯುವುದರಲ್ಲೇ ಕಾಲ ಹಾಕುತ್ತಾ ಮೊಮ್ಮಕ್ಕಳ ಕಣ್ಣಿಗೆ ಕೆಟ್ಟ ಹೆಂಗಸಾಗಿ ಕಾಣಿಸುತ್ತಾಳೆ. ರತ್ನ ಸಣ್ಣ ಹುಡುಗಿಯಾದರು ಕೊನೆಯಲ್ಲಿ ಇಡೀ ವ್ಯವಸ್ಥೆಯ ವಿರುದ್ಧ ಮಾಡುವ ಪ್ರತಿಭಟನೆಯ ಆಟದಲ್ಲಿ

ನಾಯಕಿಯಂತೆ ಗೋಚರಿಸುತ್ತಾಳೆ. ಆ ರೀತಿ ಮಾಡುವುದರಿಂದ ಮಾತ್ರವೇ ಶೋಷಿತ ವರ್ಗ ಅಭಿವೃದ್ಧಿ ಹೊಂದಲು ಸಾಧ್ಯ ಎಂಬ ತತ್ವವನ್ನು ತೆರೆದಿಡುತ್ತಾಳೆ.

ದೇವರ ಹೆಣ ಕಥೆಯಲ್ಲಿ ಶೊಣ್ಣೆಯ ಹೆಂಡತಿ ಪಾತ್ರ ಕ್ವಚಿತ್ತಾಗಿ ಕಾಣಸಿಗುತ್ತದೆ. ಆಕೆಯ ಮಾತು "ಗೋಡ್ರ ಎತ್ತು ಸತ್ತೈತಂತ ಓಗಿದ್ಯಾ"೫ ಎಂಬಲ್ಲಿ ಹಸಿವಿನ ಧಾರುಣ ಚಿತ್ರವಿದೆ. ಕಥೆಯ ಕೊನೆಯಲ್ಲಿ ಶೊಣ್ಣೆಯನ್ನು ಪೋಲೀಸರು ಬಿಟ್ಟು ಹೋಗುವಾಗ ಆತನೊಡನೆ ನಮ್ಮನ್ನು ಜೇಲಿಗ್ರಾಕಿ ಎಂದು ಕೇಳಿಕೊಳ್ಳುತ್ತಾಳೆ. ಇದೇ ಕಥೆಯಲ್ಲಿ ಶೊಣ್ಣೆಯ ಮಕ್ಕಳ ಪಾತ್ರ ಚಿತ್ರಣ ಹೀಗೆದ. "ಅಪಾರೀ ತಿಮ್ಮಿ, ಶುಲ್ಡಿ ಊಟ ಮಾಡುವ ಆಟ ಆಡುತ್ತಿದ್ದರು"೬ ಎಂಬಲ್ಲಿ ಧಾರುಣತೆ ಎದ್ದು ಕಾಣುತ್ತದೆ. ಮತ್ತೆ ಮುಂದೆ ಕಥೆಯಲೆಲ್ಲೂ ಈ ಪಾತ್ರಗಳ ಬಗೆಗಿನ ವಿವರಣೆ ಕಾಣಸಿಗುವುದಿಲ್ಲ.

ಹೀಗೆ ಕುಂವೀ ಅವರ ಕಥೆಗಳಲ್ಲಿ ಮಹಿಳಾ ಪಾತ್ರಗಳ ನೋವನ್ನು ಅನುಭವಿಸುತ್ತಲೇ ತಮ್ಮ ಜೀವನದ ಜೊತೆಗೆ ಕುಟುಂಬದ ಜೀವನ ನಿರ್ವಹಣೆಯ ಹೊಣೆಯನ್ನು ಹೊತ್ತವರಂತೆ ಗೋಚರಿಸುತ್ತಾರೆ.

'ಭಗವತಿ ಕಾಡು' ಮಹಿಳಾ ಕೇಂದ್ರಿತ ನೆಲೆಯನ್ನು ಹೊಂದಿರುವ ಕಥೆಯನ್ನುವುದರಲ್ಲಿ ಎರಡು ಮಾತಿಲ್ಲ. ಕಾರಣವಿಷ್ಟೇ ತಮ್ಮ ಸಾಂಸಾರಿಕ ಬದುಕಿನಲ್ಲಿ ಅತ್ತೆ ಸೊಸೆಯರು ಎಂದ ತಕ್ಷಣ ಕದನವೆನ್ನುವುದು ಸರ್ವೇಸಾಮಾನ್ಯ. ಹಾಗೆಯೇ ಇಲ್ಲಿ ಅತ್ತೆ ಸೊಸೆಯರು ಜಗಳವಾಡಿದರೂ ತಮ್ಮ ಕುಟುಂಬದ ಮೂಲ ಅಸ್ತಿತ್ವಕ್ಕೆ ಧಕ್ಕೆ ಉಂಟಾದಾಗ, ಹೊರಗಿನ ಅಕ್ರಮಣಗಳನ್ನು ತಡೆಯಲು ಶತ್ರುಗಳಂತಿದ್ದ ಅತ್ತೆ ಸೊಸೆಯರು ಒಟ್ಟಾಗಿ ನಿಂತು ಪ್ರತಿಭಟಿಸುವರು.

ಒಂದು ಸಂಸಾರವೆಂದ ಮೇಲೆ ಅತ್ತೆ ಸೊಸೆ, ಗಂಡ ಮಗ, ಮುಂತಾದ ಸಂಬಂಧಗಳ ಬೆಸುಗೆಯಿರುತ್ತದೆ. ಭಾರತೀಯ ಸಂಪ್ರದಾಯದಲ್ಲಿ ಒಂದರ ಸಂಬಂಧ ಮತ್ತೊಂದರಲ್ಲಿ

ಅಡಕವಾಗಿರುತ್ತದೆ. ಹಾಗೇ ಅದನ್ನು ನಿಯಂತ್ರಿಸುತ್ತಲಿದ್ದು ಮಾರ್ಗದರ್ಶನ ಮಾಡುವ ಬೆಸುಗೆಗಳಾಗಿರುತ್ತವೆ.

ಈ ನೆಲೆಯಲ್ಲಿ ನೋಡುವುದಾದರೆ, ಕಥೆಯಲ್ಲಿ ಬರುವ ಅತ್ತೆ ಸೆವುಡವ್ವ ಮತ್ತು ಸೊಸೆ ನಾಗವ್ವ ಇವರಿಬ್ಬರಲ್ಲಿ ವಯೋಮಾನ ಮತ್ತು ಕಾಲಮಾನಕ್ಕನುಗುಣವಾಗಿ ಗುಣಗಳು ಭಿನ್ನವಾಗಿರುವುದು ಕಂಡುಬರುತ್ತದೆ.

ಹಾಗೆ, ಭಿನ್ನ ಮನೋಧರ್ಮದ ಭಿನ್ನ ಪರಿಸರದಲ್ಲಿ ಬೆಳೆದು ಗಂಡನ ಮನೆಯಲ್ಲಿ ಬೆಳಕಾಗಿ ಬೆಳಗುವ ದೀವಿಗೆಗಳಿವು. ಈ ಎರಡು ಹಣತೆಗಳ ನಡುವೆ ಒಂದು ಕಡೆ ಮಗನಾಗಿ ಮೊಗದೊಂದು ಕಡೆ ಗಂಡನಾಗಿ 'ಭರಮ' ಕಂಬಚ್ಚಿನ ಇಕ್ಕಟ್ಟಿನಲ್ಲಿ ತಿಣುಕುವುದು ಕಂಡುಬರುತ್ತದೆ.

ಇದರಲ್ಲಿ ಒಂದು ಸುಂದರ ಸಾಮಾಜಿಕ ಚೌಕಟ್ಟನ್ನು ಪ್ರತಿಬಿಂಬಿಸುವ, ಹಾಗೇ ಒಂದು ಹೆಣ್ಣು ತನ್ನ ಕುಟುಂಬದಲ್ಲಿ ತನ್ನ ಹಿಡಿತವನ್ನು ಸಾಧಿಸಲು ಹೇಗೆ ಪ್ರಯತ್ನಿಸುವಳು ಎನ್ನುವುದರ ಅರಿವಿದೆ.

ಇವನ್ನು ಮನಗಂಡ ಅತ್ತೆ ಸೆವುಡವ್ವ ಸೊಸೆ ನಾಗವ್ವನನ್ನು ಹಿಡಿತದಲ್ಲಿಡಲು ಹಾತೊರೆಯುವಳು. ಇದರ ಜತೆಯಲ್ಲಿ ಮಗನ ಗುಣಮಾಡಿ, ಮದುವೆಯಾಗಿ ಬಂದ ಸೊಸೆ ಮುಂದೆ ಆತನಲ್ಲಿರುವ ದೌರ್ಬಲ್ಯಗಳನ್ನು ಮುಚ್ಚಿಡಬೇಕು ಎಂಬ ಹಿನ್ನೆಲೆಯಲ್ಲಿ ಆತನನ್ನು ಸಮರ್ಥಿಸಿಕೊಳ್ಳುತ್ತಾಳೆ.

ಈ ನಿಟ್ಟಿನಲ್ಲಿ ಆಕೆ ಭರಮನಿಗೆ "ಲೋ ಜೋಗಮ್ನಂಥೋನೆ... ಮಾಡಿಕ್ವಂಡೋಳ್ಗೆ ಇಟಾಕೊಂಡು ಸೊಡ್ಲಕ್ಷಟ್ರೆ ಮುಂದೆ ಬಾಳೂವೆ ನಡೆದೀತೆ... ಸಣ್ಣ ಪುಟ್ಟ ತೆಪ್ಪು ಕಂಡುಹಿಡ್ದು ಯೆಂಡ್ತೀ ಮೊಗ್ಲು ಮರೀತಿರಬೇಕು... ಅದು ಗಂಡಸ್ರಲಚ್ಚಣ..."[೬] ಹೀಗೆ ಪ್ರೇರೇಪಿಸುವಳು.

ಇಂಥ ವಿಲಕ್ಷಣ ಸಂಸಾರದಿಂದ ದೂರ ಇದ್ದ ಭರಮ ಮುಂದೊಂದು ದಿನ ತನಗೆ ಗೊತ್ತಿಲ್ಲದಂತೆ ತನ್ನ ಸಂಸಾರವನ್ನು ಅತಂತ್ರ ಸ್ಥಿತಿಗೆ ತಳ್ಳುವನು. ಇದರಿಂದ ಆ ಊರಿನ ಗೌಡನ ಗುಲಾಮನಾಗಿ ಹಂಗಿನ ಆಳಾಗುವನು. ಇದನ್ನು ಅರಿತ ಗೌಡ ದಲಿತಕೇರಿಯ ಭರಮನ ಮನೆ ಮುಂದಿನ ಬೇವಿನ ಮರ ಕಡಿಯಲು ಪ್ರೇರೇಪಿಸುವನು. ಲಾಭದ ದೃಷ್ಟಿಯಿಂದ ಇಲ್ಲಿ ಬೇವಿನ ಮರ ಕೇವಲ ಬೇವಿನ ಮರವಾಗಿರಲಿಲ್ಲ.

ಅದು ಇದೇ ದಲಿತಕೇರಿಯ ಆರಾಧ್ಯದೈವ. ಸಾಂಸ್ಕೃತಿಕ ಬದುಕಿನಲ್ಲಿ ಅದು ಒಡನಾಡಿಯಾಗಿ ಜನರಲ್ಲಿ ಶಾಶ್ವತವಾಗಿ ಬೆರೆತು ಹೋಗಿತ್ತು. ಹಲವಾರು ಸಂದರ್ಭಗಳಲ್ಲಿ ಸೆವುಡವ್ವ ಮತ್ತು ನಾಗವ್ವನಿಗೂ ಪ್ರೀತಿಯ ಪೂಜ್ಯ ನೆಲೆಯಾಗಿತ್ತು. ಇಲ್ಲಿ ಗಮನಿಸಬೇಕು, ಗ್ರಾಮೀಣರ ಬದುಕನ್ನು ತೊಂಬತ್ತು ಭಾಗ ದೇವರು ಅಥವಾ ನಂಬಿಕೆಗಳು ನಿಯಂತ್ರಿಸುತ್ತಲಿರುತ್ತವೆ.

ಇದಕ್ಕೆ ಸಾಕ್ಷಿ ಬೇವಿನ ಮರ. ಬೇವಿನ ಮರ ಕಡಿಯಲು ಬಂದವರನ್ನು ಊರಿನ ಜನತೆ ಜತೆಯಾಗಿ ಮರ ಕಡಿಯುವ ಕೈಯ ನಿಯಂತ್ರಿಸುವರು. ಅತ್ತೆ ಸೊಸೆಯರು ಒಗ್ಗಟ್ಟಾಗಿ ತಮ್ಮ ಅಸ್ತಿತ್ವವನ್ನು ತಮ್ಮ ಸಂಪ್ರದಾಯವನ್ನು ಉಳಿಸಿಕೊಳ್ಳಲು ಹೋರಾಟ ಮಾಡುವರು. ಇದು ಗ್ರಾಮೀಣ ಬದುಕಿನಲ್ಲಿ ಕಾಣ ಬರುವ ಬಂದು ಅನನ್ಯ ಸಂಬಂಧಕ್ಕೆ ಸಾಕ್ಷಿಯಾಗಿದೆ.

ನಮ್ಮ ಸಂಸ್ಕೃತಿಯನ್ನು ಅರ್ಥ ಮಾಡಿಕೊಳ್ಳುವುದೆಷ್ಟು ಜಟಿಲವಾದ ಕೆಲಸ ಎನ್ನುವುದನ್ನು ಕನ್ನಡದ ಅಪೂರ್ವವಾದ ಕಥೆಗಳಲ್ಲೊಂದಾದ 'ಕುಬುಸ' ಹೇಳುತ್ತದೆ. ಕುಬುಸವನ್ನು ತೊಡಲೊಲ್ಲದ ಅಜ್ಜಿ ನಮ್ಮ ಪ್ರಗತಿ ಅಭಿವೃದ್ಧಿ ಆಧುನಿಕತೆ ಇತ್ಯಾದಿ ಪರಿಕಲ್ಪನೆಗಳಿಗೆಲ್ಲ ದೊಡ್ಡ ಸವಾಲು.

ಆ ಸವಾಲನ್ನು ಎದುರಿಸುವುದಿರಲಿ ಅರ್ಥ ಮಾಡಿಕೊಳ್ಳುವುದರಲ್ಲೂ ವಿಫಲವಾಗಿದ್ದೇವೆ ಎನ್ನುವ ಧಾರುಣ ಸತ್ಯವನ್ನು ಹೇಳುವ ಈ ಕಥೆ ಆಧುನಿಕತೆಯನ್ನು ಕುರಿತು ಚಿಂತಿಸುವವರೆಲ್ಲ ಗಮನಿಸಲೇಬೇಕಾದ ಮುಖ್ಯ ರಚನೆ. ಕುಬುಸ ಕಥೆಯಲ್ಲಿ ಬಂಡೆವಜ್ಜಿ ಮತ್ತು ಕಮಲಳ ಮೂಲಕ

ಆಧುನಿಕ ಮತ್ತು ಸಂಪ್ರದಾಯ ಬದ್ಧ ನಂಬಿಕೆಗಳ ಬಂದು ಘರ್ಷಣೆಯನ್ನು ಕಾಣಬಹುದು.

ಹೊರ ಪ್ರಪಂಚವನ್ನೇ ಕಾಣದ ಬಂಡೆವಜ್ಜಿ ತನ್ನ 'ವಡ್ಡಟ್ಟಿ'ಯನ್ನೇ ಒಂದು ಜಗತ್ತು ಎಂದು ಭಾವಿಸಿಕೊಂಡು ಅದರೊಳಗಿರುವ ನೋವು ನಲಿವು, ಸುಖ ದುಃಖಗಳಿಗೆ ಸ್ಪಂದಿಸುವ ಸೂಕ್ಷ್ಮ ಸ್ವಭಾವದವಳು. ಮಗ ಸೊಸೆ ಸತ್ತ ನಂತರ ಮೊಮ್ಮಗ ನೆಟ್ಟಕಲ್ಲನ್ನು ಸಾಕಿಸಲಹುವಳು.

ಅದು ಆಕೆಯ ಒಂದು ತಪಸ್ಸು ಬಂಡೆವಜ್ಜಿ ತನ್ನ ಮೊಮ್ಮಗ ಆಧುನಿಕ ಜಗತ್ತಿನ ಪ್ರವೇಶವನ್ನು ಪಡೆದ ನಂತರ ಆತನ ನೆನಪಿನಲ್ಲೇ ಏಕಾಂಗಿಯಾಗಿ ಜೀವನ ಸವೆಸುವಳು. ನೆಟ್ಟಕಲ್ಲು ಉರುಫ್ ವಡವಟ್ ಕೆಲಸಕ್ಕೆ ಸೇರಿ ಮನೆಗೆ ಬಂದಾಗ ಸಂಭ್ರಮಿಸುವ ಅಜ್ಜಿ, ತುಬುಸ ತೊಟ್ಟ ಹುಡುಗಿಯ ಫೋಟೋ ಹಿಡಿದು ಮದುವೆಯಾಗುತ್ತೇನೆ ಎಂದಾಗ ಅದನ್ನು ವಿರೋಧಿಸುವಳು.

ಮೊಮ್ಮಗ ಸರ್ಕಾರಿ ನೌಕರಿ ಹಿಡಿದು ಇನ್‌ಸರ್ಟ್ ಮಾಡಿಕೊಂಡು ಬಂದಾಗ ಒಪ್ಪಿಕೊಳ್ಳುವ ಅಜ್ಜಿ ಕುಬುಸ ತೊಟ್ಟ ಕಮಲಳನ್ನು ಮದುವೆಯಾಗುವುದು ಆಕೆಗೆ ಸರಿಕಾಣದು.

ಗಮನಿಸಬೇಕಾದ ವಿಚಾರವೆಂದರೆ ಒಟ್ಟು ಭಾರತೀಯ ಪರಿಕಲ್ಪನೆಯಲ್ಲಿಯೇ ಸ್ತ್ರೀ ಸಂಪ್ರದಾಯಕ್ಕೆ ಆಧುನಿಕತೆಯನ್ನು ವಿರೋಧಿಸುವುದನ್ನು ಕಾಣಬಹುದು. ಬಸ್ಸನ್ನು ಕಾಣದೇ ಇರುವ ಆಕೆ ಬಸ್ಸಿನಲ್ಲಿ ಕುಳಿತುಕೊಳ್ಳುವ ರೀತಿ, ವಾಂತಿ ಮಾಡಿಕೊಳ್ಳುವ ಕ್ರಮ ಮುಂದೆ ಆಕೆ ಇಡೀ ಗಾಯಿತ್ರಿ ನಗರದಲ್ಲಿ ಪ್ರದರ್ಶನದ ವಸ್ತುವಾಗುವುದು. ಮುಂದೆ ನೆಟ್‌ಕಲ್‌ನ ಹೆಂಡತಿ ಕಮಲಳಿಗೆ ಅಜ್ಜಿ ತುಬುಸ ತೋಡದಿರುವುದೇ ಅನಾಗರಿಕತೆಯ ಲಕ್ಷಣವಾಗಿ ಕಂಡು ಅದನ್ನು ಬದಲಾಯಿಸುವ ಶತ ಪ್ರಯತ್ನ ವಿಫಲವಾಗಿ ಗಂಡನ ಮೂಲಕ ಹೇಳಿ ಸಫಲ ಕಾಣದೆ, ಬಂಡವೆಜ್ಜಿಯ ವಯಸ್ಸಿನಷ್ಟೇ ವಯಸ್ಸಾದ ಅಕ್ಕಪಕ್ಕದ ಮನೆಯ ಮೂರು ಜನ ಅಜ್ಜಿಯಂದಿರನ್ನು ಈ ಕೆಲಸಕ್ಕೆ ನಿಯುಕ್ತಿಗೊಳಿಸುವಳು.

ಕಥೆಯ ತಾರ್ಕಿಕ ಸಂಘರ್ಷ ಕಾಣುವುದೇ ಇಲ್ಲಿ. ಈ ಮೂರು ಜನ ಅಜ್ಜಿಯಂದಿರು ಕುಬುಸದ ಮಹತ್ವ ತಿಳಿಸಲು ಸೆರಗನ್ನು ಜಾರಿಸಿ ಅದನ್ನು ಸೂಚ್ಯವಾಗಿ ಹೇಳುವ ಪ್ರಯತ್ನ ಮಾಡುವರು. ಈ ಸೂಚನೆಯ ರೀತಿ ಅವರಿಗೆ ಅಸಹ್ಯಕರವಾಗಿ ಕಾಣಿಸುವುದಿಲ್ಲ.

ಆದರೆ ಈ ಹೆಂಗಸರಿಗೆ ತುಬುಸ ತೊಡದೆ ಇರುವ ಬಂಡವಜ್ಜಿ ಅಶ್ಲೀಲವಾಗಿ ಕಾಣುವಳು. ಆದರೆ ಬಂಡೆವಜ್ಜಿಯ ಈ ಮಾತು ನೋಡಿ "ಅಯ್... ಸೆರಗು ಹೊದ್ನಳ್ರಿ ನಮ್ಮವ್ವರೇ... ಯಾರಾದ್ರೂ ಹುಡ್ರು ಹುಪ್ಪಿನೋಡ್ಯಾರು"[೭] ಎಂದು ಗದರಿಸುವಳು.

ಇದು ನಮ್ಮ ಯೋಚನಾಕ್ರಮ ಮತ್ತು ಗ್ರಹಿಕೆಯ ದೋಷಗಳನ್ನು ಶಕ್ತವಾಗಿ ಅಭಿವ್ಯಕ್ತಿಸುವುದು. ಕುಬುಸ ತೊಡದೇ ಇರುವ ಬಂಡೆವಜ್ಜಿಗೆ ಅಶ್ಲೀಲತೆಯ ಅರಿವಿದೆ. ಆದರೆ ಕುಬುಸ ತೊಡುವ ನಾಗರಿಕ ಪ್ರಪಂಚದವರಿಗೆ ಶೀಲ ಅಶ್ಲೀಲಗಳ ಅಂತರವೇ ಗೋಜು ಗೋಜಲು ಆಗಿರುವುದು.

ಮಹಿಳೆಗೆ ಒದಗುವ ಧಾರುಣ ಸ್ಥಿತಿ ಹಾಗೂ ಸಂಕಟಗಳನ್ನು ಮನೋಜ್ಞವಾಗಿ ಚಿತ್ರಿಸುವ ಮತ್ತೊಂದು ಕಥೆ "ಕೆಂಡದ ಮಳೆ ಕರೆವಲ್ಲಿ ಉದಕವಾಗಿದ್ದವರ ಕಥೆ". ಈ ಕಥೆಯಲ್ಲಿ ಕಂಡುಬರುವ ಸ್ತ್ರೀ ಪಾತ್ರಗಳೆಂದರೆ.. ಶೇಕಣ್ಣನ ಪತ್ನಿ ಶಾಲಮ್ಮ, ಹಾಗೂ ಮಗಳು ಬೇಗಮ್ಮ, ಗೌಡರ ಹೆಂಡತಿ ನಿಂಗವ್ವ, ಸೊಸೆಯಂದಿರಾದ ಮಲ್ಲವ್ವ ಮತ್ತು ಸಿದ್ದವ್ವ ಇದು ಪಾತ್ರಗಳು.

ಶಾಲಮ್ಮ ತನ್ನ ಗಂಡನ ಹೆಣವನ್ನು ವೀರಶೈವ ರುದ್ರಭೂಮಿಯಲ್ಲಿ ಹೂತಿರುವ ಅಪರಾಧಕ್ಕಾಗಿ ಪಂಚಾಯ್ತಿ ಸೇರಿಸಿ ಐದುನೂರುರೊಂದು ರೂಪಾಯಿ ದಂಡ ಹಾಕಿದಾಗ "ಕೈ ಮುಗಿತೀನ್ರಿ... ಕಾಲ್ಗೂ ಬೀಳ್ತೀನಿ... ಏನೋ ಆಗೋದು ಆಗಿ ಹೋಗೇತಿ... ಮುಸಲ್ಮಾನರ ಮನೆ ನಮ್ಮದೊಂದೆ ಈ ಊರಾಗಿರೋದು... ನಮಗಾರಿಗೂ ಮುಸಲ್ಮಾನಿ ಮಾತಡೋಕೆ ಬರೋದಿಲ್ಲ... ನಾವು ಪೀರ್ಲಹಬ್ಬ ಮಾಡ್ತಿಲ್ಲ... ರಂಜಾನೂ ಮಾಡ್ತಿಲ್ಲ... ನಾವು ನಿಮ್ಮಗೆ ನಾಗ್ರಪಂಚಮಿ, ಮಾನಾಮಿ, ಉಗಾದಿ

ಹಬ್ಬ ಮಾಡ್ತೀವಿ.... ಬಸಂದೇವ್ರ ನಮ್ ಮನೆದೇವ್ರು... ಇಂಥದ್ರಾಗೆ ನನ್ ಗಂಡನ ಹೆಣನ ನಿಮ್ ಸುಡುಗಾಡಾಗೆ ಉಗುದ್ರೆ ಅದ್ರಾಗೇನೈತಿ ತಪ್ಪು... ಊರಿಗೆ ಇರೋದೇ ಒಂದು ಸುಡುಗಾಡು... ನನ್ ಹೆಣಾನೂ, ನನ್ನ ಮಕ್ಕ ಹೆಣಾನೂ ಅದ್ರಾಗ ಇಟ್ರೆ ತಪ್ಪೇನೈತಿ ಅಂ...."[೮] ಎಂದು ಆವೇಶದಿಂದಲೇ ನುಡಿವಳು.

ಅದರ ಹಿಂದೆ ದೈನ್ಯತೆಯ ಛಾಯೆಯನ್ನು ಕಾಣಬಹುದು. ಮುಂದೆ ತನ್ನ ಗಂಡನ ಹೆಣ ಕಿತ್ತು ಊರಿನ ಮುಂಭಾಗ ಬೀಸಾಕಿದ್ದಾಗ ಅದನ್ನು ನೋಡಿ ಆಕೆ ಗೋಳಿಡುತ್ತ ಈ ಮೇಲ್ವರ್ಗದ ಮನುಷ್ಯರು, ಮನುಷ್ಯ ಸತ್ತ ಮೇಲೂ ಕಾಡುತ್ತಾರಲ್ಲ. ನಾವೇನು ಪಾಪ ಮಾಡಿದ್ವಿ ಎಂದು ಹೇಳುತ್ತಾ ತನ್ನನ್ನು ಜತೆಗೆ ಕರಕಂಡೋಗೋ ಎಂದು ಕೂಗುತ್ತಾಳೆ.

ಇಲ್ಲಿ ಶಾಲಮ್ಮಳ ಅಸಹಾಯಕ ಸ್ಥಿತಿಯನ್ನು ಗಮನಿಸಬಹುದು. ಅಸಹಾಯಕಳಾದ ಶಾಲಮ್ಮ ಹೆಣದ ವಾಸನೆಯನ್ನು, ಆಕೆಯ ಆಲಿಂಗನದಿಂದ ಕಾರಂಜಿಯಂತೆ ಚಿಮ್ಮಿದ ರಸವನ್ನು ಲೆಕ್ಕಿಸದೆ ಅಪ್ಪಿಕೊಳ್ಳುತ್ತಾಳೆ. ಗಂಡನ ಮೇಲಿನ ಪ್ರೀತಿಯಿಂದ, ಬಾಷಾನನ್ನು ಗೌಡರು ಕಟ್ಟಿ ಹಾಕಿ ಪೋಲೀಸರಿಗೆ ಕೊಡುತ್ತೇವೆಂದಾಗ ಚೀರಿಕೊಳ್ಳುತ್ತಾಳೆ.

ಕೊನೆಗೂ ಭಾಷಾ ಜೈಲಿಗೆ ಹೋಗುತ್ತಾನೆ. ಅಲ್ಲಿ ಪೊಲೀಸ್ ಠಾಣೆಯ ಅವರಣದಲ್ಲೇ ಗೌಡನ ಮುಖಕ್ಕೆ ಚಪ್ಪಲಿಯಿಂದ ಬಾರಿಸಿ ವೀರವನಿತೆಯಂತೆ ಪೇದೆಗಳ ದೃಷ್ಟಿಗೆ ಗೋಚರಿಸುತ್ತಾಳೆ.

ಶಾಲಮ್ಮನ ಮಗಳಾದ ಬೇಗಂ ಮುಗ್ಧೆಯಂತೆ ತೋರುತ್ತಾಳೆ. ಅಪ್ಪ ದೆವ್ವವಾಗಿ, ಹಿಂಸಿಸುವವರನ್ನು ಕಾಡಿದರೆ ಹೇಗೆ? ಎಂದು ಆಲೋಚಿಸುತ್ತಾಳೆ. ತಾನು ಕಂಡ ಕನಸನ್ನು ವಿವರಿಸುತ್ತಾ ಗೌಡನ ಕ್ರೂರ ಮುಖವನ್ನು ಥೇಟ್ ಹುಲಿಯಂತಿದ್ದ ಕಣಮ್ಮ ಎಂದು ಹೇಳುತ್ತಾಳೆ. ಕೊನೆಗೆ ತನ್ನ ಅಪ್ಪನ ಹೆಣ ನೋಡಿದ ಕಾರಣದಿಂದ ಭಯಭೀತಳಾಗಿ ಜ್ವರಬಂದು ಮಲಗುತ್ತಾಳೆ.

ಕಥೆಯ ಅಂತ್ಯದಲ್ಲಿ ತನ್ನಪ್ಪನ ದೆವ್ವ ಜೀವ ತನಗೆ ಬಂದು ಬಡಕಂಡಂತೆ ವರ್ತಿಸುತ್ತಾಳೆ. ವಾಸ್ತವಿಕ ಪ್ರಪಂಚದಲ್ಲಿ ಅತ್ತೆ ಸೊಸೆಯರ ನಡುವಿನ ಹೊಂದಾಣಿಕೆ ಇಲ್ಲದಿರುವಂತೆಯೇ ಈ ಕಥೆಯಲ್ಲಿ ಬರುವ ಅತ್ತೆ ನಿಂಗವ್ವ ಹಾಗೂ ಸೊಸೆಯಂದಿರಾದ ಮಲ್ಲವ್ವ ಮತ್ತು ಸಿದ್ದವ್ವರ ಜೀವನವೂ ಇದೆ. ನಿಂಗವ್ವನಿಗೆ ಮನೆಯಲ್ಲಿ ಏನೇ ಆಗುತ್ತಿದ್ದರು ತಾನು ಮಾಡಿದ ಅಡುಗೆ ನಷ್ಟವಾಗುತದಲ್ಲ ಎಂಬ ಚಿಂತೆ ಕಾಡುತ್ತದೆ.

ರತ್ನ ಎಂಬ ಹುಡುಗಿಯೂ ಉಗಾದಿ ಎಂಬ ಆಟವೂ ಕಥೆಯಲ್ಲಿ ಬರುವ ಪ್ರಮುಖ ಮಹಿಳಾ ಪಾತ್ರಗಳೆಂದರೆ ತಿಪ್ಪವ್ವ, ಆಕೆಯ ಅತ್ತೆ ಮತ್ತು ಮಗಳು ರತ್ನ.

ಗಂಡನನ್ನು ಕಳೆದುಕೊಂಡ ತಿಪ್ಪವ್ವ ಅತ್ತೆಯ ಬೈಗುಳಗಳನ್ನು ತಡೆದುಕೊಳ್ಳುತ್ತಾ ಮನೆಯ ಮರ್ಯಾದೆಯನ್ನು ಕಾಪಾಡುತ್ತಾ ಕೂಲಿ ಮಾಡಿ ತಂದ ಹಣದಿಂದ ಹಬ್ಬದ ದಿನ ಅಡುಗೆ ಮಾಡಿ ಸಂಪ್ರದಾಯದಂತೆ ಅಯ್ನೋರ್ನ ಕರೆಯಿಸಿ ಊಟ ಹಾಕಿದಾಗ ಆತ ಎಲ್ಲವನ್ನೂ ತಿಂದು ಹಾಕುತ್ತಾನೆ.

ಉಳಿದ ಒಂದೇ ಹೋಳಿಗೆಯಲ್ಲಿ ಮಕ್ಕಳಿಬ್ಬರನ್ನು ಸರಿಪಡಿಸುವಾಗ ಅಸಹಾಯಕಳಂತೆ ಕಾಣಿಸುತ್ತಾಳೆ. ಅತ್ತೆ, ಮಗ ಸತ್ತ ಮೇಲೆ ಸೊಸೆಯನ್ನು ಬೈಯುವುದರಲ್ಲೇ ಕಾಲ ಹಾಕುತ್ತಾ ಮೊಮ್ಮಕ್ಕಳ ಕಣ್ಣಿಗೆ ಕೆಟ್ಟ ಹೆಂಗಸಾಗಿ ಕಾಣಿಸುತ್ತಾಳೆ. ರತ್ನ ಸಣ್ಣ ಹುಡುಗಿಯಾದರೂ ಕೊನೆಯಲ್ಲಿ ಇಡೀ ವ್ಯವಸ್ಥೆಯ ವಿರುದ್ಧ ಮಾಡುವ ಪ್ರತಿಭಟನೆಯ ಆಟದಲ್ಲಿ ನಾಯಕಿಯಂತೆ ಗೋಚರಿಸುತ್ತಾಳೆ.

"ಲ್ರೋಮಕ್ಳ.... ಈ ಮುದ್ದಾಳ ಅಯ್ನೋರ್ನ ಹಿಡಿಕೊಳ್ರೋ,.... ಅಯ್ನೋರ, ಪುಗಸಟ್ಟೆ ತಿನ್ನೋಕೆ ನಾಚಿಗೆ ಆಗಲ್ಲೇನು... ನಮ್ಮಂಗೆ ದುಡ್ದು ತಿನ್ನೋಕೇನಾಗೈತೆ ಧಾಡಿ ನಿನಗೇ..."[೬] ಎಂಬ ಅವಳ ಮಾತುಗಳಲ್ಲಿ ಮನದಾಳದ ಅಸಹಾಯಕತೆ ಬುಗಿಲೇಳುತ್ತದೆ. ಈ ರೀತಿ ಮಾಡುವುದರಿಂದ ಮಾತ್ರವೇ ಶೋಷಿತ ವರ್ಗ ಅಭಿವೃದ್ಧಿ ಹೊಂದಲು ಸಾಧ್ಯ ಎಂಬ ತತ್ಯವನ್ನು ತೆರೆದಿಡುತ್ತಾಳೆ.

ನಮ್ಮ ಹಳ್ಳಿಗಾಡಿನ ಹೆಣ್ಣು ಮಕ್ಕಳು ಕುಡಿಯುವ ನೀರಿಗೆ ಪಡಿಪಾಟಲು ಪಡುವ ಸಾಮಾನ್ಯ ಸಂಗತಿ 'ಬರಿಗೊಡಗಳು' ಎಂಬ ಒಳ್ಳೆಯ ಕಥೆಯಾಗಿ ರೂಪು ತಳೆದಿದೆ.

ಶುಲ್ಕ ಕಥೆಯಲ್ಲಿ ಅನಾವರಣಗೊಳ್ಳುವ ನಿರೂಪಕನ ಹೆಂಡತಿ ಅನ್ನಪೂರ್ಣಳ ಪಾತ್ರ ವಿದ್ಯಾಭ್ಯಾಸವನ್ನು ಪಡೆದ, ಮೂಲಭೂತವಾಗಿ ಭಾರತೀಯ ಪರಿಕಲ್ಪನೆಯನ್ನು ಯೋಚಿಸುವ ಸಮಗ್ರ ವ್ಯವಸ್ಥೆಗೆ ಸ್ಪಂದಿಸುವ ರೀತಿ ತುಂಬಾ ಸೊಗಸಾಗಿದೆ. ನಿರೂಪಕ ಹಾಗೂ ಆಕೆಯ ನಡುವೆ ನಡೆಯುವ ಕಥೆಯ ಆರಂಭದ ಸಂವಾದದ ಭಾಗವನ್ನು ಗಮನಿಸಿ ಆಕೆ ಇದ್ದಕ್ಕಿದ್ದಂತೆ ಭಾರತದ ಆರ್ಥಿಕ ವ್ಯವಸ್ಥೆಯ ಬಗ್ಗೆ ಸಿಡಿಮಿಡಿಗುಟ್ಟುವಳು.

"ಸಾಮಾಜಿಕ ಅಸಮಾನತೆಗೆ ಆರ್ಥಿಕ ವ್ಯವಸ್ಥೆಯೇ ಕಾರಣವೆಂದು ಆಕೆಯೂ, ಜಾತಿ ವ್ಯವಸ್ಥೆ ಕಾರಣವೆಂದು ನಾನೂ ವಾದಿಸುತ್ತಾ ಕ್ರಮೇಣ ಮೊಂಡು ಹಠಕ್ಕೆ ಬಿದ್ದ ನಾವು ರಾಷ್ಟ್ರೀಯ ಮಟ್ಟದಿಂದ ಕುಟುಂಬ ಮಟ್ಟಕ್ಕೆ ಇಳಿದೆವು"[೧೦] ಮೂರನೆಯ ಹೆರಿಗೆಯ ನಂತರ ಕುಟುಂಬದ ಆರ್ಥಿಕ ಸುಧಾರಣೆಗೆ ಕಠಿಣ ಕ್ರಮ ಕೈಗೊಂಡಿರುವ ಆಕೆ ಮಗುವಿನಂತೆ ನಿದ್ದೆ ಸವಿಯತೊಡಗಿದಳು. ಬಹುಶಃ ಆಕೆ ಗುರುತಿಸುವಷ್ಟು ಸುಲಭ ಮತ್ತು ಸರಿಯಾಗಿ ಜಾತಿ ವ್ಯವಸ್ಥೆಯ ಅಸಮಾನತೆಗೆ ಆರ್ಥಿಕ ಮೂಲವೇ ಕಾರಣ ಎಂಬ ಸಂಗತಿ ನಿರೂಪಕನಿಗೆ ಹೊಳೆಯದೆ ಹೋಗುವುದು.

ಆಕೆ ಮುಂದುವರಿದು ಇಡಿ ಕುಟುಂಬದ ಆರ್ಥಿಕ ಸ್ಥಿತಿಯ ಬಗ್ಗೆ ಜಾಗೃತ ವಹಿಸುವುದನ್ನು ಗಮನಿಸಿದರೆ, ನಮಗೆ ಗೋಚರಿಸುವ ತುಂಬಾ ಮುಖ್ಯ ಸಂಗತಿ ಎಂದರೆ, ಸಮಾಜದ ಮೂಲ ಘಟಕ ಕುಟುಂಬದಲ್ಲಿಯೇ ನಿರ್ಮಿತಗೊಳ್ಳುವ ಅನೇಕ ಯೋಚನೆ ಮತ್ತು ಯೋಜನೆಗಳು ಸಮಾಜಕ್ಕೂ ವಿಸ್ತರಿಸುವವು.

ಆ ಕಾರಣದಿಂದಲೇ ಆಕೆ ಕುಟುಂಬದ ಆರ್ಥಿಕ ಸದೃಢತೆಯ ಬಗ್ಗೆ ಸದಾ ಜಾಗೃತಳಾಗಿರುವಳು.

ಕಥೆಯ ಕೊನೆಯಲ್ಲಿ ಅಶೋಕ ಆಕೆಯ ಕೈ ಬಳೆಯನ್ನು ಕೇಳಿದಾಗ ಅನ್ನಪೂರ್ಣಳು ವರ್ತಿಸುವ ರೀತಿ ಇಡೀ ಭಾರತೀಯ ಸ್ತ್ರೀಯರ ಮನಸ್ಸಿನ ಸಂಕೀರ್ಣತೆಯನ್ನು ಸೂಕ್ಷ್ಮವಾಗಿ ಅಭಿವ್ಯಕ್ತಿಸುವುದು.

ತಾಯಿಯ ಮಮತೆ ಮಮಕಾರಗಳು ಎಂಥ ಕಲ್ಲು ಹೃದಯದವರನ್ನು ಕರಗಿಸುವ ಶಕ್ತಿ ಇರುವುದು 'ಹತ್ಯೆ' ಕಥೆಯಲ್ಲಿ ಚಿತ್ರಿತವಾಗಿದೆ. ತನ್ನ ಗಂಡನನ್ನು ಹತ್ಯೆ ಮಾಡಲು ಬಂದಿರುವ ವೆಂಕಯ್ಯನಾಯ್ಡುವಿನ ಬಂಟ ಬಲರಾಮನನ್ನು ತನ್ನ ತಮ್ಮ ಶಿವು ಎಂದು ಭಾವಿಸಿ ಅವನನ್ನು ಉಪಚರಿಸುವ ಪರಿಸುಂದರವಾಗಿದೆ. ಪ್ರೀತಿ ವಾತ್ಸಲ್ಯದ ಸ್ಪರ್ಶವೇ ಇಲ್ಲದೆ ಬೆಳೆದಿದ್ದ ಬಲರಾಮನನ್ನು ತನಗೆ ಅರಿವಿಲ್ಲದೇ ಬದಲಾಯಿಸುತ್ತಾಳೆ ಗೌರಮ್ಮ.

ಪ್ರಸೂತಿ ಕೋಣೆಯಲ್ಲಿ, ವೇದನೆಯಿಂದ ನರಳುವ ಮಗಳು... ಮತ್ತೊಂದೆಡೆ ಕಳೆದು ಹೋಗಿದ್ದ ತಮ್ಮ ಮನೆಗೆ ಮರಳಿದ್ದು, ಗೌರಮ್ಮಳಲ್ಲಿ ಅಮಿತ ಆನಂತ ತರುತ್ತದೆ. ಮಗಳನ್ನು ಕೆಲಹೊತ್ತು ಮರೆತು ತಮ್ಮನೆಂದು ಭಾವಿಸಿದ ಬಲರಾಮನನ್ನು ಸತ್ಕರಿಸುತ್ತಾಳೆ.

ಆಕೆಯ ಮಮತೆಯೇ ಬಲರಾಮನ ಕ್ರೂರ ಮನಸ್ಸು ಕರಗುವಂತೆ ಮಾಡುತ್ತದೆ. ಹತ್ಯೆ ಮಾಡಲು ತಂದಿದ್ದ ಚಾಕುವನ್ನೇ ಕರುಳ ಬಳ್ಳಿ ಕತ್ತರಿಸಲು ಕೊಟ್ಟನು. ಈ ಕ್ರಿಯೆ ಬಲರಾಮನಿಗೂ ಕ್ರೂರ ಜಗತ್ತಿಗೂ ಇದ್ದ ಕರುಳ ಬಳ್ಳಿ ಸಂಬಂಧವನ್ನು ಕತ್ತರಿಸುತ್ತದೆ. ಬಲರಾಮ ಪೂರ್ಣ ಶಿಶುತ್ವ ಪಡೆಯುತ್ತಾನೆ.

ದೇವರ ಹೆಣ ಕಥೆಯಲ್ಲಿ ಡೊಣ್ಣಿಯ ಹೆಂಡತಿ ಪಾತ್ರ ತ್ವಚಿತ್ತಾಗಿ ಕಾಣಸಿಗುತ್ತದೆ. ಆಕೆಯ ಮಾತು "ಗೋಡ್ರು ಎತ್ತು ಸತ್ತೈತಂತ ಓಗಿದ್ಯಾ"[೫೫] ಎಂಬಲ್ಲಿ ಹಸಿವಿನ ಧಾರುಣ ಚಿತ್ರವಿದೆ. ಕಥೆಯ ಕೊನೆಯಲ್ಲಿ ಡೊಣ್ಣಿಯನ್ನು ಪೋಲೀಸರು ಬಿಟ್ಟು ಹೋಗುವಾಗ ಆತನೊಡನೆ ನಮ್ಮನ್ನು ಜೇಲಿಗಾತ್ರಿ ಎಂದು ಹೇಳಿಕೊಳ್ಳುತ್ತಾಳೆ. ಇದೆ ಕಥೆಯಲ್ಲಿ ಡೊಣ್ಣಿಯ ಮಕ್ಕಳ ಪಾತ್ರ ಚಿತ್ರಣ ಹೀಗಿದೆ. "ಅಪಾರೀ

ತಿಮ್ಮಿ, ಕುಲ್ಡಿ ಊಟ ಮಾಡುವ ಆಟ ಆಡುತ್ತಿದ್ದರು”[೨೬]. ಎಂಬಲ್ಲಿ ಧಾರುಣತೆ ಎದ್ದು ಕಾಣುತ್ತದೆ. ಮತ್ತೆ ಮುಂದೆ ಕಥೆಯಲೆಲ್ಲೂ ಈ ಪಾತ್ರಗಳ ಬಗೆಗಿನ ವಿವರಣೆ ಕಾಣಸಿಗುವುದಿಲ್ಲ.

ಹೀಗೆ ಕುಂವೀ ಅವರ ಕಥೆಗಳಲ್ಲಿ ಮಹಿಳಾ ಪಾತ್ರಗಳು ನೋವನ್ನು ಅನುಭವಿಸುತ್ತಲೇ ತಮ್ಮ ಜೀವನದ ಜತೆಗೆ ಕುಟುಂಬದ ಜೀವನ ನಿರ್ವಹಣೆಯ ಹೊಣೆಯನ್ನು ಹೊತ್ತವರಂತೆ ಗೋಚರಿಸುತ್ತಾರೆ.

3. ಜಾತಿ-ವರ್ಗ ಸಂಘರ್ಷ ಚಿತ್ರಿತ ಕಥೆಗಳು-

ಕುಂವೀ ಅವರ ಬಹುಪಾಲು ಕಥೆಗಳು ಕೆಳಜಾತಿಯ ಜನರಭೀಕರ ಲೋಕದ ಪರಿಚಯ ಮಾಡಿಕೊಡುತ್ತವೆ. ಜಮೀನ್ದಾರಿ ಲೋಕದ ಅನೇಕ ಮಾದರಿಗಳನ್ನು ಹೇಳುವುದರ ಜತೆಗೆ ಕಳೆವಗರ್ದ ಆರ್ಥಿಕ, ಸಾಮಾಜಿಕ ಸ್ಥಿತಿಗಳು, ಆ ಜನರ ಬದುಕನ್ನು ಮಾನವತೆಯ ಇಲ್ಲವೆ ಕಳೆದುಕೊಂಡಿರುವ ಕಡೆಗೆ ಕೊಂಡೊಯ್ಯುವ ಸತ್ಯವನ್ನು ಹೇಳುತ್ತದೆ. ಸಮಾಜದ ನಿರ್ಲಕ್ಷಿತ ಜನರ ಜೀವನವನ್ನು ಅವರಷ್ಟು ಸಮೀಪದಿಂದ ವಿಶಾಲವಾಗಿ ಹಾಗೂ ಆಳವಾಗಿ ನೋಡಿದವರು ಅವರ ಸಮಕಾಲೀನದಲ್ಲಿ ತೀರ ವಿರಳ. ಸ್ವಾತಂತ್ರ್ಯ ನಂತರದ ಭಾರತದಲ್ಲಿ ದಲಿತರ ಬದುಕನ್ನು ಇಷ್ಟೊಂದು ದುಸ್ಥಿರವಾಗಿದೆಯೆಂದು ಅಶ್ಚರ್ಯ ಹುಟ್ಟಿಸುವ ಘಟನೆಗಳು ಕುಂವೀ ಅವರ ಕಥೆಗಳಲ್ಲಿ ಹಾಸುವೊಕ್ಕಾಗಿವೆ.

ಭಾರತದಂತಹ ರೋಗಗ್ರಸ್ತಸಮಾಜದಲ್ಲಿ ಜಾತಿ ವ್ಯವಸ್ಥೆ, ಬಡತನ, ದಾಶ್ಯ ಪ್ರವೃತ್ತಿ, ಮೌಢ್ಯದ ಪರಾಕಾಷ್ಟೆಗಳು ಹೇಗೆ ಜಾತಿ ವರ್ಗ ತಾರತಮ್ಯವನ್ನು ಉಂಟುಮಾಡುತ್ತವೆ. ಮತ್ತು ಶಾಶ್ವತಗೊಳಿಸುತ್ತವೆ ಎಂಬುದನ್ನು ಕುಂವೀ ಕಥೆಗಳು ಸಹಜವಾಗಿಯೇ ಹೇಳುತ್ತವೆ. ಜತೆಗೆ ಇಲ್ಲಿನ ಬಹುತೇಕ ಪಾತ್ರಗಳು ಕೆಳಜಾತಿ, ಕೆಳವರ್ಗಗಳ, ಜೀತಗಾರರ ಅಸಹಾಯಕಥೆ ತಮ್ಮನ್ನು ತಾವು ಮಾರಿಕೊಂಡಿರುವ ಸ್ಥಿತಿಗಳನ್ನು ಕಥೆಗಳಲ್ಲಿ ಕಾಣಬಹುದು.

'ದೇವರ ಹೆಣ' ಕಥೆಯಲ್ಲಿನ ಹಸಿವಿಗೆ ಈ ವ್ಯವಸ್ಥೆಯಲ್ಲಿ ಉತ್ತರವಿಲ್ಲ. ಇಲ್ಲಿ ಜಾತಿಯ ಕಾರಣಕ್ಕಾಗಿ

ಅಸ್ಪೃಶ್ಯರಾಗಿರುವವರು ತಮ್ಮ ಪಾರಂಪರಿಕ ಹಕ್ಕನ್ನು ಒತ್ತಾಯಿಸುವ ಹಾಗೂ ಹಸಿವನ್ನು ನೀಗಿಸಿಕೊಳ್ಳಲು ಪರ್ಯಾಯ ಮಾರ್ಗವನ್ನು ರೂಪಿಸಿಕೊಳ್ಳುವ ವಸ್ತುವನ್ನು ಒಳಗೊಂಡಿದೆ. ಈ ಕಥೆ ಕಾನೂನು ಕಟ್ಟಳೆಗಳು ಹಸಿವಿಗೆ ಅನ್ನ ಹಾಕಲಾರವು ಎಂಬುದನ್ನು ಹೇಳುತ್ತದೆ.

ಈ ಕಥೆಯಲ್ಲಿ ಬರುವ ಡೋಣ್ಣಿಯೂ ಕೂಡ ಕುಂವೀ ಅವರ ಉಳಿದ ಕಥಾನಾಯಕರಂತೆ ಹಸಿವಿನಿಂದ ಬಳಲಿ ಕಂಗಾಲಾಗಿರುವ ಮಾದಿಗರ ಜಾತಿಯವನ್ನು ಈಗ ಬೇರೆ ಬರಗಾಲದ ಪರಿಣಾಮವಾಗಿ ಇನ್ನಷ್ಟು ಹಸಿದು ಕಂಗಾಲಾಗಿದ್ದಾನೆ.

ತನ್ನ ಊರ ಗೌಡನ ಮನೆಯ ಎತ್ತು ರೋಗದಿಂದ ನರಳುತ್ತಿದೆ ಎಂದ ತಿಳಿದ ತಕ್ಷಣ ಪರಮಾತ್ಮನು ನಮ್ಮ ಕಷ್ಟನೋಡಲಾರದೆ ಈ ರೀತಿಯಾಗಿ ಸಹಾಯ ಮಾಡುತ್ತಿದ್ದಾನೆಂದು ಭಾವಿಸುವ ಡೋಣ್ಣಿ ಎತ್ತು ಸತ್ತದ್ದು ತಿಳಿದ ಕೂಡಲೆ ಗೌಡರ ಮನೆಗೆ ಬರುತ್ತಾನೆ ಇದು ಅವನಿಗೆ ಹಸಿವನ್ನು ನೀಗಿಸಿಕೊಳ್ಳಲು ಒಂದು ಪರ್ಯಾಯ ಮಾರ್ಗದಂತೆ ಕಾಣುತ್ತದೆ.

ಸತ್ತಪ್ರಾಣಿಯ ಸಾಗಿಸುವ ಹಕ್ಕು ಮಾದಿಗನಾದ ತಮ್ಮ ಹಕ್ಕು ತಾನೇ ಮುಂದೆ ಬಂದು... "ಗೋಡ್ರೆ ದೇವ್ರ ಹೆಣಾ ತುಂಬಿದ ಮನ್ಯಾಗ ಬಾಳವತ್ತಿರೋದು ನಂಗ್ಯಾಕೋ ಭೇಷಿ ಕಾಣುವಲ್ಲು... ಕ್ಕೊಂಡೋಗ್ಲೆ ಮಾದಿಗ ಅಂತ ಅಪ್ಣೆ ಕೊಡ್ರಿ ಧಣಿ... ಒಯ್ದುಬುಡ್ತೀನಿ..."[೧೧] ಎಂದು ಗೋಗರೆದು ಕೇಳುವುದು ಅವನ ಹಸಿವಿನ ಭೀಕರತೆಯನ್ನು ಸೂಚಿಸುತ್ತದೆ. ಗೌಡರು ಮುಸೆ ಎತ್ತನ್ನು ಮನೆ ಮಾದಿಗನಿಗೆ ಕೊಡದೆ ಹೂಳುತ್ತಾರೆ. ಇದು ಅವರ ನಂಬಿಕೆ ಸಂಬಂಧಿಸಿದ ವಿಚಾರ. ಈ ಪ್ರಸಂಗದಲ್ಲಿ ಒಬ್ಬರಿಗೆ ಅನಿವಾರ್ಯವಾಗಿ ಆಹಾರವಾಗಿರುವುದು ಇನ್ನೊಬ್ಬರಿಗೆ ಪವಿತ್ರವಾಗುತ್ತದೆ ಎಂಬ ಬದುಕಿನ ಸಮಾಜದ ವೈರುಧ್ಯವನ್ನು ಲೇಖಕ ನಿರೂಪಿಸುತ್ತಾರೆ. ಹಸಿವಿನ ತೀವ್ರತೆ ಭೀಕರತೆಯನ್ನು ಅನುಭವಿಸುತ್ತಿದ್ದ ಡೋಣ್ಣಿ ಹೆಣವನ್ನು ಸಮಾಧಿಯಿಂದ ಹೊರತೆಗೆಯಲು ನಿರ್ಧರಿಸುತ್ತಾನೆ.

ಮರುದಿನ 'ಕಟುಕರ ದಯಾನಂದನ' ಕುತಂತ್ರದಿಂದ ಡೊಣ್ಣಿ ಅಪರಾಧಿ ಸ್ಥಾನದಲ್ಲಿ ನಿಲ್ಲುತ್ತಾನೆ. ಗೌಡರು ಸಿಟ್ಟಿನಿಂದ ಕೆಕ್ಕರಿಸಿ ನೋಡತೊಡಗಿದ. ಗೌಡರ ಕಂಡ ಮೇಲೂ ಡೊಣ್ಣಿಯ ಎದೆಯಾಕೋ ಬಗ್ಗಲೇ ಇಲ್ಲ. "ಎತ್ ಮುಟ್ಟೋವಷ್ಟು ತಾಕತ್ತು ಐತೇನ್ಲೇ ಮೈಯಾಗ? ಅಂತ ಗೌಡರು ಒಂದೇ ಒಂದು ಪ್ರಶ್ನೆ ಕೇಳಿದ್ದಕ್ಕೆ ಡೊಣ್ಣಿ ತಡವರಿಸದೆ ಐತೆಪ್ಪೋ ಐತೆ, ಅಸಗಂಡೂ ಅಸಗಂಡೂ ಏನ್ತಿನ್ನಿ ಏನ್ಬುಡ್ಲಿ ಅನ್ನಂಗಾಗೈತಿ" ಎಂದನು.

ಇಲ್ಲಿ ಮೇಲ್ವಗದ ಗೌಡರ ಮನಸ್ಥಿತಿ ಹಾಗೂ ಮಾತುಗಳಿಗೂ ಕೆಳವರ್ಗದ ಹಸಿವಿನಿಂದ ನರಳುತ್ತಿರುವ ಡೊಣ್ಣಿಯ ಮಾತುಗಳ ನಡುವೆ ಜಾತಿ ಸಂಘರ್ಷದ ವಿಚಾರವನ್ನು ಕಾಣಬಹುದು. ಅನಂತರ ಗೌಡರು ಪೋಲೀಸರಿಗೆ ಡೊಣ್ಣಿಯನ್ನು ಹಿಡಿದು ಕೂಡಲು ನಿರ್ಧರಿಸಿ ಪೋಲೀಸರನ್ನು ಕರೆಸುತ್ತಾರೆ. ಅಲ್ಲಿ ಬಂದ ಸಬ್ ಇನ್ಸ್‌ಪೆಕ್ಟರ್ ಡೊಣ್ಣಿಯನ್ನು ಎದುರಿಸಿದರೂ ಭಯಗೊಳ್ಳದನ್ನು ನೋಡಿ ಗೌಡ, ಸಬ್ ಇನ್ಸ್‌ಪೆಕ್ಟರ್ ಚಕಿತಗೊಳ್ಳುತ್ತಾರೆ.

ಸಂದರ್ಭ ತಿಳಿಯಾಗಿಸಲು ಡೊಣ್ಣಿ ಎಚ್ಚರಿಕೆ ಕೊಟ್ಟು ಹೊರಡುವ ಹವಣಿಕೆಯಲ್ಲಿದ್ದ ಸಬ್ ಇನ್ಸ್‌ಪೆಕ್ಟರ್‌ನನ್ನು ತನ್ನ ಜೈಲಿಗೆ ಹಾಕಬೇಕೆಂದು ಒತ್ತಾಯಿಸುತ್ತಾನೆ ಡೊಣ್ಣಿ. ಡೊಣ್ಣಿ ಆವೇಶದಿಂದ "ಅದೆಂಗ್ ಬೀಟ್ ಹೋಗ್ತಿರೋ ನೋಡೇ ಬಿಡ್ತೀನಿ ಈಗ ನನ್ ಕರ್ಕೋಂಡೋಗ್ಲಿಲ್ಲಾಂದ್ರೆ ಇಕ್ಕಿಂತ್ ದೊಡ್ ತಪ್ ಮಾಡ್ತೀನಿ..."[೨] ಎಂದು ಹೇಳಿದಾಗ ಇನ್‌ಪೆಕ್ಟರ್‌ನ ಎದೆ ಡವ ಡವ ಹೊಡೆದುಕೊಳ್ಳುತ್ತದೆ. ಎಂಬಲ್ಲಿ ಕೆಳವರ್ಗದವರು ತಿರುಗಿ ಬಿದ್ದರೆ ಮೇಲ್ವರ್ಗದವರು ಸಹ ಹೆದರುತ್ತಾರೆ ಎಂಬ ಸತ್ಯವನ್ನು ನಿರೂಪಿಸುವುದರ ಜೊತೆಗೆ ನೋವುಗಳ ಹೊಡೆತದಿಂದ ಮನುಷ್ಯ ಪ್ರತಿಭಟಿಸುವ ಸಾಮರ್ಥ್ಯವನ್ನು ಪಡೆಯುತ್ತಾನೆ ಎಂಬ ಸತ್ಯ ಅಡಕವಾಗಿದೆ. ಜಾತಿ ಸಂಘರ್ಷದ ಚಿತ್ರವಿರುವ ಮತ್ತೊಂದು ಕಥೆ 'ರತ್ನ ಎಂಬ ಹುಡುಗಿಯೊ ಉಗಾದಿ ಎಂಬ ಆಟವೊ' ಎಂಬ ಈ ಕಥೆ ಎರಡು ಮಜಲುಗಳನ್ನು ಹೊಂದಿದೆ.

ಒಂದೇ ಒಂದು ಜಾತಿಯ ಒಳಗಡೆ ಇರುವ ಎರಡು ಒಳಪಂಗಡಗಳ ನಡುವೆ ನಡೆಯುವ ಸಂಘರ್ಷ ಎರಡನೇಯದು ಮೇಲು ಜಾತಿಯ ಹುಡುಗ ಶಂಭ, ದಲಿತ ಜಾತಿಯ ಹುಡುಗ ಚವುಡನ ನಡುವೆ ನಡೆಯುವ ಸಂಘರ್ಷ ಮೊದಲಿಗೆ ಈ ಕಥೆಯ ಮೊದಲಿನ ಸ್ತರದಲ್ಲಿ ನಡೆಯುವ ಸಂಘರ್ಷವನ್ನು ನೋಡೋಣ.

ವೀರಶೈವ ಧರ್ಮದಲ್ಲಿ ಪುರೋಹಿತ ಶಾಹಿ ಆಗಿರುವ ಅಯ್ಯನವರು ಅದೇ ಜಾತಿಯ ಒಳಪಂಗಡಗಳ ಮುಗ್ದರನ್ನು ಸಂಪ್ರದಾಯ, ಆಚರಣೆ, ನಂಬಿಕೆಗಳ ಹೆಸರಿನಲ್ಲಿ ಶೋಷಣೆ ಮಾಡುತ್ತಾರೆ. ದಿನಗೂಲಿ ಮಾಡುವ ತಿಪ್ಪವ್ವ ಸಂಪ್ರದಾಯಕ್ಕೆ ಕಟ್ಟುಬಿದ್ದು ಹಬ್ಬದಲ್ಲಿ ಅಯ್ಯೋರ್ನ ಬಿನ್ನಕ್ಕೆ ಕರೆಯುತ್ತಾಳೆ. ಆರೋಗಣೆಯಾದ ನಂತರ ಶಂಕ್ರಯ್ಯ "ಚುಟ್ಟದ ಖರ್ಚಿಗೆ ಮೂರು ಪಾವಲಿ ಕೊಡಬೇಕವ್ವ.... ಇಲ್ಲ ಅಂದ್ರೆ ಬಿನ್ನ ತೀರ್ಸಿ ಏನ್ ಸಾರ್ಥಕ"[೧೩]. ಎಂದು ಮೊಂಡು ಹಠಹಿಡಿಯುತ್ತಾನೆ.

ಈ ವಾಕ್ಯದಲ್ಲಿ ಹೇಗೆ ಬಡತನದಲ್ಲಿ ಬೇಯುವವರನ್ನು ಇನ್ನಷ್ಟು ಬೇಯಿಸುವ ಪ್ರಕ್ರಿಯೆ ಮೇಲ್ವರ್ಗದವರಿಂದ ಹೇಗೆ ನಡೆಯುತ್ತದೆ ಎಂಬುದರ ಚಿತ್ರಣವಿದೆ. ಕಥೆಯ ಕೊನೆಯಲ್ಲಿ ಇದಕ್ಕೆ ಪ್ರತಿಭಟನೆಯನ್ನು ರತ್ನಳ ಮೂಲಕ ಸಾಭೀತುಪಡಿಸುತ್ತಾರೆ. ಮತ್ತೊಂದು ಸ್ತರ ವೀರಶೈವ ಬೀದಿಯ ಶಂಭು ಮತ್ತಿತರ ಸ್ನೇಹಿತರು ಹಾಗೂ ದಲಿತ ಹುಡುಗನಾದ ಚವುಡನ ನಡುವೆ ನಡೆಯುವಂತಹ ಸಂಘರ್ಷ. ಶಂಭ ಆರ್ಥಿಕವಾಗಿ ಸುಸ್ಥಿತಿಯಲ್ಲಿಲ್ಲದ ಕುಟುಂಬಕ್ಕೆ ಸೇರಿದವನು. ಹುಡುಗರ ಆಟದ ಪರಿಪಾಠದಲ್ಲಿಯ ಗುಂಪುಗಾರಿಕೆಯಲ್ಲಿ ಶಂಭು ಚವುಡನಿಗೆ ಜಾತಿಯ ಹಿನ್ನೆಲೆಯಿಂದಲೇ ಅಪಮಾನ ಮಾಡುತ್ತಾನೆ.

"ನಿಮ್ ಕೇರ್ಯಾಗ ಡಬ್ಬಿಗಳಿಲ್ಲಾಂತ ನಮ್ಮೋಣ್ಯಾಕ ಬಂದೀಯಾ... ಇಲ್ಲಿ ನಿಂಗೇ ಡಬ್ಬಿಗಳು ಸಿಗೋದಿಲ್ಲಾ, ತಿಳಿತಾ"[೧೪]. ಕುಡಿಯೊಡೆಯುತ್ತಿರುವ ನೀಚ ಜಾತಿ ಪ್ರಜ್ಞೆಯನ್ನು ಇದು ಸೂಕ್ಷ್ಮವಾಗಿ

ಸಂಕೇತಿಸುತ್ತದೆ. ಈ ವ್ಯವಸ್ಥೆ ಹೇಗೆ ಮನುಷ್ಯನನ್ನೇ ಜಾತಿ ಹಾಗೂ ವರ್ಗದ ಆಧಾರದ ಮೇಲೆ ಒಡೆದು ಹಾಕಿದೆ ಎಂಬ ವಾಸ್ತವವನ್ನು ಕಥೆಗಾರರು.ಸಮರ್ಥವಾಗಿ ಚಿತ್ರಿಸಿದ್ದಾರೆ.

ಕುಂವೀ ಅವರು ವರ್ಗ ಸಂಘರ್ಷವನ್ನು ಚಿತ್ರಿಸಿರುವ ಕಥೆಗಳಲ್ಲಿ 'ಕೆಂಡದ ಮಳೆ ಕರೆವಲ್ಲಿ ಉದಕವಾಗಿದ್ದವರ ಕಥೆ' ಎಂಬುದೂ ಒಂದು. ಇಲ್ಲಿ ವರ್ಗ ಎಂಬ ಪರಿಕಲ್ಪನೆಯನ್ನು ಧರ್ಮ ಎಂಬ ಅರ್ಥದಲ್ಲಿ ಬಳಸಿಕೊಂಡಿದ್ದೇನೆ.

ಪ್ರಸ್ತುತ ಈ ಕಥೆಯಲ್ಲಿ ದೂಪಹಳ್ಳಿ ಎಂಬ ಗ್ರಾಮದಲ್ಲಿ ಒಂದು ಮುಸ್ಲಿಂ ಕುಟುಂಬ ಹಾಗೂ ವೀರಶೈವ ಧರ್ಮದ ನಡುವೆ ನಡೆಯುವ ಸಂಘರ್ಷವನ್ನು ಚಿತ್ರಿಸುತ್ತದೆ. ಕಥೆಯಲ್ಲಿ ಬರುವ ಪೀರಣ ಎಂಬಾತ ಮುಸ್ಲಿಂ ಯುವಕ. ಈತನ ತಂದೆ ಶೇಕಣ್ಣ ಕಾಲವಾದ ನಂತರ ಹೆಣವನ್ನು ವೀರಶೈವರ ರುದ್ರಭೂಮಿಯಲ್ಲಿ ಹೂಳುತ್ತಾನೆ.

ಕಾಲಾನಂತರದಲ್ಲಿ ಮಳೆಯಾಗದಿದ್ದಾಗ ಅದಕ್ಕೆ ವೀರಶೈವ ರುದ್ರಭೂಮಿಯಲ್ಲಿ ಮುಸ್ಲಿಂ ಹೆಣ ಹೂತಿರುವುದೇ ಕಾರಣವೆಂದು ಅಲ್ಲಿನ ಜನ ತಿಳಿಯುತ್ತಾರೆ. ಶೇಕಣ್ಣ ಬದುಕಿದ್ದಾಗ ಜಮೀನು ಕೊಳ್ಳುವ ವಿಚಾರದಲ್ಲಿ ಸಂಘರ್ಷವಾಗಿರುತ್ತದೆ. "ಲೇ ತುರುಕ ನೀನು ಅದೆಂಗ ಹೊಲ ಕೊಳ್ತಿಯೋ ನೋಡೆಬುಡ್ತೀನಿ"[೧೫] ಎಂದು ಗೌಡ ಸಡ್ಡೊಡೆದಿರುತ್ತಾನೆ.

ಆದರೂ ಹೆದರದೆ ಶೇಕಣ್ಣ ಜಮೀನು ಕೊಂಡಿರುತ್ತಾನೆ. ಇಲ್ಲಿ ವೀರಶೈವ ಗ್ರಾಮದಲ್ಲಿ ಮುಸ್ಲಿಂ ಧರ್ಮದವರಿಗೆ ಜಮೀನುಕೊಳ್ಳುವ ಹಕ್ಕಿಲ್ಲ ಎಂಬ ಅಂಶ ಧ್ವನಿತವಾಗುತ್ತದೆ.

ಬಸಾದೇವ್ರ ಗುಡಿತಂಗ ಪಂಚಾಯ್ತಿ ಸೇರಿದಾಗ ಪೀರಣ್ಣ ಶಾಲಮ್ಮ ಹಾಗೂ ಬಾಷಾ ಹೋಗಿ ನಿಂತಿದ್ದನ್ನು ಕಥೆಗಾರ ಚಿತ್ರಿಸುವ ರೀತಿಯಲ್ಲೇ ದೌರ್ಜನ್ಯದ ಛಾಪು ಅಡಗಿದೆ. "ದೈವಸ್ಥರ ಕಣ್ಣಿಗೆ ಆ ಮುವ್ವರು ಹಬ್ಬದ ಕುರಿಗಳಂತೆಯೂ, ಆ ಮುವ್ವರಿಗೆ ದೈವಸ್ಥರು ಸೀಳು ನಾಲಗೆಯ ಬೇಟೆ

ನಾಯಿಗಳಂತೆಯೂ ಕಂಡುಬಂದರು"[೧]. ಎಂಬಲ್ಲಿ ಬಳಕೆಯಾಗಿರುವ ಹಬ್ಬದ ಕುರಿ ಹಾಗೂ ಸೀಳು ನಾಲಗೆಯ ಬೇಟೆನಾಯಿ ಎಂಬ ಪ್ರತಿಮೆಗಳು ಅನುಕ್ರಮವಾಗಿ ಮುಗ್ಧ ಹಾಗೂ ಕ್ರೂರತೆಯ ಸಂಕೇತಗಳಾಗಿವೆ.

ದಂಡ ಕಟ್ಟದಿದ್ದುದರಿಂದ ಹೆಣವನ್ನು ಹೊರತೆಗೆದು ಊರಗಸೆಬಾಕಲ ಹಾಕುತ್ತಾರೆ. ಅದನ್ನು ಸಹಿಸದ ಬಾಷಾ ಕುಡಿದು, ಗೌಡನ ಮನೆಯ ದೇವರ ಕೋಣೆಯ ಕಬ್ಬಿಣದ ಪೆಟಾರಿ ಮೇಲೆ ಹೆಣವನ್ನು ಹೊತ್ತು ತಂದು ಮಲಗಿಸುತ್ತಾನೆ. ಸಿಟ್ಟಿಗೆದ್ದ ಗೌಡ ಬಾಷನನ್ನು ಪೋಲೀಸರಿಗೆ ಒಪ್ಪಿಸುತ್ತಾನೆ.

ಐದುನೂರು ದಂಡ ಕಟ್ಟಲಾಗದ ಪೀರಣ್ಣ ಸಾವಿರ ರೂಪಾಯಿ ಲಂಚಕೊಟ್ಟು ಬಾಷಾನನ್ನು ಬಿಡಿಸಿಕೊಳ್ಳಬೇಕಾಗುತ್ತದೆ. ಇಡೀ ವ್ಯವಸ್ಥೆ ಬಡವರನ್ನು ಶೋಷಿಸುವ ರೀತಿ ಬಿಡಿ ಬಿಡಿಯಾಗಿ ಚಿತ್ರಿತವಾಗಿದೆ.

ಶುಲ್ಕ ಕಥೆಯಲ್ಲಿ ಪ್ರತಿಭಟನೆಯ ರೂಪ ಅತ್ಯಂತ ಮನೋಜ್ಞವಾಗಿ ಚಿತ್ರಿತವಾಗಿದೆ. ವರ್ಗ ಸಂಘರ್ಷ ಎಂಬ ಪದಕ್ಕೆ ಇಲ್ಲಿ ನಾನು ನೀಡಿರುವ ಅರ್ಥ ಆರ್ಥಿಕ ಅಸಮಾನತೆಯ ನೆಲಗಟ್ಟಿನಿಂದ ಕೂಡಿದಾಗಿದೆ. ಕಥೆಯಲ್ಲಿ ನಿರೂಪಕ ಒಬ್ಬ ಶಿಕ್ಷಕನಾಗಿದ್ದು, ಕೈತುಂಬಾ ಸಂಬಳ ಪಡೆಯುವಂಥವನು. ಆತನ ಶಿಷ್ಯ ಅಶೋಕ ಆರ್ಥಿಕವಾಗಿ ಹಿಂದುಳಿದಿರುವ ಬಡ ಕುಟುಂಬಕ್ಕೆ ಸೇರಿದವನಾದರೂ ಬುದ್ಧಿವಂತ ಹುಡುಗನಾಗಿರುತ್ತಾನೆ.

ಸಮಾಜ ಬಡವರನ್ನು ನಡೆಸಿಕೊಳ್ಳುವ ಹೇಯ ನಡವಳಿಕೆಯನ್ನು ನೋಡಿ ರೋಸಿಹೋಗಿ ನಕ್ಸಲೈಟ್ ಆಗಿರುತ್ತಾನೆ. ಸಾಮಾಜಿಕ ವರ್ಗ ಸಂಘರ್ಷಕ್ಕೆ ಆರ್ಥಿಕ ಅಸಮಾನತೆ ಕಾರಣವೆಂಬ ವಾದ ನಿರೂಪಕನ ಮಡದಿಯದಾಗಿದ್ದರೆ. ಜಾತಿ ವ್ಯವಸ್ಥೆ ಕಾರಣವೆಂಬುದು ನಿರೂಪಕನ ವಾದವಾಗಿರುತ್ತದೆ.

ಕೂಳೆ ಕಥೆಯಲ್ಲಿ ದಬ್ಬಾಳಿಕೆಯು ಕೆಳವರ್ಗದವರಲ್ಲಿ ಅವ್ಯಾಹತವಾಗಿರುವ ಚಿತ್ರಣಕೊಡುತ್ತಾರೆ ಕುಂವೀ. ಮಾರುತಿ ಬಡಾವಣೆಗೆ ಭಿಕ್ಷೆಗೆ ಬಂದ ಕುಂಟನನ್ನು ಡುಮ್ಮ ದಬಾಯಿಸಿ ಓಡಿಸುತ್ತಾನೆ. ಶಕ್ತರಾದವರು ದುರ್ಬಲವನ್ನು ತುಳಿಯುವುದು ಎಲ್ಲಾ ವರ್ಗದಲ್ಲೂ ನಡೆಯುವ ಶೋಷಣೆಯಾಗಿರುವುದು. ಅಂತೆಯೇ ಹಣಬಲವು ಭಾವನೆಗಳನ್ನು ಮೀರಿ ಬದುಕಿನ ಅನಿವಾರ್ಯವಾಗುತ್ತದೆ ಎಂಬುದನ್ನು ಸಣ್ಣಿಯನ್ನು ಅವಳ ಅಪ್ಪ ಕುರುಡ ಗವಾಯಿಯನ್ನು ಮದುವೆಯಾಗಲು ಒಪ್ಪಿಸುವ ಸನ್ನಿವೇಶದಲ್ಲಿ ವ್ಯಕ್ತವಾಗುತ್ತಿದೆ.

ಒಟ್ಟಾರೆ ಕುಂವೀ ತಮ್ಮ ಕಥೆಗಳಲ್ಲಿ ವರ್ಗ, ಜಾತಿ, ಸಂಘರ್ಷಗಳನ್ನು ದಟ್ಟವಾಗಿ ಚಿತ್ರಿಸಿದ್ದಾರೆ. ತನ್ಮೂಲಕ ಬೃಹತ್ತಾದ ಒಳನೋಟಗಳನ್ನು ನೀಡಿದ್ದಾರೆ ಎನ್ನಬಹುದು.

ಇತರ ಕಥೆಗಳು

ರಾಯಲಸೀಮೆಯ ಕ್ರೂರ ಜಗತ್ತು ಕುಂವೀ ಅವರ ಅನೇಕ ಕಥೆಗಳ ವಸ್ತುವಾಗಿದೆ. ಇಂತಹ ಕಥೆಗಳಲ್ಲಿ 'ಸೂತಕ'ವೂ ಒಂದು. ಸೀತಂಪಲ್ಲಿ ಅನಂತಶಯನ ರೆಡ್ಡಿಯನ್ನು ಹಳೆಯ ದ್ವೇಷದಿಂದ ನಾಯ್ಡು ಕೊಲೆ ಮಾಡಿಸುತ್ತಾನೆ.

ನಿರೂಪಕರು ಪ್ರತ್ಯಕ್ಷದರ್ಶಿಯಾದರೂ ನಾಯ್ಡು ಅವರನ್ನು ಪ್ರೀತ್ಯಾದರಗಳಿಂದ ಸತ್ಕರಿಸುತ್ತಾರೆ. ಪಾತಕ ಲೋಕದ ಜನರಲ್ಲೂ ಇರುವ ಮಾನವೀಯತೆಯನ್ನು ಅನುಭವಿಸುವುದು ಸಾಧ್ಯ. ಅಂತೆಯೇ ಎಷ್ಟೋ ಅನಿವಾರ್ಯ ಸಂದರ್ಭಗಳು ಅವರನ್ನು ಕಟುಕರನ್ನಾಗಿ ಮಾಡುವ ವಾಸ್ತವವನ್ನು ಈ ಕಥೆಯಲ್ಲಿ ಕುಂವೀ ತೆರೆದಿಡುತ್ತಾನೆ.

ಆಡಳಿತಗಾರರ ಅವಿವೇಕದ ನಿರ್ಧಾರಗಳು ತಂದೊಡ್ಡುವ ನಿಷ್ಕ್ರಿಯತೆಯನ್ನು ಹೇಳುವುದೇ 'ಹೂವ ತರುವ ಮನೆಗೆ' ಕಥೆಯ ವಸ್ತು. ಘನಸರ್ಕಾರವು ಮಲ್ಲಿಗೇನಹಳ್ಳಿಯಲ್ಲಿ ಹೂವಿನ ವಹಿವಾಟು, ಒಡನಾಟವನ್ನು ನಿಷೇಧಿಸಿ ೧೫ ದಿನಗಳಾದರೂ ನಾಡಿನಾದ್ಯಂತ ಜನರಿಗೆ ತಿಳಿದಿದ್ದು ಪತ್ರಿಕೆಯ ಮುಖಪುಟ ನೋಡಿಯೇ. ಜಾಗತೀಕರಣಕ್ಕೆ ಮಣೆ ಹಾಕಿ ದೇಸೀಯತೆಯನ್ನು ನಿರ್ಲಕ್ಷಿಸುವ ಸರ್ಕಾರದ ಧೋರಣೆಯನ್ನು ಕಥೆಗಾರರು ವಿಡಂಬಿಸುತ್ತಾರೆ. ಜನರ ಸೂಕ್ಷ್ಮ ಭಾವನೆಗಳಿಗೆ ಸ್ಪಂದಿಸದೆ ಅವರ ಅವಿವೇಕದ ನಿರ್ಧಾರಗಳನ್ನು ಸಾಮಾನ್ಯರ ಮೇಲೆ ಹೇರುವ ರಾಜಕಾರಣಿಗಳ ಎಡಬಿಡಂಗಿತನವನ್ನು ಲೇವಡಿ ಮಾಡುತ್ತಾರೆ.

ಪ್ರಗತಿಪರ ಚಿಂತಕನೆನಿಸಿಕೊಂಡ ಮಲ್ಲೇಶಿ ಒಂದು ನಿಯೋಗ ರಚಿಸಿಕೊಂಡು ಮಲ್ಲೇನಹಳ್ಳಿಯ ಪ್ರವೇಶಿಸಬಯಸಿದರೂ, ಊರಿನ ಮಕರಂದಪ್ಪನನ್ನು ಸೋದರ ಮಾವನೆಂದು ಸುಳ್ಳು ಹೇಳಬೇಕಾಗುತ್ತದೆ. ಪ್ರಜಾಪ್ರಭುತ್ವದ ವಿಡಂಬನೆ ಇಲ್ಲಿದೆ. ಮಲ್ಲೇನಹಳ್ಳಿಯನ್ನು ಪ್ರವೇಶಿಸಿದ ಮಲ್ಲೇಶಿಗೆ ತನ್ನ ಉದ್ವೇಗವನ್ನು ಕಾರ್ಯಗತಗೊಳಿಸುವುದು ಸಾಧ್ಯವಾಗುವುದೇ ಇಲ್ಲ.

'ಉಗುರಲಿ ಹೋಗುವ ಕೆಲಸಕೆ ಕೊಡಲಿ ತಗೊಂಡಂತೆ' ಸರ್ಕಾರದ ನಿರ್ಧಾರವಾಗಿದ್ದು ನಿಯೋಗಕ್ಕೆ ಸ್ಪಷ್ಟವಾಗುತ್ತದೆ. ಜೀರ್ರ ಜನಾಂಗದ ಕುಲಕಸುಬು ಹೂವಿನ ಬೆಳೆ ಬೆಳೆಯುವುದು ಮತ್ತು ಮಾರಾಟ. ಈ ವೃತ್ತಿಯನ್ನು ಇಸ್ಮಾಯಿಲ್ ಎಂಬ ಮುಸಲ್ಮಾನನೊಬ್ಬ ಪ್ರಾರಂಭಿಸಿದ್ದು ಗೊಂದಲಗಳಿಗೆ ಕಾರಣವಾಗಿತ್ತು. ರಾಜಕಾರಣಿಗಳ ಅವಿವೇಕದ ನಿಲುವಿನ ಅದ್ಭುತ ಕಲ್ಪನೆ ಈ ಕಥೆಯಲ್ಲಿ ವಿಡಂನಾತ್ಮಕವಾಗಿ ಮೂಡಿಬಂದಿದೆ.

ಇದೇ ಮಾದರಿಯ ಕಥೆ 'ಕ್ರಮ' ಆಧುನಿಕರೆನಿಸಿಕೊಂಡ ಜನರ ಯಾಂತ್ರಿಕ ಬದುಕಿನ ಈ ನಿಷ್ಕ್ರೀಯತೆಯ ಚಿತ್ರಣ. "ಆ ನಗರದ ನಡುವೆ ಒಂದು ಬೆಟ್ಟ ಕೋಡುಗಲ್ಲುಗಳ ಕಿಷ್ಕಿಂದೆಯೊಳಗೆ ಗವಿಗಳು... ವಿಚಿತ್ರಮೌನ ಮತ್ತು ವಿಷಾದ ರಕ್ಷಿಸುವುದಕ್ಕಾಗಿಯೇ ಎಂಬತಿರುವ ಕೋಟೆಯ ದುರ್ಬಲ

ಗೋಡೆಗಳು... ಆಟದ ಆಟಿಕೆಗಳಿಂದ ಜನ ಉದಾಸೀನತೆಯಿಂದಲೇ ಮಾಡಲ್ಪಟ್ಟಂತಿರುವ ಜನ... ತಮ್ಮ ಬಗ್ಗೆ ತಾವೇ ನಿರಾಸಕ್ತಿ ತುಂಬಿ ತುಳುಕುತ್ತಿರುವ ಜನ”[೧೭] ಇಂಥ ನಿರಾಸಕ್ತಿಯೇ ಮೈವೆತ್ತಂತಿದ್ದ ಯಾಂತ್ರಿಕ ನಗರಯನ್ನು ಪ್ರವಾಸಿ ಕೇಂದ್ರ ಮಾಡಲು ನಿರ್ಧರಿಸುವ ಸರ್ಕಾರ ಅಲ್ಲಿನ ಜನರಿಗೆ ಉತ್ಸುಕ ತುಂಬಲು ಮೃಗಾಲಯ ಸ್ಥಾಪಿಸುತ್ತದೆ.

ಮೃಗಾಲಯಕ್ಕೆ ಜನರನ್ನು ಆಕರ್ಷಿಸಲು ಅನೇಕ ಪ್ರಾಣಿಗಳ ತೈಲವರ್ಣದ ಭಿತ್ತಿಚಿತ್ರಗಳನ್ನು ಬರೆಸಿ ನಗರದ ಪ್ರತಿಗೋಡೆಗಳ ಮೇಲೆ ಅಂಟಿಸುತ್ತಾರೆ. ಘೋಷಣೆಗಳನ್ನು ಸಮೂಹ ಮಾಧ್ಯಮಗಳ ಮೂಲಕ ಪ್ರಚಾರ ಮಾಡುತ್ತಾರೆ. ಒತ್ತಕ್ಷರ ಕೇಳರಿಯದ ಅವರು ಪ್ರಾಣಿಕುರಿತ ಘೋಷಣೆ ಹೇಗೆ ಕೇಳಿಯಾರು? ಪ್ರಾಣಿ ಹೆಸರು ಕೇಳಿದರೇ ಕಿಟಾರನೆ ಕಿರುಚಿಕೊಳ್ಳುತ್ತಿದ್ದರು.

ಇಂಥ ಜನರನ್ನು ಮೃಗಾಲಯ ನೋಡಲು ಬರುವಂತೆ ಮಾಡಲು ರೇಷನ್ ಕಾರ್ಡ್‌ಗೂ ಮೃಗಾಲಯದ ಸಂದರ್ಶನ ಪತ್ರ ಲಗತ್ತಿಸುವ ಮೂರ್ಖ ನಿರ್ಧಾರ ತೆಗೆದುಕೊಳ್ಳುತ್ತದೆ ಸರ್ಕಾರ. ಈ ನಿರ್ಧಾರ ಭ್ರಷ್ಟಾಚಾರಕ್ಕೆ ಕಾರಣವಾಗುತ್ತದೆ. ಕೊನೆಗೆ ಮಿಲಿಟರಿಯ ಸಹಾಯ ಪಡೆದು ಸರ್ಕಾರ ಜನರನ್ನು ಬಲವಂತವಾಗಿ ಮೃಗಾಲಯಕ್ಕೆ ಸಾಗಿಸುತ್ತಾರೆ. ಬೆದರಿ ಬೆಂಡಾದ ಜನ ತಮ್ಮ ತಮ್ಮ ಉಂಗುಷ್ಟವನ್ನು ನೋಡುತ್ತಿತ್ತು. ನಿಷ್ಕ್ರಿಯ ಜನರ ಮಧ್ಯೆ ಬಾಲಕನೊಬ್ಬ ಹುಲಿಯ ಬೋನಿನ ಹತ್ತಿರ ನಡೆದು ಗೊಂಡೇವು ಬಾಲದೊಂದಿಗೆ ಆಟ ಆಡತೊಡಗಿದ, ಆನಂದದಿಂದ ಕೇಕೆ ಹಾಕಿದ ನಗರ ವಾಸಿ ಕಡೆ ಕೈ ಬೀಸಿ ಆಮಂತ್ರಣ ನೀಡಿದ.

ಅರೆಹುಲಿ ಅಂದರೆ ಇಷ್ಟೇನೆ ಅನ್ನಿಸಿತು ಅವರಿಗೆ ಅವರು ಸಾಮೂಹಿಕವಾಗಿ ಬೋನುಗಳತ್ತ ಲವಲವಿಕೆಯಿಂದ ಹೆಜ್ಜೆ ಹಾಕಿದರು. ಈ ಕಥೆಯು ಯಾಂತ್ರಿಕ ಬದುಕಿನ ಏಕಾತನತೆಯಿಂದ ಕಳೆದುಕೊಳ್ಳುತ್ತಿರುವ ಬದುಕಿನ ಸುಂದರತೆಯ ನೆನಪಿಸುವ ವಿಶಿಷ್ಟ ಪ್ರಯತ್ನ.

ಆಧುನಿಕ ಪ್ರಜಾಪ್ರಭುತ್ವದ ನಿರಂಕುಶ ಆಡಳಿತದ ವಾಸ್ತವ ಚಿತ್ರಣ ಕೊಡುವ ಕಥೆ "ಒಂದು ಪ್ರಶ್ನೆಯ ಕಥೆ". ಜನರ ಅಜ್ಞಾನ ಅಂಧಕಾರದ ಬದುಕೇ ಪ್ರಭುತ್ವಕ್ಕೆ ವರದಾನವೆಂದು ನಂಬುವ ದೂರ್ತ ರಾಜಕಾರಣಿಗಳ ಪಟಾಂ ಇರುವ ಸರ್ಕಾರದ ನಿಲುವುಗಳೇ ಅವಿವೇಕ.

"ನೆಮ್ಮದಿಯನ್ನು ಅಭಿವೃದ್ಧಿಶೀಲ ರಾಷ್ಟ್ರಗಳಿಗೆ ರಫ್ತು ಮಾಡುತ್ತಿದ್ದ..."[೧೯] ಹೀಗೆ ಪ್ರಾರಂಭವಾಗುವ ಕಥೆ "ಬನ್ನಿ ನಿನ್ನೆಯನ್ನು ಜೀವಂತವಾಗಿರಿಸೋಣ"[೨೦] ಎಂಬ ಧ್ಯೇಯ ವಾಕ್ಯ ಪರಿಪಾಲನ ಸರ್ಕಾರಗಳು. ಅವು ಕೊಡುವ ಸವಲತ್ತುಗಳು ಭರವಸೆಯಲ್ಲಿಯೇ ಕರಗಿ ಹೋಗುವುದುಂಟು.

ಈ ಕಥೆಯಲ್ಲೋ ಭರವಸೆ ಇಲ್ಲಿ ಜನರ ಹಸನ್ಮುಖತೆಗೆ ಭಂಗ ಬರುವುದೆಂದು ಯಾವ ಸರ್ಕಾರವೂ ಜನರಿಗೆ ಕನಿಷ್ಟ ಸವಲತ್ತನೂ ಕಲ್ಪಿಸಿಕೊಡುವುದರ ಜತೆ, ಅಕ್ಷರ ನೆಮ್ಮದಿಯನ್ನು ಕದಡುವ ಪಡಗೋಲು ಅಥವಾ ಕಲಿಕೆ ಸಾಂಕ್ರಾಮಿಕ ಎಂಬಂಥ ಧ್ಯೇಯ ವಾಕ್ಯಗಳನ್ನು ಅಳವಡಿಸಿಕೊಂಡಿರುತ್ತದೆ. ಇಂಥ ಕತೆಗಳ ಮೂಲಕ ನೋಡಿದಾಗ ಕುಂವೀ ಒಬ್ಬ ವಾಸ್ತವವಾದಿ ಲೇಖಕರಾಗಿ ಕಾಣುತ್ತಾರೆ. ವಾಸ್ತವದ ಬಗ್ಗೆ ಅವರಲ್ಲಿರುವ ಮರುಕಬೆರೆತ ಸಿಟ್ಟು ಇಂತಹ ಕಥೆಗಳಲ್ಲಿ ವ್ಯಕ್ತವಾಗುತ್ತದೆ.

ಕಾರ್ಯ ಮಾನವೀಯತೆ ಮುಖಾಮುಖಿಯಾಗುವ ಹೆಣ್ಣಿನ ಭ್ರಾತೃತ್ವ ಕಕ್ಕುಲಾಲಿಯೇ ಗೆಲ್ಲುವ ಕಥಾಚಿತ್ರಣ 'ಹತ್ಯೆ' ಕಥೆಯದು. ಜಮೀನ್ದಾರಿ ವ್ಯವಸ್ಥೆಯ ಕ್ರೂರತೆಯು ಆಕೆಯ ಮಮತೆಯ ಮುಂದೆ ಮಂಡಿಯೂರುತ್ತದೆ. ತನ್ನ ಜಮೀನ್ದಾರಿಕೆಗೆ ಅಪಾಯಕಾರಿಯಾದುದು ಅರಿತ ವೆಂಕಪ್ಪ ನಾಯ್ಡು, ಕಂದೀಲು ಚಂದ್ರಣ್ಣನನ್ನು ಕೊಲ್ಲಲು ತನ್ನ ಬಂಟ ಬಲರಾಮನನ್ನು ಕಳುಹಿಸಿದ್ದನು.

ತಾನು ಮನುಷ್ಯನೂ ತನ್ನಲೂ ಭಾವನೆಗಳಿವೆ ಎಂಬ ಸಾಮಾನ್ಯ ತಿಳುವಳಿಕೆಯೂ ಅವನಲ್ಲಿ ಬಾರದ ಹಾಗೆ ಒಂದು ನಿರ್ಜೀವ ಆಯುಧದಂತೆ ಬೆಳೆದಿದ್ದವ ಬಲರಾಮ. ಕಂದೀಲು ಚಂದ್ರಣ್ಣನನ್ನು

ಹತ್ಯೆ ಮಾಡಿ ತನ್ನ ಒಡೆಯನ ಆಜ್ಞೆ ಪಾಲಿಸಲು ಚಂದ್ರಣ್ಣನ ಮನೆ ಪ್ರವೇಶಿಸುವ ಬಲರಾಮ ತನ್ನ ಅರಿವಿಗೂ ಮೀರಿ ಶಿವುವಾಗಿ ಬದಲಾಗುತ್ತಾನೆ.

ಚಂದ್ರಣ್ಣನ ಹೆಂಡತಿ ಗೌರಮ್ಮ ಕಳೆದು ಹೋದ ತನ್ನ ತಮ್ಮ ಶಿವನೇ ಬಂದಿರುವನೆಂದು ಸಂಭ್ರಮಿಸುವ ಗಳಿಗೆಯಲ್ಲಿ ಕಥೆ ತಿರುವು ಪಡೆದುಕೊಳ್ಳುತ್ತದೆ. "ಯಾವುದೋ ಒಂದು ಅಗೋಚರ ಶಕ್ತಿಯ ಸೆಳೆವಿಗೆ ಸಿಲುಕಿ ಅವನು ಮುಗ್ಗರಿಸಿ ಬಾಗಿಲು ದಾಟಿ ಅಮ್ಮ ಎಂದು ಉದ್ಗರಿಸಿದ ಬಹುಶಃ ಅವನು ಹಾಗೆ ಉದ್ಗರಿಸಿದ್ದು ಅದೇ ಮೊದಲು... ಆ ಎರಡಕ್ಷರಗಳ ಮೊತ್ತ ತನ್ನಂತರಾಳದಿಂದ ಒಡಮೂಡಿ ಶಬ್ದ ಸಾನ್ನಿಧ್ಯ ಪಡೆದಿತ್ತು. ಅದೇ ಅಂತರಾಳದ ಇನ್ನೊಂದು ಕತ್ತಲೆ ಮೂಲೆಯಿಂದ ಮಗೂ ಎಂಬ ಶಬ್ದ ಕ್ಷೀಣವಾಗಿ ಅಸ್ಪಷ್ಟವಾಗಿ ಮೂಡಿತು.

ಅವನೆಂದು ಕೊಂಡ ಓಹ್..., ತನ್ನೊಳಗೂ ತಾಯಿ ಇರುವಳೆಂದು"[೨೩] ರಾಯಲಸೀಮೆಯ ಜಮೀನ್ದಾರಿ ವ್ಯವಸ್ಥೆ ತನ್ನ ಸ್ವಾರ್ಥಕ್ಕೆ ಮನುಷ್ಯನನ್ನು ಮಾನವೀಯ ಗುಣವೇ ಗೊತ್ತಿಲ್ಲದ ಆಯುಧವಾಗಿ ರೂಪಿಸುತ್ತಿದ್ದ ವಾಸ್ತವ ಚಿತ್ರಣ. ಮಮತೆ, ವಾತ್ಸಲ್ಯದ ಪದ ಕೇಳಿಯೂ ಗೊತ್ತಿರದಿದ್ದ ಬಲರಾಮ ಗೌರಮ್ಮಳ ಮಮತೆಯಲ್ಲಿ ಕರಗಿಹೋಗುತ್ತಾನೆ.

ಪ್ರಸವ ವೇದನೆಯ ಚಿತ್ರಣ ಕೊಡುವಾಗ ಅಲ್ಲಿ ಗಂಗೆಯು ಶಿಶುವೊಂದನ್ನು ಭೂಮಿಗೆ ನೀಡಲಿರುವ ವೇದನೆಯನ್ನು, ಬಲರಾಮನ ಒಡಲಿನಲ್ಲಿರುವ ಕ್ರೂರತೆ ಹೊರಹಾಕುವುದನ್ನೂ ಧ್ವನಿಸುತ್ತದೆ. ಶಿಶು ಜನನ ತಾಯಿಗೆ ಸಂತೋಷ ತಂದರೆ ಬಲರಾಮನ ಒಡಲ ಕ್ರೌರ್ಯ ಹೊರಬಂದರೆ ಆತನೂ ಮನುಷ್ಯನಾಗುತ್ತಾನೆ ಭಾಷೆಯ ಧ್ವನಿಪೂರ್ಣ ಬಳಕೆ.

ಚಂದ್ರಣ್ಣನ ಮನೆಯಲ್ಲಿ ರಕ್ತ ಹರಿಸಲು ಆಯುಧವಾಗಿ ಬಂದ ಬಲರಾಮ, ಪ್ರೀತಿಯನ್ನೇ ಆಯುಧವಾಗಿ ಬಳಸಬಹುದೆಂದು ಮನಸ್ಸಿಗೆ ಬಂದಂತೆ, ಅದರ ಅಮಾನವೀಯತೆ ಅರಿವಾಗಿ,

ತನ್ನೊಳಗಿನ ಆಯುಧವನ್ನು ಹಣತೆಯಾಗಿಸಿ ಬೆಳಗಿಸುವ ಮಗುವಿನ ಅಳು ಅವನ ಮನಸ್ಸು ತಿಳಿ ನೀರ ಸರೋವರವಾಗಿಸುತ್ತದೆ.

"ಹುಟ್ಟಲಿರುವ ಮಗು ತನ್ನೊಳಗೂ ಶಿಶುತ್ವವನ್ನು ಸೃಷ್ಟಿಸಲಿ ತಾಯ್ತನದ ಅನಿರ್ವಚನೀಯ ಅಲೌಕಿಕ ಆನಂದ ತನ್ನೊಳಗೂ ಆಶ್ರಯಪಡೆಯಲಿ... ನನ್ನಿಂದ ಬಲರಾಮ ತೊಲಗಿ ಹೋಗಿ ಶಿವಣ್ಣ ಒಡಮೂಡುವಂತಾಗಲಿ"[೨೪]. ತನ್ನ ಬದುಕಿನ ಹೇಯತೆಗೆ ಅಸಹ್ಯಿಸಿದ ಬಲರಾಮ ಶಿವುವಾಗಿ ಬದಲಾಗಿಯೂ ಪಶ್ಚಾತ್ತಾಪದ ಬೇಗೆಯಲ್ಲಿ ತಾನೇ ಆತ್ಮಾಹುತಿ ಮಾಡಿಕೊಳ್ಳುತ್ತಾನೆ.

ಕಥೆಯ ಕೊನೆಯಲ್ಲಿ ಶಿವು ಆಗಿ ಬದಲಾದ ಬಲರಾಮನು, ಇಲ್ಲವಾಗುತ್ತಾನೆ. ಪಶುವಾಗಿ ಮಾಡಿದ ಸಮಾಜವು ಮತ್ತೆ ಮಾನವನಾದವನ್ನು ಪ್ರೀತಿಯಿಂದ ನಡೆಸಿಕೊಳ್ಳಬಂದ ವಾಸ್ತವಕ್ಕೆ ಲೇಖಕರು ಕನ್ನಡಿ ಹಿಡಿಯುತ್ತಾರೆ.

ಕುಂವೀ ಅವರು ಒಬ್ಬ ಹುಟ್ಟು ಕಥೆಗಾರರು. ಅವರೇ ಹೇಳುವಂತೆ "ಬಾಲ್ಯದ ದಿನಗಳಲ್ಲೇ ನಾನು ಮೃದ್ವಂಗಿಯಾಗಿಬಿಟ್ಟೆ. ಕಾಂಪ್ಲೆಕ್ಸ್‌ಗಳಿಂದಾಗಿ ಕಥೆಗಳನ್ನು ಸರಾಗವಾಗಿ ಹೇಳತೊಡಗಿವೆ. ಸಹಪಾಠಿಗಳಷ್ಟೇ ಏಕೆ ಶಿಕ್ಷಕರೂ ಮುಂದೇನಾಯ್ತು ಮಂದೇನಾಯ್ತು ಎಂದು ಪೀಡಿಸುತ್ತಿದ್ದರು. ಒಂದೇ ಕಥೆಯನ್ನು ನಾನು ವಾರಗಟ್ಟಲೆ ಹೇಳುತ್ತಿದ್ದೆ"[೨೧] ಎನ್ನುತ್ತಾರೆ. ತಾವು ಬಾಲ್ಯದಿಂದ ಕಂಡ ಪ್ರತಿಕ್ಷಣದ ಅನುಭವವನ್ನು ಕಥೆಯಾಗಿಸುವ ಸಾಮರ್ಥ್ಯ ಕುಂವೀ ಅವರದು. ಆದ್ದರಿಂದಲೇ "ಕುಂವೀ ಒಬ್ಬ ಸಾಂಸ್ಕೃತಿಕ ಕತೆಗಾರ"[೨೨] ಎನ್ನುವ ಮಲ್ಲೇಪುರಂ ಜಿ. ವೆಂಕಟೇಶ ಅವರ ಮಾತನ್ನು ಒಪ್ಪಲೇಬೇಕು.

ಅಡಿಟಿಪ್ಪಣಿ

೧ ... ಮಣ್ಣೆ ಮೊದಲು ಕುಂ. ವೀರಭದ್ರಪ್ಪ ಕ್ರೈಸ್ತ, ಕಾಲೇಜು, ಕನ್ನಡ ಸಂಘ, ಬೆಂಗಳೂರು (೨೦೦೭) ಪುಟ ೦೧

೨ ... ಮಣ್ಣೆ ಮೊದಲು ಕುಂ. ವೀರಭದ್ರಪ್ಪ ಕ್ರೈಸ್ತ, ಕಾಲೇಜು, ಕನ್ನಡ ಸಂಘ, ಬೆಂಗಳೂರು (೨೦೦೭) ಪುಟ ೦೯

೩ ... ಮಣ್ಣೆ ಮೊದಲು ಕುಂ. ವೀರಭದ್ರಪ್ಪ ಕ್ರೈಸ್ತ, ಕಾಲೇಜು, ಕನ್ನಡ ಸಂಘ, ಬೆಂಗಳೂರು (೨೦೦೭) ಪುಟ ೧೦

೪ ಕೂಳೆ, ಕುಂ. ವೀರಭದ್ರಪ್ಪ, ಸುಮುಖ ಪ್ರಕಾಶನ, ಬೆಂಗಳೂರು, (೨೦೦೭)ಪುಟ. ೫೮

೫ ಕೂಳೆ, ಕುಂ. ವೀರಭದ್ರಪ್ಪ, ಬೆನ್ನುಡಿ

೬ ಕುಂವೀ ಅವರ ಆಯ್ದ ಕಥೆಗಳು, ಕುಂ. ವೀರಭದ್ರಪ್ಪ, ಸಂವಹನ ಪ್ರಕಾಶನ, ಮೈಸೂರು (೧೯೯೯) ಪುಟ ೨೨

೭ ... ಮಣ್ಣೆ ಮೊದಲು, ಕುಂ. ವೀರಭದ್ರಪ್ಪ, ಕ್ರೈಸ್ತ ಕಾಲೇಜು, ಕನ್ನಡ ಸಂಘ, ಬೆಂಗಳೂರು (೨೦೦೭) ಪುಟ ೭೯

೮ ... ಮಣ್ಣೆ ಮೊದಲು ಕುಂ. ವೀರಭದ್ರಪ್ಪ ಕ್ರೈಸ್ತ, ಕಾಲೇಜು, ಕನ್ನಡ ಸಂಘ, ಬೆಂಗಳೂರು (೨೦೦೭) ಪುಟ ೧೪೫

೯ ಆಯ್ದ ಕತೆಗಳು, ಕುಂ. ವೀರಭದ್ರಪ್ಪ, ಸಂಹವನ ಪ್ರಕಾಶನ, ಮೈಸೂರು (೧೯೯೯) ಪುಟ ೧೦೯

೧೦ ... ಮಣ್ಣೆ ಮೊದಲು ಕುಂ. ವೀರಭದ್ರಪ್ಪ ಕ್ರೈಸ್ತ, ಕಾಲೇಜು, ಕನ್ನಡ ಸಂಘ, ಬೆಂಗಳೂರು (೨೦೦೭) ಪುಟ ೦೯

೧೧ ಮಣ್ಣೇಮೊದಲು, ಕುಂ. ವೀರಭದ್ರಪ್ಪ, ಕ್ರೈಸ್ತ ಕಾಲೇಜು, ಕನ್ನಡ ಸಂಘ, ಬೆಂಗಳೂರು (೨೦೦೭) ಪುಯ ೬೨

೧೨ ... ಮಣ್ಣೆ ಮೊದಲು ಕುಂ. ವೀರಭದ್ರಪ್ಪ ಕ್ರೈಸ್ತ, ಕಾಲೇಜು, ಕನ್ನಡ ಸಂಘ, ಬೆಂಗಳೂರು (೨೦೦೭) ಪುಟ ೬೭

೧೩ ... ಮಣ್ಣೆ ಮೊದಲು ಕುಂ. ವೀರಭದ್ರಪ್ಪ ಕ್ರೈಸ್ತ, ಕಾಲೇಜು, ಕನ್ನಡ ಸಂಘ, ಬೆಂಗಳೂರು (೨೦೦೭) ಪುಟ ೬೮

೧೪ ... ಮಣ್ಣೆ ಮೊದಲು ಕುಂ. ವೀರಭದ್ರಪ್ಪ ಕ್ರೈಸ್ತ, ಕಾಲೇಜು, ಕನ್ನಡ ಸಂಘ, ಬೆಂಗಳೂರು (೨೦೦೭) ಪುಟ ೬೮

೧೫ ... ಮಣ್ಣೆ ಮೊದಲು ಕುಂ. ವೀರಭದ್ರಪ್ಪ ಕ್ರೈಸ್ತ, ಕಾಲೇಜು, ಕನ್ನಡ ಸಂಘ, ಬೆಂಗಳೂರು (೨೦೦೭) ಪುಟ ೧೩೯

೧೬ ... ಮಣ್ಣೆ ಮೊದಲು ಕುಂ. ವೀರಭದ್ರಪ್ಪ ಕ್ರೈಸ್ತ, ಕಾಲೇಜು, ಕನ್ನಡ ಸಂಘ, ಬೆಂಗಳೂರು (೨೦೦೭) ಪುಟ ೧೪೧

೧೭ ಆಯ್ದ ಕಥೆಗಳು; ಕುಂ. ವೀರಭದ್ರಪ್ಪ, ಸಂವಹನ ಪ್ರಕಾಶನ, ಮೈಸೂರು (೧೯೯೯) ಪುಟ ೧೧೭

೧೮ ಆಯ್ದ ಕಥೆಗಳು; ಕುಂ. ವೀರಭದ್ರಪ್ಪ, ಸಂವಹನ ಪ್ರಕಾಶನ, ಮೈಸೂರು (೧೯೯೯) ಪುಟ ೧೨೪

೧೯ ಕೂಳೆ; ಕುಂ. ವೀರಭದ್ರಪ್ಪ, ಸುಮುಖ ಪ್ರಕಾಶನ, ಬೆಂಗಳೂರು, (೨೦೦೭) ಪುಟ ೧೦೪

೨೦ ಕೂಳೆ; ಕುಂ. ವೀರಭದ್ರಪ್ಪ, ಸಂವಹನ ಪ್ರಕಾಶನ, ಬೆಂಗಳೂರು (೨೦೦೭) ಪು ೧೦೬

೨೧ ಬರೀಕಥೆಯಲ್ಲೋ ಅಣ್ಣಾ ಕುಂ ವೀರಭದ್ರಪ್ಪ (೨೦೦೪) ಪುಟ XVI

೨೨ ಆಯ್ದ ಕಥೆಗಳು ಕುಂ. ವೀರಭದ್ರಪ್ಪ, ಸಂವಹನ ಪ್ರಕಾಶನ, ಮೈಸೂರು (೧೯೯೯) ಬೆನ್ನುಡಿ.

೨೩ ... ಮಣ್ಣೆ ಮೊದಲು ಕುಂ. ವೀರಭದ್ರಪ್ಪ ಕ್ರೈಸ್ತ, ಕಾಲೇಜು, ಕನ್ನಡ ಸಂಘ, ಬೆಂಗಳೂರು (೨೦೦೭) ಪುಟ ೮೯

೨೪ ... ಮಣ್ಣೆ ಮೊದಲು ಕುಂ. ವೀರಭದ್ರಪ್ಪ ಕ್ರೈಸ್ತ, ಕಾಲೇಜು, ಕನ್ನಡ ಸಂಘ, ಬೆಂಗಳೂರು (೨೦೦೭) ಪುಟ ೬೫

೨೫ ... ಮಣ್ಣೆ ಮೊದಲು ಕುಂ. ವೀರಭದ್ರಪ್ಪ ಕ್ರೈಸ್ತ, ಕಾಲೇಜು, ಕನ್ನಡ ಸಂಘ, ಬೆಂಗಳೂರು (೨೦೦೭) ಪುಟ ೬೭

೨೬ ... ಮಣ್ಣೆ ಮೊದಲು ಕುಂ. ವೀರಭದ್ರಪ್ಪ ಕ್ರೈಸ್ತ, ಕಾಲೇಜು, ಕನ್ನಡ ಸಂಘ, ಬೆಂಗಳೂರು (೨೦೦೭) ಪುಟ ೫೧

೨೭. ಕುಂವೀ ಅವರ ಆಯ್ದ ಕಥೆಗಳು; ಕು. ವೀರಭದ್ರಪ್ಪ; ಸಂವಹನ ಪ್ರಕಾಶನ (೧೯೯೬) ಪುಟ ೨೨

೨೮. ಭಳಾರೆ ವಿಚಿತ್ರಂ; ಕು. ವೀರಭದ್ರಪ್ಪ; ಮನೋಹರ ಗ್ರಂಥಮಾಲೆ, ಧಾರವಾಡ (೨೦೦೨) ಪುಟ ೧೭

೨೯. ಕುಂವೀ ಅವರ ಆಯ್ದ ಕಥೆಗಳು; ಕುಂ. ವೀರಭದ್ರಪ್ಪ; ಸಂವಹನ ಪ್ರಕಾಶನ (೧೯೯೬) ಪುಟ ೯

೩೦. .... ಮಣ್ಣೇ ಮೊದಲು; ಕುಂ. ವೀರಭದ್ರಪ್ಪ ; ಕ್ರೈಸ್ತ ಕಾಲೇಜು, ಕನ್ನಡ ಸಂಘ, ಬೆಂಗಳೂರು (೨೦೦೭) ಪುಟ ೧೪೫

೩೧. .... ಮಣ್ಣೇ ಮೊದಲು; ಕುಂ. ವೀರಭದ್ರಪ್ಪ ; ಕ್ರೈಸ್ತ ಕಾಲೇಜು, ಕನ್ನಡ ಸಂಘ, ಬೆಂಗಳೂರು (೨೦೦೭) ಪುಟ ೬೨

೩೨. .... ಮಣ್ಣೇ ಮೊದಲು; ಕುಂ. ವೀರಭದ್ರಪ್ಪ ; ಕ್ರೈಸ್ತ ಕಾಲೇಜು, ಕನ್ನಡ ಸಂಘ, ಬೆಂಗಳೂರು (೨೦೦೭) ಪುಟ ೫೮

ಅಧ್ಯಾಯ 5

ಕುಂವೀ ಅವರ ಆಯ್ದ ಕಥೆಗಳ ಧ್ಯೇಯ ಧೋರಣೆಗಳು

ಪ್ರತಿಯೊಬ್ಬ ಸಾಹಿತಿಯೂ ಒಂದು ಕೃತಿಯ ರಚನೆಯ ಸಂದರ್ಭದಲ್ಲಿ ಎರಡು ಮುಖ್ಯ ಸಂಗತಿಗಳನ್ನು ನಿರ್ಧರಿಸಿಕೊಂಡಿರುತ್ತಾನೆ.

೧. ಕೃತಿಯ ವಸ್ತು,

೨. ಅದರ ಅಭಿವ್ಯಕ್ತಿ.

ಸಣ್ಣ ಕಥಾ ಸಾಹಿತ್ಯ ಪ್ರಕಾರದಲ್ಲಿ ಅಭಿವ್ಯಕ್ತಿ ವಿಧಾನ ಅತ್ಯಂತ ಮುಖ್ಯವಾದುದು. ಅಭಿವ್ಯಕ್ತಿ ವಿಧಾನವು ಕಥೆಗಳ ಭಾಷೆ ಮತ್ತು ತಂತ್ರಗಳನ್ನು ಒಳಗೊಂಡಿರುತ್ತದೆ. ಕಥಾ ವಸ್ತು ಬಹುತೇಕ ಸಂದರ್ಭಗಳಲ್ಲಿ ಕಥೆಯ ಭಾಗವನ್ನು ನಿರ್ಧರಿಸುತ್ತದೆ. ವಸ್ತು ಗಹನವು ಮಹತ್ವರವೂ, ಗಂಭೀರವೂ ಆಗಿದ್ದರೆ ಅದಕ್ಕೆ ಸೂಕ್ತವಾದ ಭಾಷೆಯಲ್ಲಿ ಅವು ಅಭಿವ್ಯಕ್ತಗೊಳ್ಳುತ್ತವೆ. ಕಥಾ ವಸ್ತು ಮತ್ತು ನಿರುಪಣಾ ಭಾಷೆಯ ನಡುವೆ ಹೊಂದಾಣಿಕೆಯ ಸಮಸ್ಯೆ ಏರ್ಪಟ್ಟು ಬಿರುಕು ಕಾಣಿಸಿಕೊಳ್ಳುತ್ತದೆ. ಹಾಗೆ ಕಥಾ ವಸ್ತು ಗಹನವಾದದು. ಗಂಭೀರವಾದದು ಆಗಿದ್ದು ಅದು ನಿರುಪಣೆಗೊಂಡಿರುವ ಭಾಷೆ ಸರಳವಾಗಿದ್ದರೆ ಅದು ಸಹಅಪಾಯ.

ಇಂತಹ ಸೂಕ್ಷ್ಮತೆಯ ಹಿನ್ನಲೆಯಲ್ಲಿ ಕೃತಿಯ ಶ್ರೇಷ್ಟತೆ ನಿರ್ಧಾರವಾಗುತ್ತದೆ. ಕಥಾ ಸಾಹಿತ್ಯವು ಇನ್ನುಳಿದ ಸಾಹಿತ್ಯ ಪ್ರಕಾರಗಳಿಂದ ಭಿನ್ನವಾದ ಬರಹವಾದುದರಿಂದ ಅದು ಗದ್ಯದ ಭಾಷೆಯನ್ನು

ಆಯ್ಕೆ ಮಾಡಿಕೊಂಡಿರುತ್ತದೆ. ಜೊತೆಗೆ ಕಥಾ ಸಾಹಿತ್ಯದ ಭಾಷೆ ಮಾತಿಗೆ ಹತ್ತಿರವಾಗಿರುತ್ತದೆ, ಹಾಗೆಂದ ಮಾತ್ರಕ್ಕೆ ಅದು ಯಥಾವತ್ತಾದ ಆಡುಮಾತಲ್ಲ. ಅದು ಅವಶ್ಯಕನುಗುಣವಾಗಿ ರೂಪಾಂತರಗೊಂಡ ಭಾಷೆ ಕೆಲವು ಕಥೆಗಳಲ್ಲಿ ಲೇಖಕರು ತಾವೂ ಹುಟ್ಟಿಬೆಳೆದ, ವಾಸಮಾಡುತ್ತಿರುವ ಪ್ರದೇಶಗಳ, ಪ್ರಾದೇಶಿಕ ಭಾಷೆಯನ್ನು ಬಳಸಿರುವುದನ್ನು ಗುರುತಿಸಬಹುದು. ಅದಕ್ಕೆ ಉತ್ತಮ ಉದಾಹರಣೆಗಳೆಂದರೆ, ದೇವನೂರು ಮಹಾದೇವ ಹಾಗೂ ಕುಂ. ವೀರಭದ್ರಪ್ಪನವರು.

ಅಭಿವ್ಯಕ್ತಿಯ ವಿಧಾನದಿಂದ ಸಣ್ಣ ಘಟನೆಗಳನ್ನು ಪರಿಣಾಮಕಾರಿಯಾಗಿ ಬಿಂಬಿಸಲು ಸಾಧ್ಯ ಅದು ಸಣ್ಣ ಕಥೆಗಳ ಲಕ್ಷಣವು ಆಗಿದೆ. ಕೆಲವೊಮ್ಮೆ ತಂತ್ರಗಳನ್ನು ಸರಿಯಾದ ರೀತಿಯಲ್ಲಿ ಗ್ರಹಿಸಿದಾಗಲೇ ಕಥೆಯ ಸಂಪೂರ್ಣ ಆಶಯವನ್ನು ತಿಳಿಸಕೊಳ್ಳಲು ಸಾಧ್ಯ ಅಭಿವ್ಯಕ್ತಿಗೆ ಸಂಬಂಧಿಸಿದಂತೆ ಪ್ರಮುಖವಾದ ಮತ್ತೊಂದು ಸಂಗತಿಯೆಂದರೆ, ಕಥೆಗಳ ಸಂರಚನೆಗೂ ಸಮಕಾಲೀನ ಸಮಾಜದ ಸಂರಚನೆಗೂ ನಡುವೆ ವ್ಯತ್ಯಾಸವಿರಬಾರದೆನಿಸುತ್ತದೆ. ಕಥೆಗಾರರಿಗೆ ಇರುವ ಸಾಮಾಜಿಕ ಆಸ್ತೆ ಅವರ ಅಭಿವ್ಯಕ್ತಿ ವಿಧಾನದಿಂದ ಗೋಚರಿಸುತ್ತದೆ.

ಅಭಿವ್ಯಕ್ತಿ ತಂತ್ರಗಳಲ್ಲಿ ಪ್ರತಿಮೆ, ಸಂಕೇತಗಳಂಥ ವಿಧಾನಗಳನ್ನು ಪ್ರಮುಖವಾಗಿ ಕಾಣಬಹುದು. ಇಷ್ಟೇ ಅಲ್ಲದೆ ಕಥೆಗಾರ ತನ್ನ ಕಥನದೊಂದಿಗೆ ಎರಡು ವಿಧವಾದ ಸಂಬಂಧಗಳನ್ನು ಇಟ್ಟುಕೊಳ್ಳಬಹುದು ಅದರ ವಿವರಣೆಯನ್ನು ಜಿ.ಎಸ್. ಅಮೂರ ರವರು ಈ ರೀತಿ ಹೇಳುತ್ತಾರೆ. ಕಥನಕಾರ ತನ್ನ ಕಥನದ ಹೊರಗೆ ನಿಂತು ಕತೆಯನ್ನು ಹೇಳಿದಾಗ ಅದು ಅನ್ಯ ಕಥನವಾಗುತ್ತದೆ. ಈ ಪ್ರಕಾರದಲ್ಲಿ ಕಥನಕಾರನಿಗೆ ಸರ್ವ ಸಾಕ್ಷಿತ್ವದ ಅಧಿಕಾರವಿರುತ್ತದೆ. ಇಂಥ ಕಥನಗಳಲ್ಲಿ ಕಥಾ ಕ್ಷೇತ್ರವು ಸೀಮಿತವಾಗಿರುತ್ತವೆ ಎಂಬುದು ಅಕ್ಷರಶಃ ಸತ್ಯವೆನಿಸುತ್ತದೆ. ಉದಾಹರಣೆಗೆ ಬಂಡಾಯ ಕಾಲದ ಕಥೆಗಳನ್ನು ನೋಡಬಹುದು.

ಭಾಷೆ ಎಂಬುದು ಸಾಮಾಜಿಕ ಉತ್ಪನ್ನವಾಗಿದ್ದು ಅದು ಸಮಾಜದ ಅನೇಕ ಗ್ರಹಿಕೆಗಳನ್ನು ಒಳಗೊಂಡಿರುತ್ತದೆ. ಅಂತಹ ಭಾಷೆ ನೇರವಾಗಿ ಸಾಹಿತ್ಯದಲ್ಲಿ ಬಳಕೆಗೊಳ್ಳದೆ. ರೂಪಾಂತರವಾಗಿ ಬಳಕೆಗೊಳ್ಳುತ್ತದೆ. ಇಡೀ ಭಾಷೆಯು ಕಲಾತ್ಮಕ ಎನಿಸುತ್ತದೆ. ಒಂದು ಕಥೆಯಲ್ಲಿ ಬಳಕೆಯಾಗಿರುವ ಭಾಷೆ ಕಲಾತ್ಮಕವಾಗಿ ಬಳಸಲ್ಪಟ್ಟಿದ್ದರೆ ಅದು ಶ್ರೇಷ್ಠವಾಗಿದೆ ಎಂದು ತೋರುತ್ತಿದ್ದರೂ ಸಹ ಶ್ರೇಷ್ಠವೆಂದು ಪರಿಗಣಿಸಲೇ ಬೇಕಾಗಿಲ್ಲ. ಆ ಕಲಾತ್ಮಕತೆ ಭಾಷೆಯ ಒಳಗೆ ಇರಬೇಕಾಗುತ್ತದೆ. ಕೆಲವೊಮ್ಮೆ ಕವಿತೆಗಳು ಕಲಾತ್ಮಕ ಸೋಗಿನಲ್ಲಿ ಬಹುಜನ ವಿರೋಧಿ ನಿಲುವನ್ನು ತಾಳುತ್ತವೆ. ಇಂತಹ ಕಾರಣದಿಂದಲೆ ಕುವೆಂಪುವಿನಂತಹ ಮಹತ್ವದ ಕವಿಗಳು ಅನೇಕ ಕವನಗಳಲ್ಲಿ ಪ್ರತಿಭಟನೆಯ ರೂಪವನ್ನು ತೀರಾ ಸರಳವಾಗಿ ಬರೆದರು.

ಅಭಿವ್ಯಕ್ತಿ ಕಲಾತ್ಮಕವಾಗಿರಬೇಕು ಎಂಬುದು ಎಲ್ಲಾ ಲೇಖಕರ ಅಭಿಮತವಾಗಿರುತ್ತದೆ. ಅದನ್ನು ಈ ಹಿಂದೆಯೇ ನೋಡಿದ್ದೇವೆ. ಅಂದರೆ ಕೃತಿಯ ವಸ್ತು ಕೃತಿಕಾರನ ನಿಲುವನ್ನು ಪ್ರಕಟಿಸುತ್ತದೆ. ಕೃತಿಕಾರ ತನ್ನ ನಿಲುವನ್ನು ಪ್ರಕಟಿಸಲು ತಾನೇ ಅದಕ್ಕೆ ಅನುಗುಣವಾದ ವಸ್ತುವನ್ನು ಆಯ್ದುಕೊಳ್ಳುತ್ತಾನೆ. ಪ್ರಚಲಿತ ವಿದ್ಯಾಮಾನದ ಯಾವುದೋ ಸಂಗತಿ ಅದನ್ನು ಬಾಧಿಸುತ್ತದೆ. ಅದನ್ನು ನೋಡಿ ಅದರ ಬಗ್ಗೆ ತನ್ನದೇ ಆದ ಅಭಿಪ್ರಾಯಕ್ಕೆ ಲೇಖಕ ಬರುತ್ತಾನೆ.

ಅನಂತರ ಅದರ ಅಭಿವ್ಯಕ್ತಿಗೆ ಒಂದು ವಸ್ತುವನ್ನು ಆಯ್ದುಕೊಂಡು ಅದನ್ನು ಕಲಾತ್ಮಕಗೊಳಿಸುತ್ತಾನೆ. ಇಲ್ಲಿ ಗಮನಿಸಬೇಕಾದದ್ದು ವಸ್ತು ಯಾವುದು ಎಂಬುದು. ವಸ್ತುವಿನಲ್ಲಿ ಎರಡು ಅಂಶಗಳಿರುತ್ತವೆ. ಒಂದು ವಾಸ್ತವವಾದಕ್ಕೆ ಸಂಬಂಧಿಸಿದ್ದು, ಇನ್ನೊಂದು ಕಲ್ಪನೆಗೆ ಸಂಬಂಧಿಸಿದ್ದು, ವಾಸ್ತವಿಕತೆ, ಧೋರಣೆಯಾಗಬಹುದೇ ಹೊರತು, ಧೋರಣೆ ವಾಸ್ತವವಾಗಲಾರದು ಎಂಬ ರಾಗೌ ಅವರ ಮಾತು ಸರಿಯಾದದ್ದು.

ಆದರೆ ಯಾವುದು ವಾಸ್ತವ? ಸಮಾಜದಲ್ಲಿ ಮೇಲ್ನೋಟಕ್ಕೆ ಕಾಣುವ ಸಂಗತಿಗಳೇ? ಅಥವಾ ಇಂತಹ ಪ್ರಚಲಿತ ಸಂಗತಿಗಳ ವಾಸ್ತವದ ಹಿಂದೆ ಇದ್ದಿರುವ ಚಾರಿತ್ರಿಕ ಸಂಗತಿಗಳೇ ಇವು ಇಂದು ವಿಮರ್ಶೆ ಮಾಡುವಾಗ ಕೇಳಿಕೊಳ್ಳಬೇಕಾದ ಮುಖ್ಯ ಪ್ರಶ್ನೆಗಳು. ಕೃತಿಯಲ್ಲಿ ಯಾರ ಪರವಾಗಿ ಕೃತಿಕಾರ ಮಾತನಾಡುತ್ತಾರೆ ಎಂಬುದು ಮುಖ್ಯ. ಇದೇ ಒಂದು ಕೃತಿಯ ಲೇಖಕರ ಧೋರಣೆ. ಹಲವೊಮ್ಮೆ ಭಾಷೆಯ ಕಲಾತ್ಮಕತೆಯಲ್ಲಿ ಬಹುಸಂಖ್ಯೆ ವಿರೋಧಿ ನಿಲುವು ಸುಂದರ ಮೈರೂಪ ತಾಳಿ ವಂಚಿಸಿ ಬಿಡುವುದು.

ಆದುದರಿಂದ ಲೇಖಕನನೊಬ್ಬ ಬದುಕಿನ ಬಗ್ಗೆ ಗಂಭೀರ ಕಾಳಜಿಯನ್ನು ಒಳಗೊಂಡ ಒಂದು ಧೋರಣೆಯನ್ನು ರೂಪಿಸಿಕೊಂಡಿರುತ್ತಾನೆ. ಅಥವಾ ಅನುಭವ, ಅಧ್ಯಯನಗಳಿಂದ ರೂಪಿಸಿಕೊಂಡ ಧೋರಣೆಯ ಮುಖಾಂತರ ಬದುಕನ್ನು ಅಳೆಯುತ್ತಾನೆ. ಹೀಗಾಗಿ ಸಾಹಿತ್ಯದ ರಚನೆಯಲ್ಲಿ ಧೋರಣೆ ಅದರ ಅವಿಭಾಜ್ಯ ಅಂಗವಾಗಿರುತ್ತದೆ. ಅದರ ಜತೆಗೆ ಲೇಖಕ ಒಂದು ವರ್ಗದ ಆಶಯವನ್ನು ಪ್ರತಿನಿಧಿಸುತ್ತಾನೆ. ಆ ವರ್ಗ ಯಾವುದು ಎನ್ನುವುದೇ ಮುಖ್ಯ.

ಓ.ಎಲ್. ನಾಗಭೂಷಣಸ್ವಾಮಿ ಅವರು ಕುಂ.ವೀ. ಕಥೆಗಳ ಮುಖ್ಯ ಲಕ್ಷಣಗಳನ್ನು ಹೀಗೆ ವಿವರಿಸುತ್ತಾರೆ*.

ಕುಂವೀ ಕಥೆಗಳು ಕೇಳಿಸುವ ಕಥೆಗಳು ಕುವೆಂಪು ಅವರ ಕಾದಂಬರಿ ಪಾತ್ರಗಳಲ್ಲಿ ಮಲೆನಾಡಿನ, ದೇವನೂರ ಮಹಾದೇವ ಅವರ ಕಥೆಗಳಲ್ಲಿ ನಂಜನಗೂಡು, ಚಾಮರಾಜನಗರ, ಪ್ರದೇಶದ ಬನಿಯಾದ ಕನ್ನಡಗಳು ಕೇಳಿಸುವಂತೆಯೇ ಕುಂವೀ ಕಥೆಗಳಲ್ಲಿ ಕೂಡ್ಲಿಗಿ, ಕೊಟ್ಟೂರು ಪ್ರದೇಶದ ಕನ್ನಡ ಕೇಳಿಸುತ್ತದೆ. ಈ ಕನ್ನಡಗಳ ಹಿಂದೆ ನಾವು ಯಾವುದನ್ನು ಸಾಹಿತ್ಯ ಪರಂಪರೆ ಎನ್ನುತ್ತೇವೋ ಅದರ ಶಕ್ತಿಯೂ ಇರುತ್ತದೆ. ಇಂಥ ಹಿರಿಯ ಕಲಾವಿದರ ಕೃತಿಗಳನ್ನು ಸವಿಯುವುದಕ್ಕೆ ಓದುಗರು ಕೇವಲ ಅಕ್ಷರ ಓದುಗರಷ್ಟೇ ಸಾಲದು.

ಬಗೆಬಗೆಯ ಕನ್ನಡಗಳ ಧ್ವನಿಯನ್ನು ಕಲ್ಪನೆಯ ಮುಖಾಂತರವಾದರೂ ಕೇಳಿಸಿಕೊಳ್ಳುವಷ್ಟು ಕೇಳಿಸಿಕೊಳ್ಳುತ್ತಾ ಹಾಗೆ ಮಾತನಾಡುವ ಪಾತ್ರಗಳ ಅಂಗಭಂಗಿಗಳನ್ನು ಊಹಿಸಿಕೊಳ್ಳುವಷ್ಟು ಶಕ್ತದಾಗಿರಬೇಕಾಗುತ್ತದೆ. ಕನ್ನಡದ ಅತ್ಯುತ್ತಮ ಸಾಹಿತ್ಯ ಕೃತಿಗಳು ಸಶಕ್ತ ಸದೃಢ ಮನೋಧರ್ಮದ ಓದುಗರನ್ನು ಬಯಸುತ್ತವೆ.

ಕುಂವೀ ಕಥೆಗಾರಿಗೆಯ ಇನ್ನೊಂದು ಲಕ್ಷಣವೆಂದರೆ ಉತ್ಸಾಹಪೂರ್ವಕ ಪ್ರದರ್ಶಕ ಗುಣ. ಹಾಗಾಗಿ ಅವರ ಭಾಷೆ ತೀರ ಸಹಜವೆಂಬಂತೆ ಉತ್ಪ್ರೇಕ್ಷೆಯನ್ನೇ ಸ್ವಭಾವೋಕ್ತಿ ಎಂಬಂತೆ ಬಳಸುವುದರತ್ತ ಒಲಿಯುತ್ತವೆ. ಕಥೆಯ ವಾಕ್ಯವೊಂದರ ನಾಮಪದ ಮತ್ತು ಕ್ರಿಯಾಪದಗಳ ನಡುವೆ ಪುಂಖಾನುಪುಂಖವಾಗಿ ಬರುವ ವಿಶೇಷಣಗಳು ಪಾತ್ರಗಳನ್ನು, ಮನಸ್ಥಿತಿಗಳನ್ನು, ಲೇಖಕರ ಧೋರಣೆಗಳನ್ನು ಡಾಳಾಗಿ ಪ್ರದರ್ಶಿಸುತ್ತದೆ. ಇದು ಕುಂವೀ ಅವರ ಶಕ್ತಿಯಾಗಿರುವಂತೆಯೇ ಕೆಲವು ಕಡೆಗಳಲ್ಲಿ ಅವರ ದೌರ್ಬಲ್ಯವೂ ಆದೀತು.

'ಕುಬುಸ' ಕಥೆಯಲ್ಲಿ ಆಧುನಿಕತೆಯನ್ನೇ ಕಾಣದಿರುವ ಹಳ್ಳಿಯೊಂದರ ಚಿತ್ರಣವನ್ನು ಚಿತ್ರಿಸುವ ರೀತಿಯಲ್ಲೇ, ಗ್ರಾಮ ಭಾರತದ ಬದಲಾಗದೆ ಇರುವ ಸಂಗತಿ, ಬದಲಾಗಬೇಕಾಗಿರುವ ಅಗತ್ಯ ಏನೆಂಬುದನ್ನು ಸೂಚಿಸುತ್ತಾರೆ. ಈ ಕಥೆಯ ಆರಂಭದ ನಿರೂಪಣಾ ವಿಧಾನವೇ ಅತ್ಯಂತ ಮನೋಜ್ಞವಾಗಿದೆ.

"ಪೂರ್ವದ ಸಿಂಧವಾಡಿ ಪ್ರಾಂತದಿಂದ ಪಶ್ಚಿಮದ ಕುಂತಳ ನಾಡನ್ನು ಬೇರ್ಪಡಿಸುವ ನದಿಯೊಂದರ ಅವಶೇಷವನ್ನು ಈಗಲೂ ನಮ್ಮ ಜಿಲ್ಲೆಯ ನೈರುತ್ಯ ದಿಕ್ಕಿನಲ್ಲಿ ಕಾಣಬಹುದು. ಯಾವ ಕಲ್ಲು ಎತ್ತಿದರೂ ಒಂದಾದರು ಚೇಳು ಗೋಚರಿಸುವ ಚೇಳುಗುಡ್ಡವೂ ಯಾವುದಾದರೂ ಪೊದೆ ಕಲಕಿದರೆ ಒಂದಾದರು ಬಳವಡಕನಂತ ಹಾವು ಗೋಚರಿಸುವ ಹಾವು ಗುಡ್ಡವೂ ನತದೃಷ್ಟ ನದಿಯ ಎಡಬಲ ಮಗ್ಗುಲಲ್ಲಿವೆ.

ಈ ಎರಡು ಗುಡ್ಡಗಳ ತಪ್ಪಲಲ್ಲಿರುವ ಏಕೈಕ ಗ್ರಾಮವಾದ ವಡ್ಡಟ್ಟಿಯು ಸ್ವಾತಂತ್ರ್ಯೋತ್ತರ ಭಾರತದಲ್ಲಿ ಶಿಲಾಯುಗ ಕಾಲದ ಎಲ್ಲ ಲಕ್ಷಣ ಸ್ವಭಾವಗಳನ್ನು ಉಳಿಸಿಕೊಂಡು ಬಂದಿದೆ. ಚೇಳುಗಳು, ಹಾವುಗಳು ನಾಗರಿಕತೆಯ ನೆರಳು ಆ ಗ್ರಾಮದ ಮೇಲೆ ಬೀಳಿದ ಹಾಗೆ ನೋಡಿಕೊಳ್ಳುತ್ತಿರುವವು. ಕೇಂದ್ರ ಸರ್ಕಾರದವರು ಹಾವಿನಗುಡ್ಡ ಅಷ್ಟು ದೂರ ಇದೆ ಅನ್ನುತ್ತಿರಲಿಕ್ಕೆ ವಾಪಸ್ಸಾದರೆ, ರಾಜ್ಯ ಸರ್ಕಾರದವರು ಚೇಳುಗುಡ್ಡ ಅಷ್ಟು ದೂರ ಇದೆ ಅನ್ನುತ್ತಿರಲಿಕ್ಕೆ ವಾಪಸ್ಸಾಗುತ್ತಿರುವರಾದ್ದರಿಂದ ವಡ್ಡಟ್ಟಿ ಎಂಬ ಗ್ರಾಮವು ರಾಜಕೀಯ ನಕ್ಷೆಯಲ್ಲಿ ಜಾಗಪಡೆದಿಲ್ಲ”[೭].

ಆ ಹಳ್ಳಿ ಮೌಢ್ಯದ ಪರಮಾವಧಿ ವೈಚಾರಿಕತೆಯ ಯಾವ ಹಿನ್ನಲೆಯೂ ಇಲ್ಲದೆ ಬಳಲುವ ಈ ಪರಿಯನ್ನು ಗುರುತಿಸುವ ಕುಂವೀ ಅವರ ಭಾಷೆ ಮತ್ತು ತಂತ್ರ ಅತ್ಯಂತ ಮನೋಜ್ಞವಾಗಿದೆ. ಜತೆಗೆ ತಮಗೆ ಬರಬೇಕಾದ ಸೌಲಭ್ಯಗಳನ್ನು ಕೇಳುವ ಗೋಜಿಗೆ ಹೋಗದೆ ಜಾಗೃತ ಪ್ರಭಾವವೇ ಇಲ್ಲದೆ ನರಳುವ ಚಿತ್ರಣ ಆಶ್ಚರ್ಯ ಹುಟ್ಟಿಸುತ್ತದೆ ಆ ಗ್ರಾಮವಾಗಲೀ, ಆ ಗ್ರಾಮದ ಮಂದಿಯಾಗಲೀ ಭೂತಕಾಲದ “ಉಕ್ಕಿನ ತೆರೆ ಸೀಳಿಕೊಂಡು ವರ್ತಮಾನದ ಜಗಜಗಿಸುವ ರಂಗಭೂಮಿಯತ್ತ ಇಣುಕಿದವರಲ್ಲ” ಈ ಕಥೆಯ ನಾಯಕಿಯ ಹೆಸರೆ ತುಂಬ ಅರ್ಥಪೂರ್ಣವಾದದ್ದು. ಆಕೆಯ ಹೆಸರು ‘ಬಂಡೆವಜ್ಜಿ’ ಬಂಡೆಯನ್ನು ಸೂಚಿಸುವ ಆಕೆಯ ಸ್ವಭಾವದಲ್ಲಿ ಕುಂವೀ ಕಥೆಯಲ್ಲಿ ಎಲ್ಲಿಯೂ ಬದಲಾವಣೆಯನ್ನು ಸ್ವೀಕರಿಸದೆ ಇರುವ ಕ್ರಮವನ್ನು ಗಮನಿಸಬಹುದು.

ಕುಂವೀ ಅವರ ಅತ್ಯಂತ ಪ್ರಸಿದ್ಧವಾದ ಕಥೆ ‘ದೇವರ ಹೆಣ’ ಈ ಕಥೆಯ ಭಾಷೆ ಮತ್ತು ತಂತ್ರ ತುಂಬಾ ಶಕ್ತಿಯುತವಾದುದು. ಏಕಕಾಲಕ್ಕೆ ಶೋಷಿತರ ಹಸಿವು, ದೇವರ ಬಗೆಗಿನ ವ್ಯಂಗ್ಯ ಹಾಗೂ ವ್ಯವಸ್ಥೆಯ ಬಗ್ಗೆ ಆಕ್ರೋಶ ಎಲ್ಲವನ್ನು ವೈನೋದಿಕ ರೀತಿಯಲ್ಲಿ ಅಭಿವ್ಯಕ್ತಿಸುವ ಕ್ರಮ ಸೊಗಸಾದುದು. ಈ ಕಥೆಯಲ್ಲಿ ಹಸಿವಿನ ಚಿತ್ರಣವನ್ನು ಈ ರೀತಿ ಚಿತ್ರಿಸಿರುವುದನ್ನು ನೋಡಬಹುದು.

“ಇದಕ್ಕು ಮೊದಲು ಒಂದಿನ ಡೊಣ್ಣೆ ಅನ್ನ ಎಂಬ ಶಬ್ದ ಕಿವಿಗೆ ಬೀಳುತ್ತಲೇ ಹ್ಹಹ್ಹ ಅಂತ ನಕ್ಕು ಬಿಟ್ಟಿದ್ದನು. ತಿಂದ ಕೂಳು ಮೈಗೆ ಅತ್ತದಂತೆ ಒಂದೇ ಸಮ್ನೆ ಕಡೀತವೆ ಆಳಾದೋವು ಎಂದು ಅವನು ಪಂಚಮವೇದ ನುಡಿಯುತ್ತಿರುವುದು. ಬೇರೆ ಕೇಳಿಸಿತು ಮತ್ತಲ್ಲಿಯೇ ಅಪಾರಿ ತಿಮ್ಮಿಕುಲ್ಡಿ ಊಟ ಮಾಡುವ ಆಟ ಆಡುತ್ತಿದ್ದುದು ಕಣ್ಣಿಗೆ ಬಿತ್ತು. ಆ ಆಟದಲ್ಲಿ ತಿಮ್ಮಿ ನವಣಕ್ಕಿ ಬಾನದ ಪಾಲ್ಟು ಮಾಡಿದ್ದಳು. ಕುಲ್ಡಿ ಘಮಾಡಿಸುವ ಸಾರಿನ ಪಾಲ್ಟು ಮಾಡಿದ್ದಳು.

ಅವೆರಡನ್ನು ಹಿತವಾಗಿ ಕಲೆಸಿ ಉಂಡಂತೆ, ತೇಗಿದಂತೆ ಮತ್ತೆ ಮತ್ತೆ ನಟಿಸಿದ ಅಪಾರಿಯ ತಲೆಸವರಿ ಅಡುಗೆ ಮನೆ ಪ್ರವೇಶಿಸಿದ”[೩] ಹಸಿವು ದಾರಿದ್ರ್ಯವನ್ನು ಇದಕ್ಕಿಂತ ವಿಡಂಬಿಸಲು ಅಸಾಧ್ಯ. ಅನ್ನವೇ ಕೆಳವರ್ಗದ ಜನರಿಗೆ ಕಲ್ಪನೆಯ ಕೈಗೆಟುಕದ ಆಟದಲ್ಲಿಯೇ ಅಥವಾ ಭ್ರಮೆಯಲ್ಲಿಯೇ ತಣಿಸಿಕೊಳ್ಳುವ ರೀತಿಯನ್ನು ಮನಕುಲುವ ಭಾಷೆಯಲ್ಲಿ ಹೇಳುತ್ತಾರೆ ಕುಂವೀ.

ಕರಗಲ್ಲು ನೆತ್ತಿ ಮೇಲಿತ್ತು ಹುಚ್ಚೆಳ್ಳಿ ಎಣ್ಣೆ, ಅದನ್ನು ಅಯ್ನೋರ ನಾಯಿ ನೆಕ್ಕುತ್ತಿದ್ದಿತು. ಕರಗಲ್ಲು ಬೇರೆ ಅಲ್ಲ, ಪರಮೇಶ್ವರನ ನೆತ್ತಿ ಬೇರೆ ಅಲ್ಲ ಎಂದು ತಿಳಿದವನಾದ ಡೊಣ್ಣೆಗೆ ಸಿಟ್ಟು ಬಂತು. “ಮುದುಕನ ಕಟ್ಟೆಯಲ್ಲಿ ಎತ್ತು ಕೊಯ್ಯುವಾಗ ಜೊಲ್ಲು ಸುರಿಸುತ್ತ ಅದು ಬಂದಾಗ ತಾನು ತಪ್ಪದೆ ಕಲ್ಲಿನಿಂದ ಅದರ ಕಾಲು ಮುರಿದು ಕುಂಟುತ್ತ ಹೋಗುವುದನ್ನು ನೋಡಿ ನಗಬೇಕೆಂದು ನಿಶ್ಚಯಿಸಿದನು”[೪].

ವ್ಯವಸ್ಥೆಯ ಬಗ್ಗೆ ಲೇಖಕರು ಪ್ರಕಟಿಸುವ ಆಕ್ರೋಶ ಓದುಗರನ್ನು ತೀರಭಾವುಕತೆಗೆ ಒಳಗಾಗದಿರುವ ಹಾಗೆ ಎಚ್ಚರ ವಹಿಸುತ್ತದೆ. ಹಸಿವಿನ ತೀವ್ರತೆಯನ್ನು ಇನ್ನೊಂದು ಬಗೆಯಿಂದಲೂ ನೋಡುವ ಸಾಧ್ಯತೆಯನ್ನು ತೆರೆದು ತೋರಿಸುತ್ತದೆ. ಎತ್ತಿನ ಹೆಣ ಮಾರಲು ಗೌಡ ನಿರಾಕರಿಸಿದಾಗ ತನ್ನ ಅಸಹಾಯಕತೆಯನ್ನು ಹೊರಹಾಕಲು ಗೌಡನು ಎದುರು ಧೈರ್ಯದಿಂದ ನಿಲ್ಲಲು ಹೆಂಡದ ಮುತ್ತಿನ ಮೊರೆ ಹೋಗುತ್ತಾನೆ. ಅಸ್ಪೃಶ್ಯರ ಮುತ್ತಿನಲ್ಲಿ ಮಾತ್ರ ಪ್ರಜ್ಞಾವಂತರಾಗುವ ವ್ಯಂಗ್ಯ, ಆಗ ಮಾತ್ರ

ಅವರಲ್ಲಿ ವ್ಯವಸ್ಥೆಯ ಬಗ್ಗೆ ಆಕ್ರೋಶ ವ್ಯಕ್ತವಾಗುವ ವಾಸ್ತವ, ಗೌಡಾಗಿದ್ರೆ ಅವ್ನೇ ಮನಿಗಾಗಿದ್ದನು.... "ಏಯ್ ಗೌಡ... ಬುಟ್ ಬುಡು ಅಂದ್ರೆ ಬುಟ್ ಬುಡು... ಬದುಕಿರೋವರ್ಗೂ ನಿಮ್ದು.... ಸತ್‌ಮ್ಯಾಕ್ ನಮ್ದು..."[೫]

ಸತ್ತ ಎತ್ತಿನ ಸಮಾಧಿಯನ್ನು ಕಿತ್ತ ತಪ್ಪಿಗೆ ಡೊಣ್ಣಿಯನ್ನು ಬೆದರಿಸಲು ಗೌಡ ಕರೆತಂದ ಪೋಲೀಸರನ್ನು ನೋಡಿ ಕಾರಾಗೃಹದಲ್ಲಾದರೂ ಒಂದು ಹೊತ್ತು ಊಟ ಸಿಗಬಹುದೆಂದು ಭಾವಿಸುವ ಆತನ ಸಾಮಾನ್ಯ ತಿಳುವಳಿಕೆಯ ಹಿಂದೆ ಅಸಮಾನ್ಯ ಹಸಿವಿನ ಆಕ್ರಂದನವಿದೆ.

ಈ ಸನ್ನಿವೇಶವನ್ನು ಮನಕಲಕುವಂತೆ ಹೇಳಬಹುದು. ಆಗ ಓದುಗ ಯಾವುದೇ ಒಂದು ಪಕ್ಷ ವಹಿಸಿಬಿಡುವ ಸಾಧ್ಯತೆ ಇರುತ್ತದೆ. ಹಾಗಾಗದಂತೆ ಕಥೆಗಾರ ನಿರ್ವಹಿಸಿರುವುದು ಅವರ ತಂತ್ರಗಾರಿಕೆಯೇ ಆಗಿದೆ.

'ಶುಲ್ಕ' ಕಥೆಯಲ್ಲಿ ವರ್ಗ ಸಂಘರ್ಷದ ಒಂದು ರೂಪವಾದ ನಕ್ಸಲಿಸಂ ಅನ್ನು ತುಂಬಾ ಎಚ್ಚರಿಕೆಯಿಂದ ಚಿತ್ರಿಸುತ್ತಾರೆ. ಈ ಕಥೆಯ ಆರಂಭವನ್ನು ಗಮನಿಸಿದರೆ ಕೆಲವು ಸೂಕ್ಷ್ಮ ಸಂಗತಿಗಳು ಹೊಳೆಯುತ್ತದೆ. ಕಥೆಯ ಆರಂಭದಲ್ಲಿ ನಿರೂಪಕ ರಜೆಯ ಕಾರಣ ಮನೆಯಲ್ಲಿದ್ದಾನೆ.

ಅದು ಆತನ ಹೆಂಡತಿಗೆ ತುಂಬಾ ಸಂತೋಷದ ಸಂಗತಿ. ಹೊರಗೆ ಧಾರಾಕಾರವಾಗಿ ಮಳೆ ಬರುತ್ತಿದ್ದರೂ ಒಳಗೆ ವಿದ್ಯುದ್ದೀಪ ನಂದಿದರೂ, ಆ ಇಡೀ ಮನೆಯಲ್ಲಿನ ಮನಸ್ಸುಗಳ ಲವಲವಿಕೆ ಬದುಕಿನಲ್ಲಿರುವ ಸಂತೋಷದ ಅನಂತಕ್ಷಣಗಳನ್ನು ಧ್ವನಿಸುತ್ತದೆ. ಈ ಕಥೆಯಲ್ಲಿನ ನಕ್ಸಲೈಟ್ ಹುಡುಗ ಅಶೋಕನ ಮನೆಯಲ್ಲಿ ಇಂಥದೇ ವ್ಯವಸ್ಥೆ ಇರುತ್ತದೆ ಅಶೋಕನನ್ನು ಕಾಲೇಜಿಗೆ ಸೇರಿಸಲು ಅವನ ಮನೆಯವರು ನಿರಾಕರಿಸಿದಾಗ ನಿರೂಪಕ ಅಪ್ಪಾದಾಯಿ ಶಿವರಾಮರಾಯರ ಮನೆಯ ಚಿತ್ರಣವನ್ನು ನೀಡುವಾಗ ಅಲ್ಲಿನ ವ್ಯವಸ್ಥೆ, ಆಚಾರ, ಸಂಪ್ರದಾಯ ಎಲ್ಲವನ್ನೂ ತೆರೆದುತೋರಿಸುತ್ತಾರೆ.

ಅಶೋಕನ ಕಾಲೇಜು ಫೀಸಿಗಾಗಿ ತಮ್ಮ ಚಿಕ್ಕ ಉಂಗುರವನ್ನೇ ಮಾರುವ ನಿರೂಪಕ, ಅವನು ನಕ್ಸಲೈಟ್ ಆಗಿ ಬಂದಾಗ ಸಂತೋಷದಿಂದಲೇ ಸ್ವಾಗತಿಸುತ್ತಾರೆ; ಉಪಚರಿಸುತ್ತಾರೆ. ಅಶೋಕನಿಗೆ ತನ್ನ ಗುರುಗಳ ಮಾನವೀಯ ಸಹಾಯಕ್ಕಿಂತ ಸಮಾಜದ ವರ್ಗ ವ್ಯವಸ್ಥೆ ಅವನನ್ನು ನಡೆಸಿಕೊಂಡ ಕ್ರೂರತೆ ಪರಿಣಾಮ ಬೀರುತ್ತದೆ. ಹಿಂಸೆಯಿಂದಲೇ ಸಮಾಜ ಪರಿವರ್ತಿಸುವ ಪಣ ತೊಡುವ ಯುವಕರ ಪ್ರತಿನಿಧಿ ಅಶೋಕ. ಓದಲು ಪ್ರೇರೇಪಿಸಿದ ಹುಡುಗನೇ ಸಂಘಟನೆಗೋಸ್ಕರ ತಮ್ಮಲ್ಲಿ ಹಣಕ್ಕಾಗಿ ಬಲವಂತಪಡಿಸುವುದು ನಿರೂಪಕರಲ್ಲಿ ಖೇದ ಉಂಟು ಮಾಡುತ್ತದೆ. ಎಲ್ಲೋ ಒಂದು ಕಡೆ ಎಚ್ಚರ ತಪ್ಪುತ್ತಿರುವ ನಕ್ಸಲೈಟ್ ಅನ್ನು ಇಲ್ಲಿ ಗುರುತಿಸುತ್ತಾರೆ.

ಆದಾಗ್ಯೂ ಕಥೆಯ ಶೀರ್ಷಿಕೆ ಹತ್ಯೆಯಲ್ಲಿ ಲೇಖಕರ ಧೋರಣೆ ಗುರುತಿಸುವ ಪ್ರಯತ್ನ ಮಾಡಬಹುದು. ಕಥೆಯ ಶೀರ್ಷಿಕೆ ಸೂಚಿಸುವ ಆಶಯ ಅಂತಹ ಸಮಾಜಮುಖಿಯಾದುದೇನೂ ಅಲ್ಲ ಕುಂವೀ ಕಥೆಗಳ ಆಯ್ದು ಶೋಷಿತರ ಪರವಾಗಿ ಮಿಡಿಯುತ್ತದೆ ನಿಜ.

ಆದರೆ ಜಮೀನ್ದಾರರಿಂದ ನಿರಂತರ ಶೋಷಣೆಗೆ ಒಳಗಾದ ಕೆಳವರ್ಗದವರ ಪರವಾಗಿ ಸಂಘಟನೆಯಾದ ನಕ್ಸಲೈಸಂ ಬಲವರ್ಧನೆಗೆ ನಿರೂಪಕ ಕೊಡುವ ಹಣ ತೆರಿಗೆ ಹೇಗಾಗುತ್ತದೆ? ತಾವು ಸೌಲಭ್ಯ ಪಡೆದುದ್ದಕ್ಕೆ ತೆರಿಗೆ ಪಾವತಿಸುತ್ತೇವೆ. ಆದರೆ ಕಥೆಯಲ್ಲಿ ತಾನು ಸ್ವತಃ ಓದಿಸಿ ಬೆಳೆಸಿದ ಹುಡುಗನಿಗೇ ತೆರಿಗೆ ಕಟ್ಟಬೇಕಾದ ವ್ಯಂಗ್ಯ ಎದ್ದು ಕಾಣುತ್ತದೆ.

'ಭಗವತಿ ಕಾಡು' ಕಥೆಯಲ್ಲಿ ಕಥೆಗಾರ ಒಂದು ಶಕ್ತಿ ಗ್ರಾಮ ಭಾರತದ ಸ್ತ್ರೀ ಸಮುದಾಯದ ಪ್ರತಿನಿಧಿತ್ವವನ್ನು ಅನಾವರಣಗೊಳಿಸುವ ಕೆಲಸ ಮಾಡುತ್ತಾರೆ. ಸಹಜವಾಗಿ ಮನುಷ್ಯನಲ್ಲಿರಬಹುದಾದ ಈರ್ಷೆ, ಕೋಪ, ಹೊಟ್ಟೆ ಕಿಚ್ಚು ಎಲ್ಲವನ್ನು ಯಾವ ಎಗ್ಗೂ ಸಿಗ್ಗು ಇಲ್ಲದೆ ಪಾರದರ್ಶಕವಾಗಿ ತೋರಿಸುತ್ತಾರೆ. ಬಹುಶಃ ಗ್ರಾಮವೊಂದು ಇನ್ನು ಸ್ವಸ್ಥವಾಗಿರಲು ಇಂಥ ಪಾರದರ್ಶಕ ಮನಸ್ಥಿತಿಯೇ ಕಾರಣವಿರಬಹುದು.

ಕಥೆಯಲ್ಲಿ ಸವುಡವ್ವ ಮತ್ತು ನಾಗವ್ವರ ನಡುವೆ ನಡೆಯುವ ಜಗಳ ಇಡೀ ಭಾರತೀಯ ಪಾರಂಪರಿಕ ಅತ್ತೆ ಸೊಸೆಯ ಜಗಳದಂತೆ ಕಂಡರೂ ಅದು ನಾಗರೀಕ ಪ್ರಪಂಚಕ್ಕಿಂತ ಭಿನ್ನ "ಹೆತ್ತಾಕೆ ಶಬ್ಬಾಷ್ ಎನ್ನಬಹುದೇನೋ, ಅಂತ ಮುದುಕಿ ಕಡೆ ಅಂಜುತ್ತ ಅಳುಕುತ್ತ ಭರಮ್ಯ ನೋಡುತ್ತಿರಲು ಅದು ವಡೀ ಅಂದ್ರ ಯಿಂಗೆ ವಡ್ಯೋದ್ದೇನೋ ನಿನ್ನ ಕಾಲು ಸ್ಯೇದೋಗ ಕಾಲಾಗವುಳ ಬೀಳ... ಅಯ್ಯೋ ನನ್ನ ಸ್ವಸೇಗೆ ವಟ್ಟೆಗೆಲ್ಲಿ ವಡ್ತ ಬಿತ್ತೋ ಸಿವ್ನೆ"[೬] ಎಂಬುದನ್ನು ಈ ಮಾತುಗಳಲ್ಲಿ ಸೂಚಿಸಿದ್ದಾರೆ. ದಲಿತರ ಕೇರಿಯ ಬೇವಿನ ಮರವು ಮಂಪು ದಲಿತರ ದೇವರೇ ಆಗಿತ್ತು. ಅಂಥ ಬೇವಿನ ಮರವನ್ನು ಕಡಿಯಲು ಬಂದಾಗ ಕ್ರೂರ ಪ್ರಬಲ ವ್ಯವಸ್ಥೆಯ ವಿರುದ್ಧ ಸಂಘಟಿತರಾಗಿ ಹೋರಾಟ ಮಾಡುವ ತಂತ್ರಗಾರಿಕೆ ತುಂಬ ಸೊಗಸಾಗಿ ಚಿತ್ರಣಗೊಂಡಿದೆ.

ಜಾನಪದೀಯ ಭಾಷೆಗೆ ಶೃಂಗಾರದ ಸೋಗಿಲ್ಲದಿದ್ದರೂ ಎಲ್ಲಾ ಭಾವಗಳನ್ನು ತನ್ನ ತೆಕ್ಕೆಗೆ ತೆಗೆದುಕೊಳ್ಳುವ ಗುಣವಿದೆ. ಇದನ್ನು ಕುಂವೀ ಕಥೆಗಳ ಭಾಷೆಗೆ ಅನ್ವಯಿಸಬಹುದು. ಜನ್ಮತಾ ಒಲಿದಿರುವ ಕಥೆ ಏಣೆಯುವ ತಂತ್ರಕ್ಕೆ ಪ್ರಾದೇಶಿಕ ಭಾಷೆಯನ್ನು ಸಮರ್ಥವಾಗಿ ಕುಂವೀ ಬಳಸಿಕೊಳ್ಳುತ್ತಾರೆ.

ಪ್ರಾದೇಶಿಕ ಭಾಷೆಯ ಬಳಕೆ ಸಾಹಿತ್ಯದ ಸಮೋಹನಕ್ಕೆ ತೊಡಕು ಎಂಬ ಅಪವಾದಗಳ ನಡುವೆಯೂ ಸಹೃದಯರನ್ನು ಇವರ ಬರವಣಿಗೆ ಆಕರ್ಷಿಸುತ್ತದೆ. ಇಲ್ಲಿ ಅವರ ಪ್ರಾದೇಶಿಕ ಭಾಷೆಯ ಬಳಕೆ ತೊಡಕಾಗದೆ ಅವರ ಕೃತಿಗಳನ್ನು ವಿಭಿನ್ನ ನೆಲೆಯಲ್ಲಿ ನೋಡುವುದಕ್ಕೆ ಪ್ರೇರೇಪಿಸುತ್ತದೆ ಎಂಬುದು ಗಮನಾರ್ಹ ವಿಚಾರ ಎನ್ನಬಹುದು.

ಉದ್ದೇಶ. ಶೋಷಿತರಲ್ಲಿ ಪ್ರತಿಭಟನಾ ಮನೋಭಾವ, ಜಾಗೃತಿ ಮೂಡಿಸುವ ಪ್ರಯತ್ನ. ತನ್ನಲ್ಲಿ ಕಲ್ಪನೆಯ ಕಸುವನ್ನು ಹೊರಹಾಕುವ ತುರ್ತು. ಅವರಲ್ಲಿ ಕಥೆಗಳ ವಸ್ತು ಅವರ ಜೀವನದ ಅನುಭವದ ಬಿಡಿ ಬಿಡಿ ತುಣುಕುಗಳು.

ಅವುಗಳಿಗೆ ಕಲ್ಪನೆಯ ರೆಕ್ಕೆ ಕಟ್ಟಿ ಸಶಕ್ತವಾಗಿಸುವ ತಂತ್ರಗಾರಿಕೆ ಅವರಿಗೆ ಜನ್ಮತಾ ಒಲಿದಿದೆ. ಸಿ.ಎನ್. ರಾಮಚಂದ್ರನ್ ಅವರು ಕುಂವೀ ಅವರ ಕಥನ ಶೈಲಿ, ಧಾಟಿ, ಧೋರಣೆಗಳನ್ನು "ಮ್ಯಾಜಿಕ್ ರಿಯಲಿಸಂ" ಎಂದು ಪ್ರಸಿದ್ಧವಾಗಿರುವ ಕಥನ ಕ್ರಮಕ್ಕೆ ಅನ್ವಯಿಸುತ್ತಾರೆ.**

ಅಡಿ ಟಿಪ್ಪಣಿ

* ... ಮಣ್ಣೆ ಮೊದಲು ಕುಂ. ವೀರಭದ್ರಪ್ಪ ಕ್ರೈಸ್ತ, ಕಾಲೇಜು, ಕನ್ನಡ ಸಂಘ, ಬೆಂಗಳೂರು (೨೦೦೭) ಮುನ್ನುಡಿ -

೧. ... ಮಣ್ಣೆ ಮೊದಲು ಕುಂ. ವೀರಭದ್ರಪ್ಪ ಕ್ರೈಸ್ತ, ಕಾಲೇಜು, ಕನ್ನಡ ಸಂಘ, ಬೆಂಗಳೂರು (೨೦೦೭) - ಪುಟ ಸಂಖ್ಯೆ ೬೯

೨. ... ಮಣ್ಣೆ ಮೊದಲು ಕುಂ. ವೀರಭದ್ರಪ್ಪ ಕ್ರೈಸ್ತ, ಕಾಲೇಜು, ಕನ್ನಡ ಸಂಘ, ಬೆಂಗಳೂರು (೨೦೦೭) - ಪುಟ ಸಂಖ್ಯೆ ೭೦

೩. ... ಮಣ್ಣೆ ಮೊದಲು ಕುಂ. ವೀರಭದ್ರಪ್ಪ ಕ್ರೈಸ್ತ, ಕಾಲೇಜು, ಕನ್ನಡ ಸಂಘ, ಬೆಂಗಳೂರು (೨೦೦೭) - ಪುಟ ಸಂಖ್ಯೆ ೫೮

೪. ... ಮಣ್ಣೆ ಮೊದಲು ಕುಂ. ವೀರಭದ್ರಪ್ಪ ಕ್ರೈಸ್ತ, ಕಾಲೇಜು, ಕನ್ನಡ ಸಂಘ, ಬೆಂಗಳೂರು (೨೦೦೭) - ಪುಟ ಸಂಖ್ಯೆ ೬೦

೫. ... ಮಣ್ಣೆ ಮೊದಲು ಕುಂ. ವೀರಭದ್ರಪ್ಪ ಕ್ರೈಸ್ತ, ಕಾಲೇಜು, ಕನ್ನಡ ಸಂಘ, ಬೆಂಗಳೂರು (೨೦೦೭) - ಪುಟ ಸಂಖ್ಯೆ ೬೩

೬. ಕುಂವೀ ಆಯ್ದ ಕಥೆಗಳು, ಕು. ವೀರಭದ್ರಪ್ಪ - ಪುಟ ಸಂಖ್ಯೆ ೨೮

** ಅರಮನೆ, ಕು. ವೀರಭದ್ರಪ್ಪ - ಮುನ್ನುಡಿ ಪುಟ ಸಂಖ್ಯೆ - XIV

ಉಪಸಂಹಾರ

ಆಧುನಿಕ ಕನ್ನಡ ಸಾಹಿತ್ಯದ ಸಂದರ್ಭದಲ್ಲಿ ಹಲವು ಕಾರಣಗಳಿಂದಾಗಿ ಸಣ್ಣಕಥೆ ವಿಶಿಷ್ಟವಾದ, ವಿಭಿನ್ನವಾದ ವೈಶಿಷ್ಟ್ಯ ಪೂರ್ಣವಾದ ನೆಲೆಗಳಿಂದ ಕೂಡಿದ ಪ್ರಮುಖ ಸಾಹಿತ್ಯ ಪ್ರಕಾರವಾಗಿ ಬೆಳೆದುನಿಂತಿದೆ. ನವೋದಯ, ಪ್ರಗತಿಶೀಲ, ನವ್ಯ, ನವ್ಯೋತ್ತರ ಅಥವಾ ದಲಿತ ಬಂಡಾಯ ಎಂಬ ಎಲ್ಲಾ ಮಜಲುಗಳಲ್ಲಿಯೂ ತಮ್ಮದೇ ಆದ ಛಾಪನ್ನು ಮೂಡಿಸುತ್ತಾ ಬಂದಿದೆ.

ಈ ಎಲ್ಲಾ ಮಜಲುಗಳಲ್ಲಿಯೂ ಸಣ್ಣ ಕಥೆ ಸಾಹಿತ್ಯ ಪ್ರಕಾರವು ವಸ್ತು, ಭಾಷೆ, ತಂತ್ರ, ಧೋರಣೆ ಎಲ್ಲದರಲ್ಲೂ ಭಿನ್ನತೆಯನ್ನು ರೂಢಿಸಿಕೊಂಡಿದೆ. ಈ ಹಿನ್ನೆಲೆಯಲ್ಲಿ ಆಧುನಿಕ ಕನ್ನಡ ಸಾಹಿತ್ಯದಲ್ಲಿ ಚಳವಳಿಯೆಂದೇ ಬಿಂಬಿತವಾಗಿರುವ ದಲಿತ ಬಂಡಾಯ ಸಾಹಿತ್ಯ ಸ್ಥರದಲ್ಲಿ ಬರುವವರು ಕುಂವೀ. ಆದಾಗ್ಯೂ ದಲಿತ ಬಂಡಾಯದ ಧ್ಯೇಯೋದ್ದೇಶಗಳನ್ನು ಮೀರಿ ನಿಂತು ವಾಸ್ತವದ ಕ್ರೂರತೆಯನ್ನು ವಿಡಂಬಿಸುವ ಗುಣ ಇವರ ಬರವಣಿಗೆಗಿದೆ.

ಈ ತಲೆಮಾರಿನ ಕಥೆಗಾರರಲ್ಲಿ ನನ್ನ ಆಕರ್ಷಿಸಿದವರು ಕುಂವೀ ಅವರು. ಒಂದು ಸಣ್ಣ ಘಟನೆಯನ್ನು ತಮ್ಮ ಕಲಾತ್ಮಕ ಸಂಚಿನಿಂದ ಅದ್ಭುತ ಕತೆ ಹೆಣೆಯುವ ಅವರ ಕಲೆಗಾರಿಕೆಗೆ ಮರುಳಾಗಿ ಅವರ ಕಥೆಗಳ ಬಗ್ಗೆ ಅಧ್ಯಯನ ಮಾಡಲು ಆಯ್ಕೆಮಾಡಿಕೊಂಡೆ.

ಕುಂವೀ ಅವರ ಕಥಾಲೋಕ ಬಹಳ ವಿಶಾಲ, ಆದರೆ ನಮ್ಮ ನಿಬಂಧದ ಅಧ್ಯಯನವೂ, ಸೀಮಿತ ಚೌಕಟ್ಟು ಹೊಂದಿರುವ ಕಾರಣ ಕುಂವೀ ಅವರ 'ಆಯ್ದ ಕಥೆಗಳು', '...ಮಣ್ಣೇಮೊದಲು' ಮತ್ತು 'ಕೂಳೆ' ಎಂಬ ಮೂರು ಕಥಾಸಂಕಲನಗಳನ್ನು ಆಧರಿಸಿ ಕುಂವೀ ಅವರ ಕಥೆಗಳಲ್ಲಿ ವಸ್ತು ಮತ್ತು ಉದ್ದೇಶ ಎಂಬ ಶೀರ್ಷಿಕೆಯನ್ನು ಆಯ್ಕೆ ಮಾಡಿಕೊಂಡು ಅಧ್ಯಯನ ಮಾಡಿರುತ್ತೇನೆ.

ಕುಂವೀ ಕಥೆಗಳ ವಸ್ತುವೂ ಬಾಹುಳ್ಯ - ವಿಭಿನ್ನ, ಒಮ್ಮೊಮ್ಮೆ ವಿಚಿತ್ರ. ಕಥಾವೈವಿಧ್ಯ, ವಾಸ್ತವ ಬದುಕಿನ ಕೆಳವರ್ಗದವರ ಸಮಸ್ಯೆಗೆ ಸ್ಪಂದಿಸುವ ಮತ್ತು ಅದರ ಪ್ರತಿಭಟನೆಯನ್ನು ಅವರು ಕಥೆಗಳಲ್ಲಿ ಸೆರೆ, ಹಿಡಿಯುವ ಕೆಲಸ ಮಾಡುತ್ತಾರೆ. ಈ ನಿಬಂಧದ ಮೊದಲ ಅಧ್ಯಾಯ ಉದ್ದೇಶ ಮತ್ತು ವ್ಯಾಪ್ತಿಯಲ್ಲಿ ಇದರ ಬಗ್ಗೆ ವಿವರಣೆ ನೀಡಲಾಗಿದೆ.

ಬರಹಗಾರನೊಬ್ಬನಿಗೆ ಬರವಣಿಗೆ ಬೇಕಾದ ಸಾಮಗ್ರಿ ಸಿಗುವುದು ಆತನ ಜೀವನಾನುಭವಗಳ ಮೂಲಕವೇ ಆಗಿದೆ. ಹಾಗಾಗಿ ಲೇಖಕರ ಜೀವನ ಮತ್ತು ಸಾಧನೆಯ ವಿವರವನ್ನು ಕುರಿತು ತಿಳಿದುಕೊಳ್ಳಬೇಕು. ಕುಂವೀ ಅವರು ಬೆಳೆದ ಪರಿಸರ, ಪ್ರಭಾವವನ್ನು, ಅವರ ಸಾಹಿತ್ಯಿಕ ಬರವಣಿಗೆಯ ವಿವರವನ್ನು ಎರಡನೇ ಅಧ್ಯಾಯ ಕಂವೀ ಅವರ ಪರಿಚಯದಲ್ಲಿ ನೀಡಲಾಗಿದೆ.

ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ವಿವಿಧ ಹಂತಗಳಲ್ಲಿ ಬೇರೆ ಬೇರೆ ಸಾಹಿತ್ಯ ಪ್ರಕಾರಗಳು ಹುಟ್ಟಿ ಬೆಳೆದು ಬಂದಿವೆ. ಹಾಗಾಗಿ ಕನ್ನಡ ಸಣ್ಣಕಥಾ ಸಾಹಿತ್ಯ ಬೆಳೆದು ಬಂದ ಹಾದಿಯನ್ನು ತಿಳಿಸುವುದಕ್ಕಾಗಿ ಕನ್ನಡ ಸಣ್ಣ ಕಥೆಗಳ ಉಗಮ ಬೆಳವಣಿಗೆ ಎಂಬ ಶೀರ್ಷಿಕೆಯಡಿಯಲ್ಲಿ ಮೂರನೇ ಅಧ್ಯಾಯದಲ್ಲಿ ತಿಳಿಸಲಾಗಿದೆ.

ಕುಂವೀ ಅವರ ಆಯ್ದ ಕಥೆಗಳು, ಮಣ್ಣೇಮೊದಲು, ಕೂಳೆ ಎಂಬ ಕಥಾಸಂಕಲನಗಳನ್ನು ಆಯ್ಕೆ ಮಾಡಿಕೊಂಡು ಅಲ್ಲಿನ ಕಥೆಗಳನ್ನು ವ್ಯಕ್ತಿಚಿತ್ರ ಪ್ರಧಾನ ಕಥೆಗಳು, ಜಾತಿ ವರ್ಗ ಸಂಘರ್ಷ ಚಿತ್ರಿತ ಕಥೆಗಳು, ಸ್ತ್ರೀ ಪ್ರಧಾನ ಕಥೆಗಳು ಮತ್ತು ಇತರ ಕಥೆಗಳೆಂದು ವಿಭಾಗಿಸಿಕೊಂಡು, ಕುಂವೀ ಕಥೆಗಳ ವಸ್ತು ವೈವಿಧ್ಯ ಎಂಬ ನಾಲ್ಕನೇ ಅಧ್ಯಾಯದಲ್ಲಿ ನವಿವರವಾಗಿ ನಿರೂಪಿಸಲಾಗಿದೆ.

ಯಾವುದೇ ಒಬ್ಬ ಲೇಖಕನಿಗೆ ಒಂದು ಕೃತಿ ರಚಿಸಬೇಕಾದರೆ ಅವರ ಹಿಂದೆ ತನ್ನದೇ ಆದ ಧೋರಣೆ ಹೊಂದಿರುತ್ತಾನೆ. ಆ ಧೋರಣೆಗೆ ಅನುಗುಣವಾದ ವಸ್ತುವನ್ನು ತನ್ನ ಸುತ್ತಲಿನ

ಸಮಾಜದಲ್ಲಿಯೇ ಆಯ್ಕೆ ಮಾಡಿಕೊಂಡು ಸೂಕ್ತ ಭಾಷೆಯನ್ನು ಅಳವಡಿಸಿಕೊಂಡು ಕಲಾತ್ಮಕವಾಗಿ ಕಥೆ ಎಣೆಯುತ್ತಾನೆ.

ಅವರ ಪ್ರಾದೇಶಿಕ ಭಾಷೆಯ ಸಶಕ್ತ ಬಳಕೆ, ಜನಪದೀಯ ಶೈಲಿ, ಕಥೆಯ ಹಿಂದಿನ ಉದ್ದೇಶದ ಸಾಫಲ್ಯ ಮೊದಲಾದ ವಿವರಗಳನ್ನು ಕುಂವೀ ಅವರ ಆಯ್ದ ಕಥೆಗಳ ಧ್ಯೇಯ ಧೋರಣೆಗಳು ಎಂಬ ಶೀರ್ಷಿಕೆಯಡಿಯಲ್ಲಿ ಅಧ್ಯಾಯ ನಾಲ್ಕರಲ್ಲಿ ವಿವರಿಸಲಾಗಿದೆ.

ಈ ನಿಬಂಧ ರಚನೆಯ ಒಟ್ಟು ಫಲಿತಗಳನ್ನು ಅಧ್ಯಾಯ ಆರರಲ್ಲಿ ಉಪಸಂಹಾರ ಎಂಬಲ್ಲಿ ನೀಡಲಾಗಿದೆ. ನಿಬಂಧದ ಕೊನೆಯ ಅನುಬಂಧದಲ್ಲಿ ನಿಬಂಧದ ಬರವಣಿಗೆಗೆ ಪೂರಕವಾಗಿ ಬಳಸಿಕೊಳ್ಳಲಾದ ಗ್ರಂಥಗಳ ಮಾಹಿತಿಯನ್ನು ನೀಡಲಾಗಿದೆ.

ಬರಡು ಸೀಮೆ ಬಳ್ಳಾರಿಯಲ್ಲಿ ಹುಟ್ಟಿ ಬೆಳೆದು ಕ್ರೌರ್ಯವೇ ಮೂರ್ತಿವೆತ್ತಂತಿದ್ದ ರಾಯಲಸೀಮೆಯಲ್ಲಿ ನೆಲೆನಿಂತು ಕನ್ನಡ ಕಥಾ ಸಾಹಿತ್ಯ ಪ್ರವೇಶಿಸಿದವರು ಕುಂವೀ ಶೋಷಿತರ ದನಿಯಾಗಿ ಅವರ ಬದುಕಿನ ವಿವಿಧ ಮಗ್ಗಲುಗಳನ್ನು ಮತ್ತು ಅವರ ಪ್ರತಿಭಟನೆಯ ವಿವಿಧ ಮಜಲುಗಳನ್ನು ತಮ್ಮ ಕಥೆಗಳಲ್ಲಿ ಅನಾವರಣ ಮಾಡುತ್ತಾರೆ.

ಗ್ರಂಥಋಣ

೧ ಕೀರ್ತಿನಾಥ ಕುರ್ತಕೋಟಿ, ಯುಗಧರ್ಮ ಮತ್ತು ಸಾಹಿತ್ಯ ದರ್ಶನ; ಮನೋಹರ ಗ್ರಂಥಮಾಲೆ, ಧಾರವಾಡ ೧೯೯೦

೨ ಎಲ್.ಎಸ್. ಶೇಷಗಿರಿರಾಯರು, ಹೊಸಗನ್ನಡ ಸಾಹಿತ್ಯ ಚರಿತ್ರೆ; ಅಂಕಿತ ಪುಸ್ತಕ, ಬೆಂಗಳೂರು, ೨೦೦೭

೩ ಕುಂ. ವೀರಭದ್ರಪ್ಪ, ಆಯ್ದ ಕಥೆಗಳು; ಸಂವಹನ ಪ್ರಕಾಶನ, ಮೈಸೂರು, ೧೯೯೯

೪ ಕುಂ. ವೀರಭದ್ರಪ್ಪ, ಮಣ್ಣೇ ಮೊದಲು; ಕ್ರೈಸ್ತ ಕಾಲೇಜು, ಕನ್ನಡ ಸಂಘ, ಬೆಂಗಳೂರು, ೨೦೦೭

೫ ಕುಂ. ವೀರಭದ್ರಪ್ಪ, ಕೂಳೆ; ಸುಮುಖ ಪ್ರಕಾಶನ, ಬೆಂಗಳೂರು, ೨೦೦೭

೬ ಕುಂ. ವೀರಭದ್ರಪ್ಪ, ಬರಿಕಥೆಯಲ್ಲೋ ಅಣ್ಣಾ; ೨೦೦೪

೭ ಕುಂ. ವೀರಭದ್ರಪ್ಪ, ರಾಯಲಸೀಮೆ; ಅಂಕಿತ ಪುಸ್ತಕ, ಬೆಂಗಳೂರು, ೨೦೦೮

೮ ಕುಂ. ವೀರಭದ್ರಪ್ಪ, ಅರಮನೆ;